ಬಿಜಾಳ್, ನಾಗರಾಜ ಶೆಟ್ಟರ್, ಅನಂತ್ ಉಪಸ್ಥಿತರಿದ್ದರು. ಸುಮಾರು 25,000 ಬೀಜದುಂಡೆಗಳನ್ನು ತಯಾರಿ
ದರು. ಸುಮಾರು 250 ವಿದ್ಯಾರ್ಥಿಗಳು ಮತ್ತು ಕಾಲೇಜಿನ ಅಧ್ಯಾಪಕ, ಅಧ್ಯಾಪಕೇತರ ವೃಂದದವರು ಪಾಲ್ಗೊಂಡಿದ್ದರು.

ರಾ.ಸೇ.ಯೋ. ಕಾರ್ಯಕ್ರಮ ಅಧಿಕಾರಿಗಳು

ಶ್ರೀ ರವಿಕುಮಾರ್ ಆರ್.
(ಘಟಕ-1ರ ಅಧಿಕಾರಿ)

ಡಾ. ವಿದ್ಯಾಶಂಕರ.ಎಂ.ಹೆಚ್.
(ಘಟಕ-2ರ ಅಧಿಕಾರಿ)



# ಯುವ ರೆಡ್‌ಕ್ರಾಸ್ ವರದಿ

## 2017–18

ಯುವ ರೆಡ್ ಕ್ರಾಸ್ ಘಟಕವು ಒಂದು ಸ್ವಯಂ ಸೇವಾ ಸಂಸ್ಥೆಯಾಗಿದ್ದು ವಿದ್ಯಾರ್ಥಿಗಳಲ್ಲಿ ಜಾತಿ- ಮತ ಮೇಲು-ಕೀಳು ಭಾವನೆಗಳನ್ನು ತೊರೆದು ಎಲ್ಲರಲ್ಲಿ ಸಮಾನತೆಯನ್ನು ಕಾಪಾಡಿಕೊಂಡು ಬರುವುದರೊಂದಿಗೆ ಸೌಹಾರ್ದತೆಯಿಂದ ವರ್ತಿಸಲು ಸೇವಾ ಮನೋಭಾವನೆಯನ್ನು ಬೆಳೆಸಲು ಹಾಗೂ ಕಷ್ಟದಲ್ಲಿರುವವರಿಗೆ ಸಹಾಯ ಮಾಡುವುದು. ಹಲವಾರು ತೊಂದರೆಗಳಿಂದ ಬಳಲುತ್ತಿರುವವರಿಗೆ ಸಹಾಯಹಸ್ತ ನೀಡುವುದು (ಬರಪೀಡಿತರು, ನೆರೆಹಾವಳಿಯಿಂದ ಪೀಡಿತರಾದವರು: ಇತ್ಯಾದಿ) ಹಾಗೆಯೇ ರಕ್ತದಾನ, ನೇತ್ರದಾನ ಮೊದಲಾದವುಗಳ ಬಗ್ಗೆ ಅರಿವು ಮೂಡಿಸುವುದು. ಇತ್ಯಾದಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದರೊಂದಿಗೆ ವಿದ್ಯಾರ್ಥಿಗಳು ಸ್ವಯಂ ಸೇವಕರಾಗಿ ಸೇವೆಯನ್ನು ಮಾಡುವುದು ಈ ಘಟಕದ ಉದ್ದೇಶವಾಗಿದೆ. ಇದೇ ಉದ್ದೇಶಗಳನ್ನಿಟ್ಟುಕೊಂಡು ನಮ್ಮ ಕಾಲೇಜಿನ ವಿದ್ಯಾರ್ಥಿಗಳೆಲ್ಲರೂ ಸರ್ಕಾರದ ಆದೇಶದ ಮೇರೆಗೆ ಯುವ ರೆಡ್ ಕ್ರಾಸ್ ಘಟಕದ ಸದಸ್ಯರಾಗಿದ್ದು, ಈ ಘಟಕವು ನಡೆಸುತ್ತಿರುವ ಎಲ್ಲಾ ಕಾರ್ಯಕ್ರಮಗಳಲ್ಲಿಯೂ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದು ಕಾರ್ಯಕ್ರಮವನ್ನು ಯಶಸ್ವಿಗೊಳಿಸುತ್ತಿದ್ದಾರೆ.

*2017–18 ನೇ ಸಾಲಿಗೆ ಯುವ ರೆಡ್ ಕ್ರಾಸ್ ಘಟಕದ ಕಾರ್ಯಕ್ರಮಗಳ ರೂಪುರೇಷೆಗಳನ್ನು ಸಿದ್ಧಪಡಿಸುವುದಕ್ಕಾಗಿ ಈ ಕೆಳಕಂಡಂತೆ ಸಮಿತಿಯನ್ನು ರಚಿಸಿಕೊಳ್ಳಲಾಯಿತು.*

| | | |
|---|---|---|
| ಡಾ. ಕೆ.ಆರ್ ಶಶಿರೇಖಾ | – | ಅಧ್ಯಕ್ಷರು (ಪ್ರಾಚಾರ್ಯರು) |
| ಡಾ. ಡೈಸಿ ಜಾಸ್ಮಿನ್ ಜಾರ್ಜ್ | – | ಸಂಯೋಜನಾಧಿಕಾರಿಗಳು |
| ಡಾ. ಆಶಾಶ್ರೀ ಹೆಚ್ ಎಂ | – | ಸಹ ಸಂಚಾಲಕರು |
| ಡಾ ರಮೇಶ್ ಬಾಬು | – | ಸದಸ್ಯರು (IQAC) |
| ಪ್ರೊ. ಮೋಹನೇಶ್ | – | ಸದಸ್ಯರು (NCC) |
| ಡಾ. ವಿದ್ಯಾಶಂಕರ್ | – | ಸದಸ್ಯರು (NSS) |
| ಪ್ರೊ. ಸಾಯೀಶ್ವರ್ | – | ಸದಸ್ಯರು (NSS) |
| ಪ್ರೊ. ಶ್ರೀಕಂಠ | – | ಸದಸ್ಯರು (ರೇಂಜರ್ಸ್ & ರೋವರ್ಸ್) |
| ಡಾ. ಪವಿತ್ರ | – | ಸದಸ್ಯರು (ರೇಂಜರ್ಸ್ & ರೋವರ್ಸ್) |
| 1. ಮಂಜುನಾಥ ಎ | – | ತೃತೀಯ ಬಿ.ಸಿ.ಎ. ವಿದ್ಯಾರ್ಥಿ ಕಾರ್ಯದರ್ಶಿ |
| 2. ಚೈತ್ರ ಹೆಚ್.ಎಂ. | - | ತೃತೀಯ ಬಿ.ಸ್ಸಿ. ವಿದ್ಯಾರ್ಥಿನಿ ಜಂಟಿ ಕಾರ್ಯದರ್ಶಿ |
| 3. ದಿನೇಶ್ | – | ದ್ವಿತೀಯ ಬಿ.ಎಸ್ಸಿ. ವಿದ್ಯಾರ್ಥಿ ಸದಸ್ಯರು |
| 4. ಪ್ರಿಯಾಂಕ | – | ದ್ವಿತೀಯ ಬಿ.ಎಸ್ಸಿ. ಸದಸ್ಯರು |
| 5. ಸುಮಂತ್ | – | ತೃತೀಯ ಬಿ.ಸಿ.ಎ. ಸದಸ್ಯರು |
| 6. ಸುಮ | – | ತೃತೀಯ ಬಿ.ಎಸ್ಸಿ ಸದಸ್ಯರು |
| 7. ರಮ್ಯ | – | ದ್ವಿತೀಯ ಬಿ.ಎಸ್ಸಿ ಸದಸ್ಯರು |
| 8. ಚೇತನ್ | – | ಪ್ರಥಮ ಬಿ.ಎಸ್ಸಿ ಸದಸ್ಯರು |



Scanned with OKEN Scanner

ಈ ಸಮಿತಿಯು ಅಧ್ಯಕ್ಷರ ಅನುಮತಿಯ ಮೇರೆಗೆ ದಿನಾಂಕ: 31:08:2017 ರಂದು ಯುವ ರೆಡ್ ಕ್ರಾ ಘಟಕದ ಉದ್ಘಾಟನಾ ಸಮಾರಂಭದೊಂದಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಯಿ ಕಾಲೇಜಿನ ಬಹುತೇಕ ವಿದ್ಯಾರ್ಥಿ/ವಿದ್ಯಾರ್ಥಿನಿಯರು, ಅಧ್ಯಾಪಕ ವರ್ಗದವರು ಹಾಗೂ ಅಧ್ಯಾಪಕೇತರ ವರ್ಗದವ ಇದರ ಪ್ರಯೋಜನವನ್ನು ಪಡೆದುಕೊಂಡರು.

ದಿನಾಂಕ: 05/01/2018 ರಂದು ಯುವ ರೆಡ್ ಕ್ರಾಸ್ ಘಟಕ, ಎನ್.ಎಸ್.ಎಸ್. ರೇಂಜರ್ಸ್ & ರೋವ ಸಹಯೋಗದೊಂದಿಗೆ ರಕ್ತದಾನ ಶಿಬಿರವನ್ನು ನಡೆಸಲಾಯಿತು. ಈ ಶಿಬಿರದಲ್ಲಿ ನಮ್ಮ ವಿಶ್ವವಿದ್ಯಾನಿಲಯದ ಮಾ ಕುಲಪತಿಗಳು, ಕುಲಸಚಿವರು ಭಾಗವಹಿಸಿದ್ದು, ಸುಮಾರು 250 ಕ್ಕೂ ಹೆಚ್ಚು ವಿದ್ಯಾರ್ಥಿ/ವಿದ್ಯಾರ್ಥಿನಿಯ ರಕ್ತದಾನ ಮಾಡುವುದರ ಮೂಲಕ ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಿತು.

ದಿನಾಂಕ: 20-03-2018 ರಂದು ಶ್ರೀ ಹುಲಿಕಲ್ ನಟರಾಜ್, ಮಿರಾಕಲ್ ಸಂಶೋಧನಾ ಸಂಸ್ಥೆ ( ದೊಡ್ಡಬಳ್ಳಾಪುರ- ಇವರಿಂದ ವಿದ್ಯಾರ್ಥಿಗಳಲ್ಲಿನ ಮೂಢನಂಬಿಕೆಗಳನ್ನು ಹೋಗಲಾಡಿಸುವ ಸಲುವಾಗಿ ಪವಾಡಗಳು ನಂಬಿಕೆ-ವೈಜ್ಞಾನಿಕತೆ-ಅರಿವು ಕಾರ್ಯಕ್ರಮವನ್ನು ನಡೆಸಲಾಯಿತು. ಇದು ವಿದ್ಯಾರ್ಥಿಗಳ ಮನೋವಿಕಾಸಕ್ಕೆ ಹಾಗ ಅವರ ಅನುಮಾನಗಳಿಗೆ ಪರಿಹಾರವನ್ನು ಕಂಡುಕೊಳ್ಳಲು ಅನುಕೂಲವಾಯಿತು. ಅಧ್ಯಕ್ಷೀಯ ಭಾಷಣದ ಪ್ರಾಚಾರ್ಯರು ವಿಜ್ಞಾನದ ವಿದ್ಯಾರ್ಥಿಗಳು ವೈಜ್ಞಾನಿಕ ಮನೋದೃಷ್ಟಿಯುಳ್ಳವರಾಗಿ ಸಮಾಜಕ್ಕೆ ಸಹಾಯಹಸ್ತವನ್ನ ನೀಡುವುದರ ಮೂಲಕ ಮಾದರಿಯಾಗಿರಬೇಕೆಂದು ಎಚ್ಚರಿಸಿದರು.

ಹೀಗೆ ನಮ್ಮ ಕಾಲೇಜಿನ ಯುವ ರೆಡ್‌ಕ್ರಾಸ್ ಘಟಕವು ವಿದ್ಯಾರ್ಥಿಗಳಿಗೆ ಉಪಯುಕ್ತವಾಗು ಕಾರ್ಯಕ್ರಮಗಳನ್ನು ನಡೆಸಿಕೊಡುವುದರಲ್ಲಿ ಪ್ರಮುಖ ಪಾತ್ರವನ್ನು ವಹಿಸಿಕೊಂಡು ಅದನ್ನು ಯಶಸ್ವಿಯಾ ನೆರವೇರಿಸಿಕೊಂಡು ಬರುತ್ತಿರುವುದಲ್ಲದೆ ಸ್ವಯಂ ಸೇವಾ ಪ್ರವೃತ್ತಿಯನ್ನು ಬೆಳೆಸಿಕೊಳ್ಳಲು ಹಾಗೂ ಅವರ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸುತ್ತಾ ಬಂದಿದೆ.

**-ಡಾ. ಡೈಸಿ ಜಾಸ್ಮಿನ್ ಜಾರ್ಜ್**
ಕಾರ್ಯಕ್ರಮಾಧಿಕಾರಿಗಳ
ಯುವ ರೆಡ್ ಕ್ರಾಸ್ ಘಟ



# ರೋವರ್ಸ್ ಮತ್ತು ರೇಂಜರ್ಸ್ ಘಟಕದ 2017–18ನೇ ಸಾಲಿನ ವಾರ್ಷಿಕ ವರದಿ.

ನಮ್ಮ ಕಾಲೇಜಿನಲ್ಲಿ ರೋವರ್ಸ್ ಮತ್ತು ರೇಂಜರ್ಸ್ ಘಟಕದಲ್ಲಿ 24 ವಿದ್ಯಾರ್ಥಿಗಳು ಶಿವಪ್ಪನಾಯಕ ರೋವರ್ ಕ್ರ್ಯೂ ಹಾಗೂ 24 ವಿದ್ಯಾರ್ಥಿನಿಯರ ರಾಣಿ ಚೆನ್ನಮ್ಮ ರೇಂಜರ್ ಕ್ರ್ಯೂ ಎಂದು ಎರಡು ರೋವರ್ಸ್ & ರೇಂಜರ್ಸ್ ಘಟಕಗಳು ಕಾರ್ಯ ಚಟುವಟಿಕೆ ನಡೆಸುತ್ತಿವೆ. ಮುಖ್ಯವಾಗಿ

- ಸ್ವಾತಂತ್ರ್ಯ ದಿನಾಚರಣೆ
- ಗಣರಾಜ್ಯೋತ್ಸವ ದಿನಾಚರಣೆ, ನಮ್ಮ ರೋವರ್ಸ್ ಮತ್ತು ರೇಂಜರ್ಸ್‌ಗಳು ಭಾಗವಹಿಸಿದ್ದರು.
- ಶ್ರವಣ ಬೆಳಗೊಳದಲ್ಲಿ ಸೇವಾರ್ಥಿಗಳಾಗಿ ಭಾಗವಹಿಸಿದ್ದರು.
- ಮಂಗಳೂರಿನ ಮೂಚ್‌ನಲ್ಲಿ 4 ರೋವರ್ಸ್ ರೇಂಜರ್ಸ್‌ಗಳು ಭಾಗವಹಿಸಿದ್ದರು

ಹೀಗೆ ಅನೇಕ ಸ್ಕೌಟ್ ಮತ್ತು ಗೈಡ್ ಕಾರ್ಯಕ್ರಮದಲ್ಲಿ ಭಾಗಿಯಾಗಿ ಜಿಲ್ಲಾ ಮಟ್ಟದಲ್ಲಿ ನಡೆಯುವ ನಿಪುಣ್ ಪುರಸ್ಕಾರದಲ್ಲಿ ಪರೀಕ್ಷೆಯಲ್ಲಿ ನಮ್ಮ ವಿದ್ಯಾರ್ಥಿಗಳು ದೊಡ್ಡಸಂಖ್ಯೆಯಲ್ಲಿ ಉತ್ತೀರ್ಣರಾಗಿದ್ದಾರೆ. ಮಲೆಶಂಕರಕ್ಕೆ ಸುಮಾರು 30ವಿದ್ಯಾರ್ಥಿಗಳು ಟ್ರೆಕ್ಕಿಂಗ್ ಹೋಗಿದ್ದ ಸಂದರ್ಭದಲ್ಲಿ ಹಗ್ಗವನ್ನು ಉಪಯೋಗಿಸಿ, ಬೆಟ್ಟವೇರುವ ಕಲೆಯನ್ನು ತಿಳಿದುಕೊಂಡರು, ಹಾಗಿ ಆರ್ಚರಿ, ಶೂಟಿಂಗ್ ಗಳ ತರಬೇತಿಯನ್ನು ನೀಡಲಾಯಿತು.

ಇದಲ್ಲದೆ ವೈಯಕ್ತಿಕ ಸಾಧನೆಯಲ್ಲಿ ಚಂದನ ಎಂಬ ರೇಂಜರ್ ರಾಜ್ಯಪುರಸ್ಕಾರ ಗಳಿಸಿ ಕಾಲೇಜಿಗೆ ಕೀರ್ತಿ ತಂದಿದ್ದಾಳೆ, ಚೇತನ್, ನರೇಂದ್ರ ಹಾಗೂ ದಯಾನ ಅನೇಕ ಸೇವಾ ಕಾರ್ಯಗಳಲ್ಲಿ ಭಾಗವಹಿಸಿ ಉತ್ತಮ ಕಾರ್ಯಕ್ಕಾಗಿ ಪ್ರಶಂಸೆಯನ್ನು ಗಳಿಸಿರುತ್ತಾರೆ. ಹಾಗೂ ಸ್ಕೌಟ್ ಭವನದಲ್ಲಿ ಗಾಂಧಿಜಯಂತಿ/ಲಾಲ್‌ಬಹದ್ದೂರ್ ಶಾಸ್ತ್ರಿ ಜಯಂತಿಯಲ್ಲಿ ಪಾಲ್ಗೊಂಡು, ತಾಲೂಕು ಮಟ್ಟದ ಸೈಕಲಿಂಗ್, ಮ್ಯಾಪಿಂಗ್ ಮತ್ತು ಎಸ್ಟಿಮೇಷನ್ ಶಿಬಿರಗಳಲ್ಲಿ ತರಬೇತಿ ಪಡೆದಿರುತ್ತಾರೆ. ಈ ಘಟಕಗಳ ರೋವರ್ಸ್ ಸ್ಕೌಟ್ ಲೀಡರಾಗಿ ರಸಾಯಾನ ಶಾಸ್ತ್ರ ವಿಭಾಗದ ಎಸ್.ಎ. ಶ್ರೀಕಂಠದವರು ಹಾಗೂ ರೇಂಜರ್ಸ್ ಗೈಡ್ ಲೀಡರಾಗಿ ಗಣಿತ ವಿಭಾಗದ ಡಾ. ಪವಿತ್ರ ಕಾರ್ಯ ನಿರ್ವಹಿಸುತ್ತಿದ್ದಾರೆ.

**ಡಾ. ಪವಿತ್ರ**
ರೇಂಜರ್ಸ್
ಸಂಯೋಜನಾಧಿಕಾರಿ

**ಎಸ್.ಎ. ಶ್ರೀಕಂಠ**
ರೋವರ್ಸ್
ಸಂಯೋಜನಾಧಿಕಾರಿ





Scanned with OKEN Scanner

# 2017-18ನೇ ಸಾಲಿನ
# ಕ್ರೀಡಾ ವರದಿ

ಕುವೆಂಪು ವಿಶ್ವವಿದ್ಯಾಲಯ, ಸಹ್ಯಾದ್ರಿ ವಿಜ್ಞಾನ ಕಾಲೇಜು (ಸ್ವಾಯತ್ತ) ಶಿವಮೊಗ್ಗ ಇದರ ವತಿಯಿಂದ ನಡೆದ 2017-18ನೇ ಸಾಲಿನ ವಿಜ್ಞಾನ ಪರಿಷತ್ ಮತ್ತು ಕ್ರೀಡಾ ವಿಭಾಗದ ಸಮಾರೋಪ ಸಮಾರಂಭಕ್ಕೆ ಭಾಗವಹಿಸಿರುವ ತಮ್ಮೆಲ್ಲರಿಗೂ ನನ್ನ ನಮನಗಳು.

ಕಾವೇರಿಯಿಂದ ಗೋದಾವರಿ ವರಮಿರ್ದ ಕರುನಾಡೊಳ್ ಸಹ್ಯಾದ್ರಿ ತಪ್ಪಲಂ ಉಳ್ಳ ನಾಡೊಳ್ ಹಚ್ಚಹಸಿರಿನ ಮಲೆನಾಡ ತಪ್ಪಲಿನ ನಡುವೆ ಜನಿಸಿದ, ಸಹ್ಯಾದ್ರಿ ಜ್ಞಾನ ದೇಗುಲದಲ್ಲಿ ಹೊರಹೊಮ್ಮುವ ಮಕರಂದವನು ಹೊರಸೂಸುವ ಹಸುಳೆಗಳು ನಾವೆಲ್ಲ.

2017-18 ನೇ ಸಾಲಿನ ಕ್ರೀಡಾ ವಿಭಾಗದ ಪ್ರಾರಂಭಿಕ ಸಭೆಯನ್ನು ಪ್ರಾಂಶುಪಾಲರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

2017-18ನೇ ಸಾಲಿನ ಕ್ರೀಡಾವಿಭಾಗದ ಸಲಹಾ ಸಮಿತಿಯನ್ನು ಪ್ರಾಂಶುಪಾಲರ ಅಧ್ಯಕ್ಷತೆಯಲ್ಲಿ ಕರೆಯಲಾಗಿತ್ತು.

ಸಮಿತಿಯ ಸದಸ್ಯರು

| | | |
|---|---|---|
| ಪ್ರಾಂಶುಪಾಲರು | - | ಅಧ್ಯಕ್ಷರು |
| ಡಾ. ನಟರಾಜ್ | - | ಸದಸ್ಯರು |
| ಡಾ. ಸಿ.ಕೆ ರಮೇಶ್ | - | ಸದಸ್ಯರು |
| ಡಾ ಕೆ.ಪಿ. ಲತಾ | - | ಸದಸ್ಯರು |
| ಡಾ. ಶ್ರೀಕಂಠ | - | ಸದಸ್ಯರು |
| ಕೆ. ಲಕ್ಷ್ಮಣಪ್ಪ | - | ಸದಸ್ಯ ಕಾರ್ಯದರ್ಶಿ |
| ಅಂಬಿಕಾ | - | ಅಧೀಕ್ಷರು |

ಸಭೆಯ ನಿರ್ಣಯಗಳು:-

1. 2017-18 ನೇ ಸಾಲಿನ ವಿವಿಧ ಕ್ರೀಡಾ ಸ್ಪರ್ಧೆಗಳಿಗೆ ಉತ್ತೇಜನ ನೀಡುವುದು.
2. ಕುವೆಂಪು ವಿಶ್ವವಿದ್ಯಾಲಯದ ಅಂತರ ಕಾಲೇಜುಗಳ ಅಥ್ಲೇಟಿಕ್ಸ್ ಕ್ರೀಡಾಕೂಟವನ್ನು ನಡೆಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.
3. ಅಂತರ್ ವಿಶ್ವವಿದ್ಯಾಲಯ ಮಟ್ಟದಲ್ಲಿ ಸ್ಥಾನ ಗಳಿಸಿದವರಿಗೆ ಪ್ರಶಸ್ತಿ ಪ್ರದಾನ ಮಾಡುವುದಾಗಿ ತೀರ್ಮಾನಿಸಲಾಯಿತು.

ದಿನಾಂಕ 01 ಆಗಸ್ಟ್ 2017 ರಿಂದ ದಿನಾಂಕ 04 ಆಗಸ್ಟ್ 2017 ರ ವರೆಗೆ ನೆಡೆದ ಕುವೆಂಪು ವಿಶ್ವ ವಿದ್ಯಾವಿದ್ಯಾಲಯದ ಅಂತರ್ ಕಾಲೇಜುಗಳ ಚೆಸ್ ಪಂದ್ಯಾವಳಿಯಲ್ಲಿ ನಮ್ಮ ಕಾಲೇಜು ತಂಡ ಭಾಗವಹಿ ದ್ವಿತೀಯ ಸ್ಥಾನವನ್ನು ಗಳಿಸಿದೆ.

ದಿನಾಂಕ 16 ಆಗಸ್ಟ್ 2017 ಹಾಗೂ ದಿನಾಂಕ 17 ಆಗಸ್ಟ್ 2017 ರಂದು ನಡೆದ ಕುವೆಂಪು ವಿಶ್ವವಿದ್ಯಾಲಯದ ಶಟಲ್ ಬ್ಯಾಡ್ಮಿಂಟನ್ (shuttle badminton) ಪಂದ್ಯಾವಳಿಯಲ್ಲಿ ನಮ್ಮ ಕಾಲೇಜಿನ ಪರಿಸ ತಂಡವು 3 ನೇ ಸ್ಥಾನ ಪಡೆದಿರುತ್ತದೆ.



Scanned with OKEN Scanner

ದಿನಾಂಕ 01 ಸೆಪ್ಟೆಂಬರ್ 2017 ಹಾಗೂ ದಿನಾಂಕ 02 ಸೆಪ್ಟೆಂಬರ್ 2017 ರಂದು ನಡೆದ ಕುವೆಂಪು ವಿಶ್ವವಿದ್ಯಾಲಯ weight lifting ಮತ್ತು power lifting ಸ್ಪರ್ಧೆಯಲ್ಲಿ ದ್ವಿತೀಯ ಬಿ. ಎಸ್ಸಿ ವಿದ್ಯಾರ್ಥಿ ಪ್ರದೀಪ್ 62 ಕೆ.ಜಿ ವಿಭಾಗದಲ್ಲಿ ದ್ವಿತೀಯ ಸ್ಥಾನ ಪಡೆದಿರುತ್ತಾರೆ.

ದಿನಾಂಕ 27 ಸೆಪ್ಟೆಂಬರ್ 2017 ಹಾಗೂ ದಿನಾಂಕ 28 ಸೆಪ್ಟೆಂಬರ್ 2017 ರಂದು ನಡೆದ ಕುವೆಂಪು ವಿಶ್ವವಿದ್ಯಾಲಯ Judo ಸ್ಪರ್ಧೆಯಲ್ಲಿ ಸುನಿಲ್ ಬೇಂದ್ರೆ 52 ಕೆ.ಜಿ. ವಿಭಾಗದಲ್ಲಿ ದ್ವಿತೀಯ ಸ್ಥಾನ ಗಳಿಸಿರುತ್ತಾರೆ.

ದಿನಾಂಕ 03 ಅಕ್ಟೋಬರ್ 2017 ಹಾಗೂ ದಿನಾಂಕ 04 ಅಕ್ಟೋಬರ್ 2017 ರಂದು ನಡೆದ ಕುವೆಂಪು ವಿಶ್ವವಿದ್ಯಾಲಯ ಅಂತರ್ ಕಾಲೇಜು ಟೇಬಲ್ ಟೆನ್ನಿಸ್ ಪಂದ್ಯಾವಳಿಯಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿನಿಯರು ಭಾಗವಹಿಸಿರುತ್ತಾರೆ.

ದಿನಾಂಕ: 26 ಅಕ್ಟೋಬರ್ 2017 ರಿಂದ 28 ಅಕ್ಟೋಬರ್ 2017ರ ವರೆಗೆ ನಡೆದ ಕುವೆಂಪು ವಿಶ್ವವಿದ್ಯಾಲಯ Athletic ಕ್ರೀಡಾಕೂಟದಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿನಿ ಪೂಜಾ ಜಿ. ಓಂಕಾರ್ ದ್ವಿತೀಯ ಸ್ಥಾನ ಪಡೆದಿರುತ್ತಾರೆ.

ದಿನಾಂಕ 07 ಮಾರ್ಚ್ 2018 ಹಾಗೂ ದಿನಾಂಕ 08 ಮಾರ್ಚ್ 2018 ರಂದು ನಡೆದ ಕುವೆಂಪು ವಿಶ್ವವಿದ್ಯಾಲಯ ಅಂತರ್ ಕಾಲೇಜುಗಳ ಶಿವಮೊಗ್ಗ ವಲಯದ ಕ್ರಿಕೇಟ್ ಪಂದ್ಯಾವಳಿಯಲ್ಲಿ ನಮ್ಮ ಕಾಲೇಜು ಉತ್ತಮ ಪ್ರದರ್ಶನ ನೀಡಿರುತ್ತದೆ.

ಕ್ರೀಡಾ ವಿಭಾಗದ ವತಿಯಿಂದ ಏರ್ಪಡಿಸಿದ್ದ ವಿವಿಧ ಕ್ರೀಡಾ ಸ್ಪರ್ಧೆಗಳಲ್ಲಿ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಭಾಗವಹಿಸಿರುತ್ತಾರೆ ಎಂಬುದಾಗಿ ತಿಳಿಸುತ್ತಾ ಈ ಪಂದ್ಯಾವಳಿಗಳಿಗೆ ಸಹಕರಿಸಿದ ಪ್ರಾಂಶುಪಾಲರಿಗೆ, ಉಪನ್ಯಾಸಕರಿಗೆ, ವಿದ್ಯಾರ್ಥಿಗಳಿಗೆ ಕ್ರೀಡಾ ವಿಭಾಗದ ಧನ್ಯವಾದಗಳು.

– ಕೆ. ಲಕ್ಷ್ಮಣಪ್ಪ
ದೈಹಿಕ ಶಿಕ್ಷಣ ನಿರ್ದೇಶಕರು





Scanned with OKEN Scanner

# ಪ್ರತಿಭಾ ಪುರಸ್ಕಾರ 2017–2018

ಗುರುವನ್ನು ಮೀರಿ ಶಿಷ್ಯವೃಂದ ಬೆಳೆಯಲಿ. ಸಾಧನೆಗಳನ್ನು ಮಾಡಲಿ ಉತ್ತಮ ಪ್ರಜೆಯಾಗಿ ರೂಪುಗೊಳ್ಳ ಬುದ್ಧಿಮತ್ತೆಯ ಜೊತೆ ಭಾವುಕತೆಯನ್ನು ಬೆಳೆಸಿಕೊಳ್ಳಲಿ ಎಂಬ ಪ್ರಾಸ್ತಾವಿಕ ನುಡಿಯೊಂದಿಗೆ ಕಾರ್ಯಕ್ರಮ ಸಂಚಾಲಕರಾದ ಡಾ.ಅನಿತಾ ರವರು ವೇದಿಕೆಯಲ್ಲಿ ಉಪಸ್ಥಿತರಿದ್ದ ಗಣ್ಯರು ಹಾಗೂ ವಿದ್ಯಾರ್ಥಿ ಪೋಷಕರ ಸ್ವಾಗತಿಸಿದರು.

ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ತಮ್ಮತನ ವಿಶಿಷ್ಟತೆ ಮೆರೆದ ವಿದ್ಯಾರ್ಥಿಗಳನ್ನು ಗುರು ಸನ್ಮಾನಿಸುವ ಕಾರ್ಯಕ್ರಮವೇ ಈ ಪ್ರತಿಭಾ ಪುರಸ್ಕಾರ ಸಹ್ಯಾದ್ರಿ ವಿಜ್ಞಾನ ಕಾಲೇಜು ಇಂತಹ ಪ್ರತಿಭಾನ್ವಿತರ ಪುರಸ್ಕರಿಸುವ ಈ ಸತ್‌ಸಂಪ್ರದಾಯವನ್ನು ಕಳೆದ ಮೂವತ್ತು ವರ್ಷಗಳಿಂದಲೂ ನಡೆಸಿಕೊಂಡು ಬಂದಿದೆ.

ದಿನಾಂಕ:17–02–2018 ರಂದು ಸಹ್ಯಾದ್ರಿ ವಿಜ್ಞಾನ ಕಾಲೇಜಿನ ಪ್ರೊ. ಸಿ.ಎಸ್.ಆರ್. ರಾವ್ ಸಭಾಂಗಣದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ವಿಧ್ಯುಕ್ತವಾಗಿ ಗಿಡಕ್ಕೆ ನೀರನ್ನು ಹಾಕುವುದರ ಮೂಲ ಮಲೆನಾಡಿನ ಪ್ರಖ್ಯಾತ ಸಾಹಿತಿಗಳಾದ ಡಾ. ನಾ. ಡಿಸೋಜರವರು ಉದ್ಘಾಟಿಸಿದರು. ತಮ್ಮ ಗುರುಗಳನ್ನು ಸ್ಮರಿಸಿಕೊಳ್ಳ ವಿಜ್ಞಾನದ ಜೊತೆಗೆ ಸಾಹಿತ್ಯದ ಬಗ್ಗೆಯೂ ಒಲವಿದ್ದಾಗ ಮಾತ್ರ ಒಳ್ಳೆಯ ಮನುಷ್ಯನಾಗಲು ಸಾಧ್ಯ ಉತ್ತ ಸಾಹಿತ್ಯವನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕೆಂಬ ಹಿತನುಡಿಗಳನ್ನು ತಿಳಿಸಿದರು.

ವೇದಿಕೆಯನ್ನಲಂಕರಿಸಿದ ಮತ್ತೋರ್ವ ಅತಿಥಿಗಳಾದ ಪ್ರೋ.ರಾಜಾನಾಯಕ್ ಪರೀಕ್ಷಾಂಗ ಕುಲಸಚಿವ ಕುವೆಂಪು ವಿಶ್ವವಿದ್ಯಾಲಯ ಇವರು ಕಠಿಣ ಪರಿಶ್ರಮವಿದ್ದರೆ ಯಾವುದೇ ಗುರಿ ಸಾಧನೆ ಅಸಾಧ್ಯವಲ್ಲ ಎಂ ಹಿತೋಕ್ತಿಯನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಡಾ. ಕೆ.ಆರ್. ಶಶಿರೇಖಾರವ ವಿದ್ಯಾರ್ಥಿಗಳು ಸಾಮಾನ್ಯ ಜ್ಞಾನ ನಾಯಕತ್ವದ ಗುಣಗಳನ್ನು ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿಯೂ ಆ ಬೆಳೆಸಿಕೊಳ್ಳಬೇಕೆಂಬ ಸ್ಫೂರ್ತಿಯ ಮಾತುಗಳನ್ನಾಡಿದರು

ಇದೇ ಸಂದರ್ಭದಲ್ಲಿ ಕಾಲೇಜಿನ ಹಿರಿಯ ವಿದ್ಯಾರ್ಥಿ ಪ್ರೊ, ಮಹೇಶ್ವರಪ್ಪ ಕುಲಪತಿಗಳು ಕೇಂದ್ರೀ ವಿಶ್ವವಿದ್ಯಾಲಯ, ಗುಲ್ಬರ್ಗ ಇವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಕಾಲೇಜಿನ ಎಲ್ಲಾ ಅಧ್ಯಾಪಕ ಅಧ್ಯಾಪಕೇತರ ವರ್ಗ ಹಾಗೂ ಎಲ್ಲಾ ವಿದ್ಯಾರ್ಥಿಗಳು ಕಾರ್ಯಕ್ರಮದ ಪಾಲ್ಗೊಂಡು ಸಮಾರಂಭದ ಯಶಸ್ಸಿಗೆ ಕಾರಣರಾದರು.

ಈ ಕಾರ್ಯಕ್ರಮದಲ್ಲಿ ಬಿ.ಎಸ್ಸಿ, ಬಿಸಿಎ, ಬಿ.ಎಸ್ಸಿ (ಆನರ್ಸ್) ಹಾಗೂ ಬಿ.ಟಿ.ಟಿ.ಎಮ್ ಪದವಿ ವಿಷಯಗಳ ಹಾಗೂ ಪಠ್ಯೇತರ ಚಟುವಟಿಕೆಗಳಾದ ಎನ್.ಸಿ.ಸಿ., ಎನ್.ಎಸ್.ಎಸ್., ರೋವರ್ಸ್ ಹಾಗೂ ರೇಂಜರ್ಸ್, ರೆಡ್‌ಕ್ರಾ ಮತ್ತು ಕ್ರೀಡೆಯಲ್ಲಿ ಸಾಧನೆಗೈದ ವಿದ್ಯಾರ್ಥಿಗಳಿಗೆ ಕಾಲೇಜಿನ ಹಾಗೂ ವಿಶ್ವವಿದ್ಯಾಲಯದ ನಿವೃತ್ತ ಮತ್ತು ಹಾ ಅಧ್ಯಾಪಕ ಹಾಗೂ ಅಧ್ಯಾಪಕೇತರ ವರ್ಗದವರು ನೀಡುವ ನಗದು ಬಹುಮಾನ ಹಾಗೂ ಅಧ್ಯಾಪಕರ ಸಂಘ ವತಿಯಿಂದ ಪ್ರಶಸ್ತಿ ಪತ್ರ ಹಾಗೂ ಸ್ಮರಣಿಕೆಗಳನ್ನು ನೀಡಿ ಪುರಸ್ಕರಿಸಲಾಯಿತು.

ಈ ಕಾರ್ಯಕ್ರಮವನ್ನು ಆಯೋಜಿಸಲು ಸಹಕರಿಸಿದ ಎಲ್ಲರಿಗೂ ಹೃದಯ ಪೂರ್ವಕ ವಂದನೆಗಳು.

–ಡಾ. ಅನಿ
ಸಂಚಾಲಕರು, ಪ್ರತಿಭಾಪುರಸ್ಕಾ

Scanned with OKEN Scanner

# 2017-18 ನೇ ಸಾಲಿನ
# ಸಾಂಸ್ಕೃತಿಕ ಕಾರ್ಯಕ್ರಮಗಳ ವರದಿ

ಸಹ್ಯಾದ್ರಿಯ ಮಡಿಲಲ್ಲಿ ಶಿವಮೊಗ್ಗೆಯ ಅಂಗಳದಲ್ಲಿ ಕುವೆಂಪು ವಿಶ್ವ ವಿದ್ಯಾಲಯದ ಅಡಿಯಲ್ಲಿ ಪ್ರತಿಷ್ಠಾನಗೊಂಡಿರುವ ಪ್ರತಿಷ್ಠಿತ ವಿದ್ಯಾಸಂಸ್ಥೆಯಾದ ಸಹ್ಯಾದ್ರಿ ವಿಜ್ಞಾನ ಕಾಲೇಜು ತನ್ನ 75 ವಸಂತಗಳನ್ನು ಪೂರೈಸಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ವಿಷಯ. ಇಂತಹ ಸಂದರ್ಭದಲ್ಲಿ ಕಾಲೇಜಿನ ವಿದ್ಯಾರ್ಥಿಗಳು ಪ್ರಪಂಚದ ವಿವಿಧ ಕ್ಷೇತ್ರಗಳಲ್ಲಿ ತಮ್ಮ ಛಾಪನ್ನು ಮೂಡಿಸುವ ಮೂಲಕ ಕಾಲೇಜಿನ ಹಿರಿಮೆಯನ್ನು ಎತ್ತಿ ಹಿಡಿದಿದ್ದಾರೆ. ಇಂತಹ ಹಿರಿಮೆಗೆ ಮುಖ್ಯ ಕಾರಣ ಕಾಲೇಜಿನಲ್ಲಿ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳನ್ನು ಸಮತೋಲನ ದೃಷ್ಟಿಕೋನದಲ್ಲಿ ಪರಿಪಾಲಿಸುತ್ತಾ ಬಂದಿರುವುದು.

ಇಂತಹ ಪಠ್ಯೇತರ ಚಟುವಟಿಕೆಗಳಿಗೆ ಒತ್ತು ನೀಡುತ್ತಿರುವುದು ಮುಖ್ಯವಾಗಿ ಸಹ್ಯಾದ್ರಿ ಸಾಂಸ್ಕೃತಿಕ ವೇದಿಕೆ. ಈ ವೇದಿಕೆ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಿರುವುದರ ಜೊತೆಯಲ್ಲಿ ವಿದ್ಯಾರ್ಥಿಗಳನ್ನು ಹಲವು ಸ್ಪರ್ಧೆಗಳಿಗೆ ಕಳುಹಿಸುವ ಮೂಲಕ ಅವರಲ್ಲಿ ಹುಮ್ಮಸ್ಸು, ಆತ್ಮಸ್ಥೈರ್ಯ ಹಾಗೂ ನಾಯಕತ್ವ ಗುಣಗಳನ್ನು ಬೆಳೆಸುತ್ತಾ ಬಂದಿದೆ. ಪ್ರತಿ ವರ್ಷದಂತೆ ಪ್ರಸ್ತುತ 2017-18 ನೇ ಸಾಲಿನಲ್ಲಿಯೂ ನಡೆದ ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳ ವಾರ್ಷಿಕ ವರದಿಯ ಒಂದು ಪಕ್ಷಿನೋಟ ಇಲ್ಲಿದೆ.

ದಿನಾಂಕ:12-10-2018 ರಿಂದ 14-10-2018 ರವರೆಗೆ ಕುವೆಂಪು ವಿಶ್ವವಿದ್ಯಾಲಯದಲ್ಲಿ ನಡೆದ ಸಹ್ಯಾದ್ರಿ ಉತ್ಸವ-ಅಂತರಕಾಲೇಜು ಸಾಂಸ್ಕೃತಿಕ ಸ್ಪರ್ಧೆಯಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿ ಹಲವು ಸ್ಪರ್ಧೆಗಳಲ್ಲಿ ವಿಜೇತರಾಗುವ ಮೂಲಕ ಕಾಲೇಜಿಗೆ ಎರಡನೇ ಸ್ಥಾನವನ್ನು ತಂದುಕೊಟ್ಟಿರುತ್ತಾರೆ.

| | | | |
|---|---|---|---|
| ಮೇಘನಾ ಹೆಚ್.ಜಿ. | ರಂಗೋಲಿ | - | ಪ್ರಥಮ ಸ್ಥಾನ |
| ರುಚಿತ್ ಕುಮಾರ್ ಬಿ.ಸಿ | ಮಿಮಿಕ್ರಿ | - | ಪ್ರಥಮ ಸ್ಥಾನ |
| ಚೇತನ್ ಕೆ.ವಿ. | ಫೋಟೋಗ್ರಫಿ | - | ದ್ವಿತೀಯ ಸ್ಥಾನ |
| ದುಶ್ಯಂತ್ ಎಸ್ | ಭರತನಾಟ್ಯ | - | ದ್ವಿತೀಯ ಸ್ಥಾನ |
| ಮೆಲಿಷಾ | ಪಾಶ್ಚಾತ್ಯ ಸಂಗೀತ | - | ತೃತೀಯ ಸ್ಥಾನ |
| ಕುಸುಮ ಹೆಚ್.ಪಿ | ಕೊಲ್ಯಾಜ್ | - | ತೃತೀಯ ಸ್ಥಾನ |
| ಗಗನಶ್ರೀ | ಪೋಸ್ಟರ್ ಪೇಂಟಿಂಗ್ | - | ತೃತೀಯ ಸ್ಥಾನ |

ದಿನಾಂಕ:06-01-2018 ರಂದು ನಮ್ಮ ಕಾಲೇಜಿನಲ್ಲಿ ನಡೆದ ಅಂತರಕಾಲೇಜು ಪ್ರಬಂಧ ಲೇಖನ ಮತ್ತು ಚರ್ಚಾಸ್ಪರ್ಧೆಯಲ್ಲಿ ಸುಮಾರು 25 ಕ್ಕೂ ಹೆಚ್ಚು ಕಾಲೇಜುಗಳು ಭಾಗವಹಿಸಿದ್ದವು. ಇದರಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿನಿಯಾದ ಸುಮ ಎಸ್.ಆರ್ ಇವರು ಪ್ರಬಂಧ ಲೇಖನ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನವನ್ನು ಗಳಿಸಿರುತ್ತಾರೆ.

ಕನ್ನಡ-ವಿಜ್ಞಾನ ಸಮಿತಿಯು ಏರ್ಪಡಿಸಿದ್ದ ಕನ್ನಡ-ವಿಜ್ಞಾನ ಉಪನ್ಯಾಸ ಕಾರ್ಯಕ್ರಮದಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿಯಾದ ಕೇಶವ್ ವಿ.ಕೆ ಇವರು ಪ್ರಥಮ ಸ್ಥಾನವನ್ನು ಗಳಿಸಿರುತ್ತಾರೆ.

ದಿನಾಂಕ:06-10-2017 ರಂದು ನಡೆದ 63 ನೇ ವನ್ಯಜೀವಿ ಸಪ್ತಾಹ ಕಾರ್ಯಕ್ರಮದಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿಯಾದ ಮಂಜುನಾಥ ಎ ಇವರು ಪ್ರಬಂಧ ಸ್ಪರ್ಧೆಯಲ್ಲಿ ತೃತೀಯ ಹಾಗೂ ಆಶುಭಾಷಣ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನವನ್ನು ಗಳಿಸಿರುತ್ತಾರೆ.



Scanned with OKEN Scanner

ದಿನಾಂಕ:10-02-2018 ರಂದು ಸಾಗರ ಎಲ್.ಬಿ ಮತ್ತು ಎಸ್.ಬಿ.ಎಸ್. ಕಾಲೇಜಿನಲ್ಲಿ ನಡೆದ ಮಲೆನಾ ಸಿರಿ- ಅಂತರಕಾಲೇಜು ಸಾಂಸ್ಕೃತಿಕ ಸ್ಪರ್ಧೆಯಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿ ಹಲ ಬಹುಮಾನಗಳನ್ನು ಪಡೆದುಕೊಂಡಿರುತ್ತಾರೆ.

| | | |
|---|---|---|
| ದುಶ್ಯಂತ್ ಎಸ್ | ಭರತನಾಟ್ಯ | - ಪ್ರಥಮ ಸ್ಥಾನ |
| ಆರಾಧ್ಯ ಒ.ಬಿ | ಏಕಪಾತ್ರಾಭಿನಯ | - ಪ್ರಥಮ ಸ್ಥಾನ |
| ಆಕಾಶ್ | ಶಾಸ್ತ್ರೀಯ ಸಂಗೀತ | - ಪ್ರಥಮಸ್ಥಾನ |
| ರುಚಿತ್ ಕುಮಾರ್ | ಮಿಮಿಕ್ರಿ | - ದ್ವಿತೀಯ ಸ್ಥಾನ |

ಹಾಗೂ ಸುಮ ಎಸ್.ಆರ್ ಮತ್ತು ತಂಡ ಸಮೂಹ ಗಾಯನದಲ್ಲಿ ಮತ್ತು ರಾಕೇಶ್ ಹೆಚ್.ಎಸ್. ಮತ್ತು ತಂಡ ಮೂಕಾಭಿನಯ ಸ್ಪರ್ಧೆಯಲ್ಲಿ ಭಾಗವಹಿಸಿರುತ್ತಾರೆ.

ದಿನಾಂಕ:15-03-2018 ರಂದು ಸುಗಂದ ಎಲ್.ಬಿ ಮತ್ತು ಎಸ್.ಬಿ.ಎಸ್. ಕಾಲೇಜಿನಲ್ಲಿ ಏರ್ಪಡಿಸ Science Fest-2018 ವಿಜ್ಞಾನ ಕ್ವಿಜ್ ಮತ್ತು ಉಪನ್ಯಾಸ ಸ್ಪರ್ಧೆಯಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿಗಳಾದ ಸು ಎಸ್.ಆರ್, ತೇಜಸ್ವಿನಿ ಜಿ., ಕೇಶವ್ ವಿ.ಕೆ., ಮಂಜುನಾಥ ಎ., ನರೇಂದ್ರ ಹೆಚ್.ಎಸ್., ಮನೋಜ್ ಸಿ., ಮೇಘ ಆರ್., ಪವಿತ್ರ ಎಂ.ಜಿ., ಅನ್ನಪೂರ್ಣ, ಶರಣ್ಯ, ಅರ್ಪಿತ ಇವರು ಭಾಗವಹಿಸಿ ಅತ್ಯುತ್ತಮ ಪ್ರದರ್ಶನ ನೀಡಿದ್ದ ಇವರಲ್ಲಿ ಉಪನ್ಯಾಸ ಸ್ಪರ್ಧೆಯಲ್ಲಿ ಕೇಶವ್ ವಿ.ಕೆ. ಪ್ರಥಮ ಸ್ಥಾನವನ್ನು ಗಳಿಸಿ ಕಾಲೇಜಿನ ಹಿರಿಮೆಗೆ ಪಾತ್ರರಾಗಿರುತ್ತಾ

ದಿನಾಂಕ 13-03-2018 ರಂದು ಸಹ್ಯಾದ್ರಿ ಕಲಾ ಕಾಲೇಜಿನಲ್ಲಿ ನಡೆದ ಸಹ್ಯಾದ್ರಿ ಸಿರಿ-ಅಂತರಕಾಲೇ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಭಾಗವಹಿಸಿ ನಮ್ಮ ಕಾಲೇಜಿನ ವಿದ್ಯಾರ್ಥಿಯಾದ ಚೇತನ್ ಕೆ.ವಿ. ಇವರು ಫೋಟೋಗ್ರಫಿಯ ಪ್ರಥಮ ಸ್ಥಾನ ಗಳಿಸಿರುತ್ತಾರೆ.

ದಿನಾಂಕ:16-03-2018 ರಂದು ನಮ್ಮ ಕಾಲೇಜಿನ ವತಿಯಿಂದ ಸನಿಹ-2018 ಅಂತರಕಾಲೇಜು ಸಾಂಸ್ಕೃ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿತ್ತು. ಇದರಲ್ಲಿ ಸುಮಾರು ಏಳು ಕಾಲೇಜಿನ ತಂಡಗಳು ಭಾಗವಹಿಸಿದ್ದವು. ಮ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಡಲಾಯಿತು.

ಹಲವಾರು ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾಗಿ ಕಾಲೇಜಿನ ಹಿರಿಮೆಗೆ ಪಾತ್ರರಾದ ಎಲ್ಲಾ ವಿದ್ಯಾರ್ಥಿಗಳಿಗೂ ಹಾಗೂ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕಾರ ನೀಡಿದಂತಹ ಕಾಲೇಜಿನ ಆಡಳಿತ ಮಂಡಳಿ, ಅಧ್ಯಾ ಹಾಗೂ ಅಧ್ಯಾಪಕೇತರ ವೃಂದ ಹಾಗೂ ಪ್ರಾಂಶುಪಾಲರಿಗೂ ಹೃದಯ ಪೂರ್ವ ಧನ್ಯವಾದಗಳನ್ನು ಸಲ್ಲಿಸುತ್ತೇ

**ಸುಮ ಎಸ್.ಆರ್.**
ಸಾಂಸ್ಕೃತಿಕ ಪ್ರತಿನಿಧಿ

**-ಚಂದ್ರಶ**
ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಅಧಿಕಾ



Scanned with OKEN Scanner

# ಮಹಿಳಾ ಸಬಲೀಕರಣ

ವ್ಯಕ್ತಿಗಳಲ್ಲಿ ಬೌದ್ಧಿಕ, ರಾಜಕೀಯ, ಸಾಮಾಜಿಕ, ಆರ್ಥಿಕ ಬಲವನ್ನು ಹೆಚ್ಚಿಸುವುದಕ್ಕೆ ಸಬಲೀಕರಣ ಎನ್ನುವರು. ಒಬ್ಬ ವ್ಯಕ್ತಿ ತನ್ನ ವಿಷಯದಲ್ಲಿ ಎಲ್ಲಾ ರೀತಿಯ ನಿರ್ಧಾರ ತೆಗೆದುಕೊಳ್ಳುವ ಸ್ವತಂತ್ರ್ಯವನ್ನು ಹೊಂದಿರುತ್ತಾನೆ. ಆದರೆ ಈ ಧೋರಣೆಯು ಮಹಿಳೆಯರಿಗೆ ಹೊರತಾಗಿರುವಂತೆ ನಮ್ಮ ಪುರುಷ ಪ್ರಧಾನ ಸಮಾಜ ಹಲವಾರು ಮಾನದಂಡಗಳ ಬೇಲಿ ಹಾಕಿ ಕುಳಿತಿದೆ. ಆದ್ದರಿಂದಲೇ ಮಹಿಳಾ ದಿನಾಚರಣೆಯ ಸಂಭ್ರಮಗಳ ಕಾರ್ಯಕ್ರಮದಲ್ಲಿ ಮಹಿಳಾ ಸಬಲೀಕರಣ ಕೂಗು ಕೇಳಿಬರುತ್ತದೆ. ಮಹಿಳೆ ಅಬಲಳು ಎನ್ನುವ ಸೋಗಿನಡಿ ಮಹಿಳೆಯರೆಂದರೆ ಮೂಗು ಮುರಿಯುವವರೆ ಹೆಚ್ಚು. ಮಹಿಳೆಯರಲ್ಲಿ ಬೌದ್ಧಿಕ, ರಾಜಕೀಯ, ಸಾಮಾಜಿಕ, ಆರ್ಥಿಕ ಬಲವನ್ನು ಹೆಚ್ಚಿಸುವುದಕ್ಕೆ ಮಹಿಳಾ ಸಬಲೀಕರಣ ಎನ್ನುವರು.

ನಮ್ಮ ಪೂರ್ವಜರಲ್ಲಿ ಒಂದು ಹೆಣ್ಣು ಮಗಳಾಗಿ, ಸತಿಯಾಗಿ, ಸೋದರಿಯಾಗಿ, ನಾದಿನಿಯಾಗಿ,ಅತ್ತಿಗೆಯಾಗಿ ಹೀಗೆ ಸಾಂಪ್ರದಾಯಿಕವಾದ ವೈಭವೀಕರಣದಿಂದ ಇಂದು ಆಧುನಿಕರಣಗೊಂಡು ಗಗನಯಾನಿ, ಸಾಹಿತಿ, ವಿಜ್ಞಾನಿ, ಸಂಶೋಧಕಿ, ಪ್ರಧಾನಿ, ರಾಷ್ಟ್ರಪತಿ ಎಂದೆಲ್ಲಾ ತನ್ನದೇ ಆದ ಹೊಸ ವಿಳಾಸದಿಂದ ತನ್ನ ವ್ಯಕ್ತಿತ್ವದೊಂದಿಗೆ ಪ್ರಕಾಶಿಸತೊಡಗಿದ್ದಾಳೆ. ತೊಟ್ಟಿಲನ್ನು ತೂಗುವ ಕೈ ಜಗತ್ತನ್ನೇ ಆಳಬಲ್ಲದು ಎಂಬ ನಾಣ್ನುಡಿಗೆ ಇದು ಸಾಕ್ಷಿಯಾಗಿದೆ. ಅವಳಿಗೀಗ ನಮ್ಮ ಸಮುದಾಯದ ಎಲ್ಲಾ ಬಾಗಿಲುಗಳೂ ತೆರೆದು ಸ್ವಾಗತಿಸುತ್ತಿವೆ. ಸ್ತ್ರೀ ಸಮಾನತೆ ಎಂಬ ಪರಿಕಲ್ಪನೆಯು ಸ್ತ್ರೀಯರಿಗೆ ಅಸ್ತಿತ್ವ ಒದಗಿಸಿದೆ. ಬದಲಾವಣೆ ಜಗದ ನಿಯಮ, ಹಾಗೆಯೇ ಸ್ತೀ ಕೇವಲ ನಾಲ್ಕು ಗೋಡೆಯ ಅಡುಗೆ ಮನೆಯಿಂದ ಅಂತಃರಿಕ್ಷದವರೆಗೂ ಇಂದು ತನ್ನ ಪಾದ ಬೆಳೆಸಿದ್ದಾಳೆ. ಪೂರಕವಾದ ಶಿಕ್ಷಣ ಅವಳಿಗೆ ತನ್ನಲ್ಲಿಯ ಚೈತನ್ಯ ಶಕ್ತಿಯ ಅನಾವರಣಕ್ಕೆ ಹಾದಿ ಮಾಡಿ ಕೊಟ್ಟಿದೆ. ಹೆಣ್ಣಿಗೆ ನಿಸರ್ಗದತ್ತವಾದ ಮಾತೃತ್ವ ಮಾರ್ದವತೆ, ಆರ್ದ್ರತೆ ಗುಣಗಳಿರುವಂತೆ ತನ್ನ ಅಂತಃಶಕ್ತಿಯ ಅರಿವಿರಬೇಕು. ಹಾಗಾದರೆ ಮಾತ್ರ ಸಬಲಳೆನಿಸಲು ಸಾಧ್ಯ. ಸ್ತ್ರೀಯರು ಮುನ್ನುಗ್ಗುವ ಭರಾಟೆಯಲ್ಲಿ ಪುರುಷ ಪ್ರಧಾನ ಸಮಾಜದ ಕಣ್ಣಿಗೆ ಅಪರಾಧಿಗಳೇನೋ ಎಂಬಂತೆ ಮಿಂಚುತ್ತಿರುವುದು ನಮ್ಮಲ್ಲಿ ಆತಂಕ ಹುಟ್ಟಿಸುವುದಂತೂ ಸರಿ, ರಾಜಕೀಯವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಮಹಿಳೆಯನ್ನು ಸಬಲೀಕರಣದ ಹೆಸರಿನಲ್ಲಿ ದಿನಂಪ್ರತಿ ಆಧುನೀಕರಣಗೊಂಡ ಶೋಷಣೆಗಳೇ ಹೆಚ್ಚುತ್ತಿವೆ. "ಯತ್ರ ನಾರ್ಯಸ್ತು ಪೂಜ್ಯತೇ ರಮಂತೇ ತತ್ರದೇವತಃ" ಎಂದ ದೇಶದಲ್ಲಿ ಮಹಿಳೆಯ ಬದುಕನ್ನು ಆತ್ಮಾವಲೋಕನ ಮಾಡಿಕೊಳ್ಳಲೇ ಬೇಕಾಗಿದೆ. ಸಬಲತೆ ಎಂದರೆ ಆರ್ಥಿಕ ಹಕ್ಕು ನೀಡಿರುವುದು ಎಂಬ ಕಲ್ಪನೆ ಮಸ್ತಕದ ಮೂಲೆಯಲ್ಲಿ ಧ್ವನಿಸುತ್ತಿದೆ ನಮ್ಮ ಸಮಾಜದಲ್ಲಿ. ಜಾಗತೀಕರಣದ ಜಗತ್ತಿನ್ನಲ್ಲಿ ಹೆಣ್ಣಿನ ಬಗೆಗಿನ ಭಾವಗಳು ಅಪಮೌಲ್ಯೀಕರಣವಾಗುತ್ತಿದೆ. ಅಪಾಯಕಾರಿ, ಅತಿರಂಜಕವಾಗಿ ರೂಪಿಸುತ್ತಿರುವ ಮಾಧ್ಯಮಗಳ ಸ್ಪರ್ಧಾಲೋಕದ ಭರಾಟೆಯಲ್ಲಿ ಹೆಣ್ಣು ಬಿಕರಿಗಿಟ್ಟಿದ್ದಾಳೆ. ಸಾರ್ವಜನಿಕವಾಗಿ ಹಾಡುಹಗಲೇ ನಿರ್ಭಯವಾಗಿ ನಡೆಯಲಾಗದೆ ರಾಷ್ಟ್ರಪಿತನ ಕನಸು ನುಚ್ಚುನೂರಾಗಿದೆ.

ಅನಾದಿಕಾಲದಿಂದಲೂ ಸ್ತ್ರೀ ದಾಸ್ಯದ ಸಂಕೋಲೆಯೊಳಗೆ ಸಿಲುಕಿ ವಿಲವಿಲ ಒದ್ದಾಡುತ್ತಿರುವುದು ಸುಳ್ಳಲ್ಲ. ಸಂಪ್ರದಾಯದ ನೆಲೆಯಲ್ಲಿ ನಡೆಸುತ್ತಿದ್ದ ಶೋಷಣೆಗಳು ಇಂದು ಆಧುನೀಕರಣಗೊಂಡಿವೆ ಅಷ್ಟೆ. ಮಹಿಳಾ ದೌರ್ಜನ್ಯ ಪ್ರಕರಣಗಳು ಅತ್ಯಾಚಾರದ ಅತಿರೇಕಗಳು ಹೆಚ್ಚುತ್ತಿವೆ. ರಾಜಕೀಯ ಇಚ್ಛಾಶಕ್ತಿಯ ಕೊರತೆ, ಖಾಸಗೀಕರಣ, ಜಾಗತೀಕರಣದ ಬಿರುಗಾಳಿಗೆ ಸಿಕ್ಕು ಮಹಿಳೆ ಇಂದಿಗೂ ಮುಖ್ಯವಾಹಿನಿಯಿಂದ ವಂಚನೆಯನ್ನು ಅನುಭವಿಸುತ್ತಿದ್ದಾಳೆ. ಹುಟ್ಟಿದ ಹೆಣ್ಣು ಮಗುವಿಗೆ ಅನೇಕ ಯೋಜನೆಗಳನ್ನು ಸರ್ಕಾರ ದಯಪಾಲಿಸಿದರೂ ಮಗುವಿಗೆ ಅದು ತಲುಪಲು ಇರುವ ದೌರ್ಭಾಗ್ಯಗಳೇ ಹೆಚ್ಚು. ಹೆಣ್ಣಿನ ಸಂತತಿಗೆ ಕೊಡಲಿಯಾದ ಹೆಣ್ಣು ಭ್ರೂಣ ಹತ್ಯೆಯಂತಹ ಕೃತ್ಯಗಳು ನಡೆಯುವುದಂತೂ ನಿಂತಿಲ್ಲ. ಸಮಾಜದಲ್ಲಿ ಹೆಣ್ಣಿನ ಜೀವನ ಘಮಘಮಿಸುವ ಬದಲಾಗಿ ಅವಳ ಕನಸುಗಳೇ ಅವಳಿಗೆ ಹಾವಾಗಿ ಸುತ್ತಿಕೊಂಡಿರುವುದಂತೂ ನಿಜ.

ವಿಶೇಷ ಸೌಲಭ್ಯವಿದ್ದದ್ದಾದರೂ ಏನು ಪ್ರಯೋಜನ? ಯಾವುದೇ ರಂಗದಲ್ಲಿ ಮಹಿಳೆಯರಿಗೆ ವಿಶೇಷ ಮೀಸಲಾತಿ, ವಿಶೇಷ ಸೌಲಭ್ಯವಿದ್ದದ್ದಾದರೂ ಏನು ಪ್ರಯೋಜನ? ಯಾವುದೇ ರಂಗದಲ್ಲಿ ಮಹಿಳೆಯರ ಬಗ್ಗೆ ತಾರತಮ್ಯ ತೋರಬಾರದೆಂದು ನಮ್ಮ ಸಂವಿಧಾನ ಹೇಳಿದೆಯೆಂದು ನಮ್ಮ ಪ್ರಜಾಪ್ರಭುತ್ವ ಸಂವಿಧಾನ ಆಜ್ಞೆ ಮಾಡುತ್ತದೆ. ಆದರೆ ವಾಸ್ತವ ಸ್ಥಿತಿ ಬೇರೆಯಾಗಿದೆ. ಅಪರಾದ ಸಂಹಿತೆಯಲ್ಲೂ ಗಂಡು-ಹೆಣ್ಣು



Scanned with OKEN Scanner

ಎಂಬ ಬೇಧವಿಲ್ಲ. ಆದರೂ ಆಗುತ್ತಿರುವವುದೇನು? ವರದಕ್ಷಿಣೆ ಕಾಯ್ದೆ, ವಿಚ್ಛೇಧನ ಕಾಯ್ದೆ, ಜೀವನಾಂ ಕಾಯ್ದೆ, ಲೈಂಗಿಕ ಕಿರುಕುಳ ತಡೆಯಾಜ್ಞೆ ಕಾಯ್ದೆ ಈ ಎಲ್ಲಾ ಕಾಯ್ದೆಗಳ ಉಪಯೋಗ ಯಾರ ಪಾಲಾಗುತ್ತ ಮಹಿಳಾ ಸಬಲೀಕರಣದ ಬಗ್ಗೆ ವೇದಿಕೆಗಳಲ್ಲಿ ಮಾತನಾಡುವ ರಾಜಕೀಯ ನೇತಾರರು ಅದನ್ನು ಸಾಕಾರಗೊಳಿಸು ತಮ್ಮ ಪಾತ್ರ ಮರೆತೇ ಬಿಟ್ಟಿದ್ದಾರೆ.

ಹೆಣ್ಣನ್ನು ಭೋಗದ ವಸ್ತುವಾಗಿ ನೋಡುವ ಈ ಸಮಾಜ ಮಾನವೀಯ ತಳಹದಿಯ ಯೋಜಿಸುವಂತಾಗಬೇಕಾಗಿದೆ.ಹೆಣ್ಣಿಗೆ ತಾನು ಬೆಳೆದು ತನ್ನವರನ್ನು ಬೆಳೆಸುವ ಮನಸ್ಥಿತಿ ಬೆಳೆಯಬೇಕಾಗಿದೆ. ಮಹಿ ಅಸ್ಮಿತೆಯ ಬಗ್ಗೆ ಆತ್ಮಾವಲೋಕನ ಮಾಡಿಕೊಂಡು ನಮ್ಮ ಸ್ಥಾನಕ್ಕಾಗಿ ಹೋರಾಡುವುದಕ್ಕಿಂತ ಆ ಸ್ಥಾನ ತಾನಾಗಿ ಬರಲು ಮಾಡಬಹುದಾದ ಪುರುಷ ಸಹಕಾರವೂ ಪೂರಕವಾಗಿ ಸಿಗಬೇಕು. ಮಹಿಳೆ ತನ್ನದೇ ಜಗತ್ತನ್ನೊ ಕಟ್ಟಿಕೊಳ್ಳುವ ನಿಟ್ಟಿನಲ್ಲಿ ಎಲ್ಲಿ ಎಡವಿದ್ದೇವೆ? ಏನನ್ನ ತಡವಿದ್ದೇವೆ? ಎಂಬ ಚಿಂತನೆಯ ನಡೆಸಬೇಕಾಗಿದೆ. ಸಬಲ ಪಟ್ಟದಲ್ಲಿ ನಿಂತಿರುವ ನಾವು ಬದುಕಿನ ಮೆಟ್ಟಿಲುಗಳನ್ನು ಭದ್ರಮಾಡಿಕೊಳ್ಳುವ ಅಗತ್ಯವಿರುವುದಂತೂ ಸತ್ಯ. ಹೆಣ್ಣ ಭೋಗದ ವಸ್ತುವಾಗಿ ನೋಡುವ ಈ ಸಮಾಜದ ನೋಟ ಮಾನವೀಯ ತಳಹದಿಯಲ್ಲಿ ಯೋಚಿಸಬೇಕು.

–ಕು. ಹೆಚ್.ಎನ್. ವಿ

## ಬಸವಣ್ಣನವರ ವಚನಗಳು

ಉಳ್ಳವರು ಶಿವಾಲಯ ಮಾಡಿಹರು,
ನಾನೇನ ಮಾಡುವೆ ಬಡವನಯ್ಯಾ,
ಎನ್ನ ಕಾಲೇ ಕಂಬ, ದೇಹವೇ ದೇಗುಲ,
ಶಿರ ಹೊನ್ನ ಕಲಶವಯ್ಯಾ,
ಕೂಡಲಸಂಗಮದೇವಾ, ಕೇಳಯ್ಯಾ
ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ.

ಊಡುವ ಉಡಿಸುವ ಗಂಡನಿದ್ದಂತೆ
ಜೊಡೆ, ಮಿಂಡಂಗೆ ಕಣ್ಣ ಚೆಲ್ಲುವಳ
ಕೇಡಿಂಗೆ ಬೆರಗಾದೆ ನಾನು.
ಕೂಡಲಸಂಗಮದೇವನು
ಸಿಂಗಾರದ ಮೂಗ ಬಣ್ಣಿಸಿ, ಹಲುದೋರೆ ಕೊಯ್ವ

ಭಕ್ತ ಭಕ್ತನ ಮನೆಗೆ ಬಂದಡೆ, ಭೃತ್ಯಾಚಾರವ ಮಾಡಬೇಕು.
ಕರ್ತನಾಗಿ ಕಾಲ ತೊಳೆಸಿಕೊಂಡಡೆ
ಹಿಂದೆ ಮಾಡಿದ ಭಕ್ತಿಗೆ ಹಾನಿ.
ಲಕ್ಕ ಗಾವುದ ದಾರಿಯ ಹೋಗಿ
ಭಕ್ತನು ಭಕ್ತನ ಕಾಂಬುದು ಸದಾಚಾರ,
ಅಲ್ಲಿ ಕೂಡಿ ದಾಸೋಹವ ಮಾಡಿದಡೆ
ಕೂಡಿಕೊಂಬನು ನಮ್ಮ ಕೂಡಲಸಂಗಯ್ಯ.

ಜನ್ಮ ಜನ್ಮಕ್ಕೆ ಹೋಗಲೀಯದೆ,
'ಸೋ ಹಂ' ಎಂದೆನಿಸದೆ ದಾಸೋ ಹಂ ಎಂದೆನಿಸಯ್ಯ
ಲಿಂಗಜಂಗಮಪ್ರಸಾದದ ನಿಲವ ತೋರಿ ಬದುಕಿಸಯ್ಯ
ಕೂಡಲಸಂಗಮದೇವಾ,-ನಿಮ್ಮ ಧರ್ಮ.

ಅಯ್ಯಾ, ನಿಮ್ಮ ಶರಣರ ದಾಸೋಹಕ್ಕೆ
ತನುಮನಧನವಲಸದಂತೆ ಮಾಡಯ್ಯಾ,
ತನು ದಾಸೋಹಕ್ಕೆ ಉಬ್ಬುವಂತೆ ಮಾಡಯ್ಯಾ,
ಮನ ದಾಸೋಹಕ್ಕೆ ಲೀಯುವಂತೆ ಮಾಡಯ್ಯಾ,
ಧನ ದಾಸೋಹಕ್ಕೆ ಸವೆದು ನಿಮ್ಮ ಶರಣರ ಪ್ರಸಾದದ
ನಿರಂತರ ಆಡಿ, ಹಾಡಿ, ನೋಡಿ, ಕೂಡಿ, ಭಾವಿಸಿ ಸುಖಿ
ಪರಿಣಾಮಿಸುವಂತೆ ಮಾಡು ಕೂಡಲಸಂಗಮದೇವಾ

ಎಲ್ಲಿ ನೋಡಿದಡಲ್ಲಿ ಮನವೆಳಸಿದಡೆ
ಆಣೆ, ನಿಮ್ಮಾಣೆ, ನಿಮ್ಮ ಪ್ರಮಥರಾಣೆ,
ಪರವಧುವನು ಮಹಾದೇವಿಯೆಂಬೆ
ಕೂಡಲಸಂಗಮದೇವಾ.

ಹಾಲ ತೊರೆಗೆ ಬೆಲ್ಲದ ಕೆಸರು, ಸಕ್ಕರೆ ಮಳಲು,
ತವರಾಜದ ನೊರೆ ತೆರೆಯಂತೆ ಆದ್ಯರ ವಚನವಿರಲ
ಬೆರೆ ಬಾವಿಯ ತೋಡಿ ಉಪ್ಪನೀರನುಂಬವ
ವಿಧಿಯಂತೆ
ಆಯಿತ್ತೆನ್ನ ಮತಿ, ಕೂಡಲಸಂಗಮದೇವಾ.

Scanned with OKEN Scanner

# ವಸಾಹತುಶಾಹಿ ಚಿಂತನೆ: ಗೂಗಿ ವಾ ಥಿಯಾಂಗೊ

ಆಫ್ರಿಕ ಖಂಡದ ನಾಡು-ನುಡಿಯನ್ನು ಕುರಿತು ಯೂರೋಪಿಯನ್ ಬರಹಗಳ ಮೂಲಕವೇ ಸಮರ್ಥವಾಗಿ ಹೋರಾಟ ಮಾಡಿದ ಗೂಗಿ-ವಾ-ಥಿಯಾಂಗೊ. ಕೀನ್ಯಾದಲ್ಲಿ ಹುಟ್ಟಿದವರು ಅವರು (ವಸಾಹತುಶಾಹಿ) ರಾಷ್ಟ್ರಗಳೊಂದಿಗೆ ತನ್ನ ತಮ್ಮ ಸಾಹಿತ್ಯವನ್ನು ಇಂಗ್ಲೀಷ್ ಭಾಷೆಯಲ್ಲೇ ಮೊದಲು ಬರೆದರೂ ನಂತರ ತಮ್ಮ ಅರಿವಿನ ಚಿಂತನೆಯ ಪ್ರಜ್ಞೆಯಿಂದ 'ಗಿಕೊಯೊ' ತಾಯ್ನುಡಿಯ ಭಾಷೆಯಲ್ಲಿ ಸಾಹಿತ್ಯ ಕೃತಿಗೈದು ಶ್ರೇಷ್ಠ ಸಂಸ್ಕೃತಿ ಚಿಂತಕರೆನಿಸಿದರು. ವಸಾಹತುಶಾಹಿಯು ವಸಾಹತುರಾಷ್ಟ್ರಗಳ ಮೇಲೆ ಸಾಧಿಸಿದ ಕುತಂತ್ರ ವಿಜಯ. ಜಗತ್ತಿನ ಹಲವಾರು ದೇಶಗಳ ಮೇಲೆ ಬೀರಿದ ದುರ್ಮಾರ್ಗದ ಹೀನ ಕೃತ್ಯ ಎಂತಹದ್ದೆಂದು ಅರಿಯಬೇಕಾದರೆ ಮತ್ತು ನಮ್ಮ ಸಾಂಸ್ಕೃತಿಕ ಚಹರೆಗಳನ್ನು ಪಡೆದುಕೊಳ್ಳುವ ಕೆಲಸದಲ್ಲಿ ತೊಡಗಿರುವ ಮನಸ್ಸುಗಳೊಂದಿಗೆ ಗೂಗಿ ವಸಾಹತುಶಾಹಿ ವಿರುದ್ಧ ತೋರಿದ ನಿಲುವು ಚಿಂತನೆಗಳನ್ನು ಹಂಚಿಕೊಳ್ಳುವುದು ಭಾರತೀಯ ಸಾಹಿತ್ಯ ಸಂದರ್ಭದಲ್ಲಿ ಬಹುಮುಖ್ಯವೆನಿಸುತ್ತದೆ. ಕಾರಣ, ಭಾರತವು ಸಹ ಒಂದು ಕಾಲದಲ್ಲಿ ಬ್ರಿಟೀಷರ (ವಸಾಹತುಶಾಹಿ) ಆಳ್ವಿಕೆಗೆ ಒಳಪಟ್ಟಿತ್ತು. ಆ ಸಂದರ್ಭದಲ್ಲಿ ಯೂರೋಪಿಯನ್ ಸಾಹಿತಿಗಳು, ಚಿಂತಕರು ಭಾರತವನ್ನು ಅತ್ಯಂತ ಕೀಳಾಗಿ ಕಂಡಿದ್ದರು. ಅಷ್ಟೇ ಅಲ್ಲ ಇಲ್ಲಿನ ನಾಡುನುಡಿ, ಸಂಸ್ಕೃತಿಯನ್ನು ಕುರಿತು ಅವರಿಗೆ ಅನುಕೂಲವಾಗುವಂತೆಯೇ ವ್ಯಾಖ್ಯಾನವನ್ನು ಬರೆದುಕೊಂಡರು. ಅದರಂತೆಯೇ (ಅವರ ವ್ಯಾಖ್ಯಾನದಂತೆ) ನಾವು ಬದುಕುತ್ತಿದ್ದೇವೆಂದು ನಮಗೆ ನಾವೇ ಸಂತಸ ಪಡುತ್ತಿದ್ದೆವು. (ಈಗಲೂ ಸಹ ಅಂತಹ ಕಲ್ಪನೆಯಲ್ಲೇ ಇರುವವರನ್ನು ನಾವು ಕಾಣುತ್ತೇವೆ). ನಮಗೆ ನಾವೇ ತಿಳಿಯದ ಹಾಗೆ ಅವರ ಬರಹ, ಚಿಂತನೆಗಳಿಗೆ ನಮ್ಮತನವನ್ನೇ ನಾವು ಮಾರಿಕೊಂಡಿರುವ ಈ ಹೊತ್ತಿನಲ್ಲಿ ಗೂಗಿಯವರ ಒಟ್ಟಾರೆ ಚಿಂತನೆಗಳು ನಮ್ಮವರನ್ನೆಲ್ಲಾ ಕತ್ತಲೆ ಜಗತ್ತಿನಿಂದ ಹೊರಬರುವಂತೆ ಮಾಡುತ್ತವೆ ಎಂಬುದು ಸರ್ವವಿಧಿತ. ಆ ನಿಟ್ಟಿನಲ್ಲಿ ಗೂಗಿ ಬದುಕಿರುವ ಕಾಲ, ನಡೆಸಿದ ವಸಾಹತುಶಾಹಿ ವಿರುದ್ಧದ ಹೋರಾಟ ಎಂತಹದ್ದೆಂದು ಅವರ ಚಿಂತನೆಗಳ ಹಿನ್ನೆಲೆಯಾಗಿ ತಿಳಿದುಕೊಳ್ಳುವ ತುರ್ತು ನಮಗಿರುವುದರಿಂದ ಇಲ್ಲಿ ಒಂದಿಷ್ಟು ಚಿಂತನಕ್ರಮಗಳ ಕುರಿತು ಮೆಲುಕು ಹಾಕಲಾಗಿದೆ.

ಆಫ್ರಿಕದಲ್ಲಿ ನಡೆದ ಯಾವುದೇ ಒಂದು ಸಂಘರ್ಷವನ್ನು ವಸಾಹತುಶಾಹಿ ತನ್ನ ಮಾಧ್ಯಮಗಳ ಮೂಲಕ "ಒಂದು ಬುಡಕಟ್ಟಿನ ವಿರುದ್ಧ ಮತ್ತೊಂದು ಬುಡಕಟ್ಟು ಮಾಡಿದ ಸಂಘರ್ಷ"ವೆಂದು ಬಿತ್ತರಿಸುತ್ತವೆ. ಯಾವತ್ತೂ ಇಂತಹ ಕ್ಷುಲ್ಲಕ ಜಗಳಗಳಲ್ಲಿ ಅಲ್ಲಿನ ಜನ ಬಿದ್ದಿರುವುದಿಲ್ಲ. ಆದರೂ ಯೂರೋಪಿಯನ್ ಮಾಧ್ಯಮಗಳು ಆಷ್ಟೊತ್ತಿಗೆ ನಿಜಾಂಶವನ್ನು ಮರೆಮಾಚಿ ಸುಳ್ಳು ಸುದ್ದಿಯನ್ನು ಜಗಜ್ಜಾಹಿರಗೊಳಿಸಿರುತ್ತವೆ. ಇದರಿಂದ ತನ್ನ ನೆಲದ ಬಗ್ಗೆ ತನ್ನ ಜನರಿಗೆ ಒಂದು ಬಗೆಯ ಗೌರವಾಭಿಮಾನ ಕುಗ್ಗುತ್ತಾ ಹೋಗುತ್ತದೆ. ಇದು ಮುಂದೆ ತನ್ನದಲ್ಲದ ಭಾಷೆ, ಸಂಸ್ಕೃತಿಯ ಮೇಲೆ ಅಭಿಮಾನ ಮೂಡಲು ಕಾರಣೀಭೂತವಾಗುತ್ತದೆ. ಈ ರೀತಿಯಲ್ಲಿ ವಸಾಹತುಶಾಹಿ ಕೆಲಸ ಮಾಡುತ್ತಿದೆ ಎಂದು ಗೂಗಿ ಎಚ್ಚರಿಸುತ್ತಾರೆ.

ವಸಾಹತುಶಾಹಿ ನಮ್ಮ ನೆಲದಲ್ಲಿ ನೆಲೆಯೂರಲು ಎರಡು ಕಾರಣಗಳನ್ನು ಎಪ್ಪತ್ತರ ದಶಕದಲ್ಲೇ ಗೂಗಿ ನೀಡಿದರು. ಬಹುಕಂಪನಿಗಳ ರೂಪದಲ್ಲಿರುವ ಬಂಡವಾಳಶಾಹಿಗಳ ಮತ್ತು ಬಂಡವಾಳಶಾಹಿಗಳನ್ನು ಕೈಬೀಸಿ ಕರೆದು, ಸತ್ಕರಿಸಿ, ರತ್ನಗಂಬಳಿ ಹಾಸುವ ತನ್ನದೇ ಕೆಲಸ ಆಳುವವರ್ಗಗಳ ಮೂಲಕ ವಸಾಹತುಶಾಹಿಗಳು ತಮ್ಮ ನವಸಾಮ್ರಾಜ್ಯವನ್ನು ಕಟ್ಟಿಕೊಂಡು ಗಿಳಿಪಾಠ ಕಲಿಸುವ ಗುಲಾಮಿ ಸಂಸ್ಕೃತಿಯನ್ನು ನಿರ್ಮಾಣ ಮಾಡಿದರು. ಇದು ನಡೆದದ್ದು ಒಂದು ಎರಡು ದಿನಗಳಲ್ಲಿ ಅಲ್ಲ ವ್ಯವಸ್ಥಿತವಾಗಿ ಈ ನೆಲದ ಜನರನ್ನು ಬಾಲ್ಯಾವಸ್ಥೆಯಲ್ಲೇ ಹೊಸೆದು ಹಾಕುತ್ತಾ ಯೂರೋಪಿಯನ್ನರು ತಮ್ಮ ಚಿಂತನೆ ತಮ್ಮ- ಸಂಸ್ಕೃತಿಯೇ ಶ್ರೇಷ್ಠ ಎಂದು ಮಾನಸಿಕವಾಗಿ ದುರ್ಬಲಗೊಳಿಸುತ್ತಾ ಆಫ್ರಿಕ ನೆಲದ ಮಕ್ಕಳು ಅದೇ ನೆಲದಲ್ಲಿ ಬದುಕು ಕಟ್ಟಿಕೊಳ್ಳಲು ಹಿಂಜರಿಯುವಂತೆ ಮಾಡುತ್ತಾ ಶತಮಾನಗಳ ಹಿಂದೆಯೇ ಈ ತಂತ್ರ ಹೂಡಿದರು. ಆದರೆ ಇದು ಆಫ್ರಿಕ ನೆಲದ ಗೂಗಿಯ ಹಿರಿಯ ತಲೆಮಾರಿನ ಶ್ರೇಷ್ಠ ಸಾಹಿತಿಗಳಿಗೂ ಅರ್ಥವಾಗದಿರುವುದು ದುರಂತವೇ ಸರಿ.

ವಸಾಹತುಶಾಹಿ ತನ್ನ ಹೆಸರನ್ನು ಬಂಡವಾಳಶಾಹಿ ಎಂದು ಬದಲಿಸಿಕೊಂಡು ಇಂದು ದುಡಿಯುವ ಶ್ರಮಿಕವರ್ಗವನ್ನು ಹಾಗೂ ರೈತರನ್ನು ಒತ್ತೆಯಾಳಾಗಿ ಇಟ್ಟುಕೊಂಡು, ಅವರನ್ನು ಹೊಟ್ಟೆಗೆ ಬಟ್ಟೆಗೆ ನೀಡಿ ಸಲಹುತ್ತಿರುವ ದೇಶ ನಮ್ಮದು ಎಂದು ಬೀಗುತ್ತಿವೆ. ಈ ವಿಚಾರದಲ್ಲಿ ಗೂಗಿಯವರ ಚಿಂತನೆ ಹೊಸ ದೃಷ್ಟಿಕೋನವನ್ನು ಹೊಂದಿದೆ. ಅವರ ಪ್ರಕಾರ ಬಂಡವಾಳಶಾಹಿ ಸಾಮ್ರಾಜ್ಯಗಳು ಶ್ರಮಿಕರನ್ನು ರೈತರನ್ನು ದುಡಿಸಿಕೊಂಡು ಶ್ರೀಮಂತಿಕೆಯಿಂದ ಬೀಗುತ್ತಿವೆ. ಇದು "ಜಗತ್ತಿನ ಜನರ ಪಾಲಿಗೆ ಈ ಹೊತ್ತು ಸಾಮ್ರಾಜ್ಯಶಾಹಿ ಎಂದರೆ, ಆರ್ಥಿಕ, ರಾಜಕೀಯ ಹಾಗೂ ಮಿಲಿಟರಿ ರೂಪದ ಪರಿಣಾಮವಾಗಿದೆ. ಸಾಂಸ್ಕೃತಿಕ ಹಾಗೂ ಮಾನಸಿಕ ಪರಿಣಾಮವಾಗಿದೆ; ಇದು ಇನ್ನಷ್ಟು ಸರ್ವನಾಶದತ್ತ ಕರೆದೊಯ್ಯುವಂಥದು" (ವಸಾಹತು ಪ್ರಜ್ಞೆ ಮತ್ತು ವಿಮೋಚನೆ ಪುಟ-೧೦) ಎಂದು ಎಚ್ಚರಿಸುತ್ತಾರೆ. ಇದು ಭಾರತದ ಸಂದರ್ಭದಲ್ಲೂ ಅನ್ವಯಿಸಿಕೊಳ್ಳಬೇಕಾದ ವಿಚಾರವಾಗಿದೆ. ಇಲ್ಲಿನ ಬಹುಕಂಪನಿಗಳ ಕಾರ್ಯವೈಖರಿಯಲ್ಲೇ ನಾವು ಗೂಗಿಯವರ ಚಿಂತನೆಗಳನ್ನು ಗಂಭೀರವಾಗಿ ತೆಗೆದುಕೊಂಡರೆ



Scanned with OKEN Scanner

ಮುಂದಿನ ನಮ್ಮ ಪೀಳಿಗೆ ಸ್ವತಂತ್ರ ಸಂವೇದನೆಯ ಅಭಿವ್ಯಕ್ತಿಯಿಂದ ಸ್ವತಂತ್ರವಾಗಿ ಬಾಳುತ್ತದೆ. ಇಲ್ಲವಾದರೆ [illegible] ಸಂಪತ್ತು ವಿದೇಶಿ ಬಂಡವಾಳ ಹೂಡಿಕೆಗಾರರಿಗೆ ನೀಡಿ ನಮ್ಮ ಸಂಪತ್ತಿನ ಮೇಲಿರುವ ಅಧಿಕಾರ ಕಳೆದುಕೊಂಡು ಬರಿಗೈ ನಿಲ್ಲಬೇಕಾಗುತ್ತದೆ.

ಪಶ್ಚಿಮ ಆರ್ಥಿಕ ಬಂಡವಾಳಕ್ಕೆ ನೇರ ಹೂಡಿಕೆಗೆ ಸ್ವಾಗತ ಕೋರುವುದೆಂದರೆ ನಮ್ಮ ನೆಲದಲ್ಲಿ ಹಗಲು ದರೋ ಅವಕಾಶ ಕಲ್ಪಿಸಿದಂತೆ. ಆದ್ದರಿಂದಲೇ ಗೂಗಿಯವರು ಅಂತಹ ಬಂಡವಾಳಶಾಹಿಗಳಿಗೆ ಶಸ್ತ್ರಾಸ್ತ್ರಗಳಿಂದ, ಅಣುಬಾಂಬ್‌ಗಳ ರಕ್ಷಣೆ ನೀಡಲಾಗುತ್ತದೆ ನಮ್ಮ ನೆಲದ ಆಳುವ ವರ್ಗದವರಿಂದ ಎಂದು ಖೇದಪಡುತ್ತಾರೆ. ವಸಾಹತುಶಾಹಿ ಆಫ್ರಿಕದ ಹಲವು ವಸಾಹತು ದೇಶಗಳಲ್ಲಿ ಮಾಡಿದ ಸಾಂಸ್ಕೃತಿಕ ರಾಜಕಾರಣ ಎಂತಹದ್ದೆಂದು ಹೇಳುವ ಗೂಗಿ- "ಜನರ ಪ್ರತಿ ವಿರುದ್ಧವಾಗಿ ಸಾಮ್ರಾಜ್ಯಶಾಹಿಯು ಕೈಕಟ್ಟಿಕೊಂಡು ಕುಳಿತಿಲ್ಲ. ಅದು ದೊಡ್ಡ ಆಯುಧವನ್ನು ಪ್ರಯೋಗಿಸುತ್ತಿದೆ. ಆ ಆಯುಧವೇ ಸಾಂಸ್ಕೃತಿಕ ಬಾಂಬ್. ಈ ಸಾಂಸ್ಕೃತಿಕ ಬಾಂಬಿನ ಗುರಿ ಜನರ ಆತ್ಮವಿಶ್ವಾಸವನ್ನು ಅಲುಗಿಸುವುದು ಜನ ತಮ್ಮ ಹೆಸರುಗ ಭಾಷೆಗಳಲ್ಲಿ, ಪರಿಸರದಲ್ಲಿ, ಪರಂಪರೆಯಲ್ಲಿ, ಸಾಮರಸ್ಯದಲ್ಲಿ, ಸಾಮರ್ಥ್ಯಗಳಲ್ಲಿ ಅಂತಿಮವಾಗಿ ತಮ್ಮತನಗಳಲ್ಲಿ ಇಟ್ಟ ಸ್ವಾಭಿಮಾನವನ್ನು ನಾಶ ಮಾಡುವುದು. ಈ ಆತ್ಮವಿಶ್ವಾಸ ನಾಶವು ಜನಕ್ಕೆ ತಮ್ಮ ಗತವನ್ನು 'ಕೆಲಸಕ್ಕೆ ಬಾರದ ಬಂಜರು ಎಂದು ನಂಬುವಂತೆ ಹಾಗೂ ತಮ್ಮದಲ್ಲದ ಮತ್ತೊಂದನ್ನು ಅಪ್ಪಿಕೊಳ್ಳುವಂತೆ ಮಾಡುತ್ತದೆ. (ಅದೇ ಪುಟ-೧೧) ಎಂದು ಅಭಿಪ್ರಾಯಪಟ್ಟಿದ್ದಾರೆ. ಇದು ಜಗತ್ತಿನ ಪೂರ್ವ ದೇಶಗಳೆಲ್ಲವುಗಳ ಕ್ರೋಢೀಕೃತ ಚಿಂತನೆಯಾಗಿದೆ. ಬಹುಶಃ ಭಾರತ ಇಂಗ್ಲೀಷ್ ಭಾಷೆ ದೇಹದಿಂದ ಚರ್ಮ ಬೇರ್ಪಡದಂತೆ ಇಲ್ಲಿನ ಹೊಸ ಪೀಳಿಗೆಯ ಮಕ್ಕಳ (ಇಂಗ್ಲೀಷ್ ಕಲಿಯದಿದ್ದರೆ ಬದು ಸಾಗಲ್ಲ ಅನ್ನುವ ಅರ್ಥದಲ್ಲಿ) ಮನಸ್ಸಿನಲ್ಲಿ ಅಂಟಿಕೊಂಡಿರುವುದು ಇದಕ್ಕೆ ದೊಡ್ಡ ನಿದರ್ಶನವೆನ್ನಬಹುದು.

ಈ ಬಗೆಯ ಆತ್ಮವಿಶ್ವಾಸವನ್ನು ಘಾಸಿಗೊಳಿಸುವ ಸಾಮ್ರಾಜ್ಯಶಾಹಿ ತನ್ನ ಒಡೆದು ಆಳುವ ನೀತಿಯನ್ನು ಪ್ರಯೋಗಿ ತನ್ನ ಆರ್ಥಿಕ ಕೋಟೆಯನ್ನು ಭದ್ರಗೊಳಿಸಿಕೊಂಡು ಬಡತನ, ಹಸಿವು, ದಾರಿದ್ರ್ಯದಲ್ಲಿ ವಸಾಹತು ದೇಶಗಳು ಬದುಕುವ ಮಾಡುತ್ತಿವೆ. ಜೊತೆಗೆ ಮೇಲ್ಮುಖವಾಡ ಧರಿಸಿ ಆಫ್ರಿಕದಂತಹ ದೇಶಗಳಿಗೆ ಯೂರೋಪಿಯನ್ ದೇಶಗಳ ಸಲಹೆ ಸಹಾ ಅವಶ್ಯವಾಗಿಯೇ ಬೇಕಾಗಿದೆ ಎಂದು ಹೇಳುತ್ತಲೇ ಅವರನ್ನು ಮಾನಸಿಕವಾಗಿ ಪಲಾಯನವಾದಕ್ಕೆ ತಳ್ಳುತ್ತಿವೆ. ಈ ಬಗ ತಂತ್ರದಿಂದ ಮನುಷ್ಯ-ಮನುಷ್ಯರ ನಡುವೆಯೇ ಪ್ರೀತಿ-ವಿಶ್ವಾಸ ನಂಬಿಕೆಯಲ್ಲಿದ ಸಂದರ್ಭದಲ್ಲಿ ದೇಶ-ದೇಶಗಳ ನಡು ಪ್ರೀತಿ-ಸೌಹಾರ್ದತೆ ಅರಳಲು ಹೇಗೆ ಸಾಧ್ಯವಾದೀತು? ಶಿಕ್ಷಣ ವ್ಯವಸ್ಥೆಯಲ್ಲೂ ಈ ಬಗೆಯ ಸಾಂಸ್ಕೃತಿಕ ರಾಜಕಾರಣ ಮಾಡಿರುವು ಕಾಣುತ್ತೇವೆ. ತಮ್ಮ ಸಾಹಿತ್ಯ ಸಂಸ್ಕೃತಿಗೆ ಸಂಬಂಧಿಸಿದಂತೆ ತಮ್ಮ (ಇಂಗ್ಲೀಷ್, ಫ್ರೆಂಚ್) ಭಾಷೆಯಲ್ಲಿ ಬರೆಯುವ ಬರಹಗಾರ ಪ್ರತಿಷ್ಠಿತ ಸಂಸ್ಥೆಯ ಅಧಿಕಾರವನ್ನು ನೀಡಿ ಅವರನ್ನು ತಮ್ಮ ತಹಬಂದಿಗೆ ಸೇರಿಸಿಕೊಳ್ಳುತ್ತಾರೆ. ಆಫ್ರಿಕ ಖಂಡದಲ್ಲಿ ಅನೇ ಸಾಹಿತಿಗಳು ಈ ಗಾಳಕ್ಕೆ ಬಿದ್ದಿರುವುದನ್ನು ಗೂಗಿಯವರು, ಅಲ್ಲಿನ ಸಾಹಿತಿಗಳ ಬರಹಗಳಲ್ಲಿ, ಚಿಂತನೆಗಳಲ್ಲಿ, ಭಾಷಣ ನುಡಿಗಳಲ್ಲೇ ಗುರುತಿಸಿ ತೋರಿಸುತ್ತಾರೆ.

ಯೂರೋಪಿಯನ್ ವಸಾಹತುಶಾಹಿ ದೇಶಗಳಿಗೆ ಪೂರ್ವ ದೇಶಗಳೆಂದರೆ ಒಂದು ಬಗೆಯ ಅಸಡ್ಡೆ. ಸಂಪತ್ತ ಕೊಳ್ಳೆ ಹೊಡೆಯುವ ಸಂದರ್ಭದಲ್ಲಿರುವ ಕರುಣೆ ವಸಾಹತುಶಾಹಿ ರಾಷ್ಟ್ರಗಳಿಗೆ ಮನುಷ್ಯರನ್ನು ಕಾಣುವಲ್ಲಿ ಇರುವುದಿಲ್ಲ. ಅವ ದೃಷ್ಟಿಯಲ್ಲಿ ಆಫ್ರಿಕನ್ನರು ವಿಷಸರ್ಪಗಳಂತೆ, ಅನಾಗರಿಕರಂತೆ ಕಾಣುತ್ತಾರೆ. ಈ ಬಗೆಯ ಇಬ್ಬಂದಿತನ ಆಫ್ರಿಕದ ನೆಲದ ಜೀವಹಿಂಸೆಯ ವಾತಾವರಣ ಸೃಷ್ಟಿಸಿವೆ. ಹಾಗಾಗಿಯೇ ಗೂಗಿಯಂತಹ ಚಿಂತಕರು ಈ ನಿಟ್ಟಿನಲ್ಲಿ ಎಚ್ಚೆತ್ತುಕೊಂಡು ಆ ನೆಲದ ನಾಡು-ನುಡಿಗೆ ಬಂದೊದಗಿದ ಕಳಂಕವನ್ನು ಹೊಡೆದೋಡಿಸಲು ಪ್ರಯತ್ನಿಸಬೇಕಾಯಿತು. ಇಂತಹ ನಿಸ್ವಾರ್ಥ ಪ್ರಯತ್ನ ಹತ್ತು ವರ್ಷಗಳ ಕಾಲ ಜೈಲುವಾಸ ಪ್ರಶಸ್ತಿಯೂ ಇದೇ ವಸಾಹತುಶಾಹಿಯಿಂದ ಲಭಿಸಿದ್ದು ಜಗತ್ತೇ ತಲೆ ತಗ್ಗಿಸುವಂತ ಸನ್ನಿವೇಶವೆಂದರೆ ತಪ್ಪಾಗಲಾರದು.

ಸಾಮ್ರಾಜ್ಯಶಾಹಿಯು ಆಳಿಸಿಕೊಳ್ಳುವ ದೇಶಗಳ ಭೂಮಿಯ ಮೇಲಿನ ಎಲ್ಲಾ ಹೋರಾಟಗಳ ಎದುರಿಗೆ ನಿಜವಾ ಶಾಂತಿ ಪ್ರಜಾಸತ್ತಾತ್ಮಕ ಸಮಸಮಾಜವಾದಗಳನ್ನು ಬಯಸುವ ಜನರ ಎದುರಿಗೆ ಒಂದು ಸವಾಲನ್ನು ಇಟ್ಟಿದೆ. ಆ ಸವಾ ಯಾವುದೆಂದು ಗೂಗಿಯವರು ಸ್ಪಷ್ಟವಾಗಿ ಹೇಳಿದ್ದಾರೆ. ಆ ಹೇಳಿಕೆ ಹೀಗಿದೆ-"ನಮ್ಮ ದರೋಡೆಯನ್ನು ಸಹಿಸಿಕೊಳ್ಳಿ ಇಲ್ಲವೆ ಸಾಯಲು ಸಿದ್ಧರಾಗಿ" ವಸಾಹತುಶಾಹಿ ರಾಷ್ಟ್ರಗಳ ಈ ಮಾತು ಆರ್ಥಿಕವಾಗಿ ಮತ್ತು ರಾಜಕೀಯವಾಗಿ ದುರ್ಬಲವಾ ದೇಶಗಳ ಮೇಲೆ ಯಾವ ರೀತಿ ಪ್ರಭಾವ ಬೀರಿರಬಹುದು ಎಂದು ಒಮ್ಮೆ ಚಿಂತಿಸಿದರೆ ಉಸಿರುಗಟ್ಟುತ್ತದೆ. ತಾವು ಭೂಮಂಡಲವನ್ನೇ ಆಳಲು ಹುಟ್ಟಿದವರೆಂದು ಗತಕಾಲದಿಂದಲೂ ಹೇಳಿಕೊಂಡು ಬರುತ್ತಿರುವ ಈಗಿನ ಸಾಮ್ರಾಜ್ಯ ಬಂಡವಾಳಶಾ ರಾಷ್ಟ್ರಗಳು ಮನುಕುಲದ ಒಳಿತಿಗೆ ಕಿಂಚಿತ್ತೂ ತಲೆಕೆಡಿಸಿಕೊಳ್ಳದೆ ದೇಶ-ದೇಶಗಳ ನಡುವೆ ವಿಷದ ಬೀಜ ಬಿತ್ತುತ್ತಿವೆ. ಇಂತ ಸಂದರ್ಭದಲ್ಲಿ ಯಾವುದೇ ದೇಶವಾಗಲಿ, ರಾಜ್ಯವಾಗಲಿ, ಒಂದು ಗುಂಪಾಗಲಿ ಈ ಬಗೆಯ ಧೋರಣೆಯನ್ನು ವಿರೋಧಿಸಿದ

ಅದರ ಪ್ರತಿಫಲ ಎಲ್ಲಾ ರಾಷ್ಟ್ರೀಯತೆಗಳ ಜಯವಾಗುತ್ತದೆ. ಇಲ್ಲದಿದ್ದರೆ ಮನುಷ್ಯ ಯಂತ್ರಗಳಾಗಿ ಬದುಕುವ ಕಾಲ ಈಗಾಗಲೇ ನಮ್ಮ ಮುಂದೆ ಇರುವ ಸನ್ನಿವೇಶದಲ್ಲಿ ನಾವು ರೋಬೋಟ್‌ಗಳಾಗಿ (ಸಂಪೂರ್ಣ ಕೀಲಿಕೈ ಆಗುವ) ಹಗಲು ರಾತ್ರಿಯೆನ್ನದೆ ದುಡಿಯಬೇಕಾಗುತ್ತದೆ.

ಈ ರೀತಿಯ ವಸಾಹತುಶಾಹಿಯಿಂದ ನಾವು ಹೊರಬರಬೇಕೆಂದು ಆಶಿಸುವವರಿಗೆ ಇಲ್ಲೊಂದಿಷ್ಟು ಸ್ವಂತ ಆಲೋಚನೆಯ ಕ್ರಮಗಳನ್ನು ಅಳವಡಿಸಿಕೊಳ್ಳಲು ಗೂಗಿಯವರು ಕರೆಕೊಟ್ಟಿರುವುದು ಕಾಣುತ್ತೇವೆ. ಹೋರಾಟದ ಸೂತ್ರವನ್ನು ಒಗ್ಗಟ್ಟಿನಿಂದ ಪ್ರದರ್ಶಿಸುವುದು, ತಂತಮ್ಮ ಸಂಸ್ಕೃತಿಗಳನ್ನು ಇರುವ ಹೋರಾಟದ ಆಯುಧಗಳನ್ನು ಮತ್ತಷ್ಟು ದೃಢವಾಗಿ ಪ್ರಯೋಗಿಸುವುದು, ಹೋರಾಟದ ಸಾಮಾನ್ಯ ಭಾಷೆಯೊಂದನ್ನು ಹೊರಕ್ಕೆ ಸೆಳೆದು, ಅದರಲ್ಲಿ ಪರಸ್ಪರ ಮಾತನಾಡುವುದು ಕೊನೆಗೆ ಸಾಮ್ರಾಜ್ಯಶಾಹಿಗಳ ಎಲ್ಲಾ ಬೆದರಿಕೆಗಳ ಮುಖಾಮುಖಿಯಾಗಿ ನಿಲ್ಲುವ ಮೂಲಕ ಸ್ವಂತಿಕೆಯಿಂದ ತಲೆಎತ್ತಿ ಬದುಕುವ ಕಲೆ ಕಲಿತುಕೊಳ್ಳಬೇಕಾಗಿರುವುದು ನಮ್ಮೆಲ್ಲರ ಕರ್ತವ್ಯವಾಗಿರುವುದನ್ನು ಎಚ್ಚರಿಸಿರುವುದು ಮನಗಾಣಬೇಕಿದೆ.

ಸಾಹಿತ್ಯಿಕವಾಗಿ, ಸಾಂಸ್ಕೃತಿಕವಾಗಿ, ರಾಜಕೀಯವಾಗಿ ಯೂರೋಪಿನ ದೇಶಗಳ ಜೊತೆಗೆ ಹೋರಾಡುವುದರಲ್ಲೇ ಪೂರ್ವದೇಶಗಳ ಬುದ್ಧಿಜೀವಿಗಳು (ಸಬಾಲ್ಟನ್, ಗೂಗಿ, ಡೆವಿಡ್ ಡಿಯೋಪ, ಓಬಿವಲಿ) ಜೀವನಪೂರ್ತಿ ಕಳೆದಿದ್ದಾರೆ, ಇನ್ನೂ ಕೆಲವರು ಹೋರಾಡುತ್ತಿದ್ದಾರೆ. ಇದು ಸಾಮ್ರಾಜ್ಯಶಾಹಿಯು ಭೌತಿಕವಾಗಿ ಮಾತ್ರವಲ್ಲದೆ ಬೌದ್ಧಿಕವಾಗಿಯೂ ಆಳುತ್ತಿರುವ ಪರಿಯಾಗಿದೆ (ಮಾನಸಿಕ ಒತ್ತಡದೊಂದಿಗೆ ಘಾಸಿಗೊಳಿಸಿರುವುದು). ಅಂದರೆ ಇಲ್ಲಿನ ದೇಶಿ ನೆಲದ ವಾರಸುದಾರರ ಪರವಾಗಿಯಾದರೂ ಬೆನ್ನೆಲುಬಾಗಿ ನಿಂತರೆ ಅವರನ್ನು ಸಹ ಒಂದು ರೀತಿಯಲ್ಲಿ ತಮ್ಮ ತಂತ್ರಗಾರಿಕೆಗೆ ಒಳಗು ಮಾಡಿಕೊಂಡು ತಮ್ಮ ನಾಡು-ನುಡಿಗಾಗಿ ಶ್ರಮಿಸುವಂತೆ ಮಾಡಿಕೊಳ್ಳುತ್ತಾರೆ. ಆದಾಗ್ಯೂ ಗೂಗಿಯವರ ದಿಟ್ಟ ಉತ್ತರವೆಂದರೆ ಎಲ್ಲಿಯವರೆಗೆ ತನ್ನ ತಾಯ್ನೆಲದಿಂದ ಈ ವಸಾಹತುಶಾಹಿ/ಬಂಡವಾಳಶಾಹಿ ರಾಷ್ಟ್ರಗಳು ಕಾಲು ಕೀಳುವುದಿಲ್ಲವೋ ಅಲ್ಲಿಯವರೆಗೆ ಈ ನೆಲದಿಂದ ದುಡಿಯುವ ಶ್ರಮಿಕವರ್ಗ ಮತ್ತು ರೈತಾಪಿವರ್ಗ ತನ್ನ ಸ್ವಾತಂತ್ರ್ಯಕ್ಕಾಗಿ ಹೋರಾಟದಲ್ಲಿ ನಿರತವಾಗಿರುತ್ತವೆ ಎಂದು ಆಶಾದಾಯಕದ ನುಡಿ ನುಡಿಯುತ್ತಾರೆ.

ಅವರ ಒಟ್ಟು ಚಿಂತನೆಯ ಸಾರವಿರುವುದು ತನ್ನತನವನ್ನು ಕಳೆದುಕೊಂಡ ದೇಶ ದಾಷ್ಟಿಕವಾಗಿ ಬಾಳುವುದೆಂತು ಸಾಧ್ಯ ಎನ್ನುವುದಾಗಿದೆ. ಹಾಗಾಗಿ ನಾವು ಎದೆಗಾರಿಕೆಯಿಂದ ಧೈರ್ಯದಿಂದ ವಸಾಹತುಶಾಹಿ ರೂಪವಾದ ಬಂಡವಾಳಶಾಹಿ ದೇಶಗಳನ್ನು ಎದುರುಗೊಳ್ಳಬೇಕಾಗಿದೆ ಎಂದು ಅರಿಯಬೇಕಿದೆ. ಒಟ್ಟಾರೆಯಾಗಿ ವಸಾಹತುಶಾಹಿ ದೇಶಗಳು ವಸಾಹತು ದೇಶಗಳನ್ನು ಆತ್ಮವಿಶ್ವಾಸದಿಂದಲೇ ವಿಮುಖವಾಗಿ ಬದುಕುವಂತೆ ಮಾಡಿಕೊಂಡು ಬಂದಿವೆ. ಆದರೆ ಈಗ ಎಲ್ಲಾ ದೇಶಗಳು ಅರಿತು-ಅರಿತು ಬಂಡವಾಳಶಾಹಿ ಮುಖವಾಡ ಹಾಕಿ ದುರ್ಬಲ ರಾಷ್ಟ್ರಗಳ ಮೇಲೆ ತನ್ನ ಆಳ್ವಿಕೆಯನ್ನು ಒಪ್ಪಿಕೊಳ್ಳುವಂತೆ ವರ್ಚಸ್ಸು ಹೇರುತ್ತಿರುವ ರಾಷ್ಟ್ರಗಳ ಒಳಮರ್ಮವನ್ನು ತಿಳಿದು ಹೊಸ ಬದುಕನ್ನು ಕಟ್ಟಿಕೊಳ್ಳಲು ಹೊಸ ಹೆಜ್ಜೆಯನ್ನು ಜಾಗರೂಕತೆಯಿಂದ ಇಡಬೇಕಾಗಿದೆ.

-ಡಾ. ಹಾ.ಮ ನಾಗಾರ್ಜುನ
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ



# ತೆರ ಪದ್ಧತಿ

ಪ್ರಪಂಚದ ಎಲ್ಲಾ ಆದಿವಾಸಿ ಸಮುದಾಯಗಳ ಮದುವೆ ಸಂದರ್ಭದಲ್ಲಿ ಗಂಡಿನ ಕಡೆಯವರು ಹೆಣ್ಣಿಗೆ ಅಥ ಹೆಣ್ಣಿನ ಕಡೆಯವರಿಗೆ ಧನ,ದಾನ್ಯ ಮತ್ತು ವಸ್ತುಗಳನ್ನು ಉಡುಗೊರೆಯಾಗಿ ನೀಡುವ ಪದ್ಧತಿಯನ್ನು ತೆರ ಕೊಡುವ ಪ ಎಂದು ಕರೆಯಲಾಗುತ್ತದೆ. ಪಾರಂಪರಿಕವಾಗಿ ಬೆಳೆದು ಬಂದ ಈ ಪದ್ಧತಿ ಬಹಳ ವರ್ಷಗಳ ಕಾಲ ಬಳಕೆಯಲ್ಲಿತ್ತು ಅ ಕಾಲಾನಂತರ ಸಮಾಜದಲ್ಲಿ ಆದ ಹೊಸ ಬದಲಾವಣೆಗಳ ಪರಿಣಾಮವಾಗಿ ತೆರ ಕೊಡುವ ಪದ್ಧತಿ ಹಿನ್ನೆಲೆಗೆ ಸ ಮಾಯವಾಗುತ್ತಾ, ಇದಕ್ಕೆ ವಿರುದ್ಧವಾದ ಹೆಣ್ಣಿನ ಕಡೆಯವರು ಗಂಡಿಗೆ ಅಥವಾ ಗಂಡಿನ ಕಡೆಯವರಿಗೆ ಹಣ, ಬಂಗಾರ ಮ ಬೆಲೆ ಬಾಳುವ ವಸ್ತುಗಳನ್ನು ನೀಡುವ ಹೊಸ ಪದ್ಧತಿಯೊಂದು ಬಳಕೆಯಲ್ಲಿ ಬಂತು. ಈ ಪದ್ಧತಿಯನ್ನು 'ವರದಕ್ಷಿಣೆ ಪ ಎಂದು ಕರೆಯಲಾಗುತ್ತಿದೆ. ಇದರ ಪರಿಣಾಮವಾಗಿ ಹೆಣ್ಣಿನ ತಂದೆ ತಾಯಿಯರಿಗೆ ತಮ್ಮ ಹೆಣ್ಣು ಮಕ್ಕಳ ಮದುವೆ ಅ ಹೊರೆಯಾಗಿ ಪರಿಣಮಿಸಿದೆ. ಈ ಕಾರಣಕ್ಕಾಗಿ ತಮಗೆ ಹೆಣ್ಣು ಮಕ್ಕಳೇ ಬೇಡ ಎಂಬಂತ ಅಸಹಜ ಭಾವನೆಗಳು ಹೆಚ್ಚಾಗು ಅಷ್ಟೇ ಅಲ್ಲ, ಹುಟ್ಟುವ ಮಗು ಹೆಣ್ಣೆಂದು ತಿಳಿದರೆ ಗರ್ಭದಲ್ಲಿಯೇ ಆ ಭ್ರೂಣವನ್ನು ನಾಶಗೊಳಿಸುವಂಥ ಹೇಯ ಕೃತ್ಯ ಮಾಡುವ ಹಂತ ತಲುಪಿದೆ. ಹೀಗೆ ಹಿಂದಿನ ಅರ್ಥಪೂರ್ಣ ಆಚರಣೆಯೊಂದು ಅತ್ಯಂತ ಕ್ರೂರ ಪದ್ಧತಿಯಾಗಿ ರೂಪಾಂತರಗೊ ಸಮಾಜಕ್ಕೆ ಮಾರಕವಾಗಿ ಪರಿಣಮಿಸಿರುವುದು ಒಂದು ಚಾರಿತ್ರಿಕ ವ್ಯಂಗ್ಯವೇ ಸರಿ. ಇಂಥ ಸಾಮಾಜಿಕ ಪಿಡುಗೊಂ ನಿರ್ಮೂಲನೆ ಮಾಡುವ ದಿಕ್ಕಿನಲ್ಲಿ ಸರ್ಕಾರಗಳು ಹಾಗೂ ಸ್ವಯಂ ಸೇವಾ ಸಂಸ್ಥೆಗಳು ತಮ್ಮ ಕಾನೂನು ಮತ್ತು ಹೋರಾ ಮೂಲಕ ನಿರಂತರ ಪ್ರಯತ್ನಗಳನ್ನು ನಡೆಸಿವೆ ಆದರೆ ಫಲಿತಗಳು ಮಾತ್ರ ತೃಪ್ತಿಕರವಾಗಿಲ್ಲ. ಇಂಥ ಸಂದರ್ಭದಲ್ಲಿ ವರದ ಪದ್ಧತಿಗೆ ತದ್ವಿರುದ್ಧ ರೂಪವಾದ 'ತೆರ' ಕೊಡುವ ಪದ್ಧತಿಯ ಸ್ವರೂಪ ಮತ್ತು ಆಶಯಗಳನ್ನು ತಿಳಿದುಕೊಳ್ಳುವುದು ಪ್ರಬಂಧದ ಪ್ರಧಾನ ಉದ್ದೇಶವಾಗಿದೆ.

**ತೆರ : ಹಾಗೆಂದರೇನು ?**

ತೆರ ಎಂಬ ಶಬ್ದಕ್ಕೆ ಶುಲ್ಕ, ಕರ ಎಂಬ ಸಾಮಾನ್ಯ ಅರ್ಥಗಳನ್ನು ಭಾಷಾ ಶಬ್ದಕೋಶಗಳು ನೀಡುತ್ತವೆ. ಇದೇ ಸಮುದಾಯಗಳ ಸಾಂಸ್ಕೃತಿಕ ವಲಯದಲ್ಲಿ ವಿಶೇಷ ಅರ್ಥ ಪಡೆದುಕೊಂಡು, ಮದುವೆ ಸಂದರ್ಭದಲ್ಲಿ ಗಂಡಿನ ಕಡೆಯ ಹೆಣ್ಣಿನ ಕಡೆಯವರಿಗೆ ನೀಡುವ ಹಣ ಮತ್ತು ದವಸ ದಾನ್ಯವೇ ತೆರ ಎನಿಸಿಕೊಂಡಿದೆ. ಇದನ್ನೇ ಆಧುನಿಕ ಕಾಲಕ್ಕೆ ವಧುದ ಕನ್ಯಾ ಶುಲ್ಕ ಮೊದಲಾದ ಹೆಸರುಗಳಿಂದ ಕರೆಯಲಾಗುತ್ತಿದೆ. ಅಷ್ಟೇ ಅಲ್ಲದೆ ಬೇರೆ ಬೇರೆ ಸಮುದಾಯಗಳಲ್ಲಿ ಬೇರೆ ಬೆ ಹೆಸರುಗಳಿಂದ ಕರೆಯಲಾಗುತ್ತದೆ. ಉದಾ : ಕರಾರ್(ಲಂಬಾಣಿ), ಮೆಹರ್(ಹಕ್ಕಿಪಿಕ್ಕಿ), ಓಲಿ(ಬೈಲು ಪತ್ತಾರ), ಸುಖ ಮಂಚ(ಮ ಬೇಡರು) ಇತ್ಯಾದಿ. ಇದಲ್ಲದೆ ಬೇರೆ ಬೇರೆ ಧರ್ಮಗಳಲ್ಲಿ ಹೆಣ್ಣಿಗೆ ತೆರ ಕೊಡುವ ಪದ್ಧತಿ ಬಳಕೆಯಲ್ಲಿದ್ದು ಅದನ್ನು ತಮ್ಮ ಭಾಷೆಯಲ್ಲಿ ಹೆಸರಿಸಿಕೊಂಡಿದ್ದಾರೆ. ಉದಾ : ಇಸ್ಲಾಂ ಧರ್ಮದಲ್ಲಿ 'ಮೆಹರ್' ಎಂಬುದಾಗಿ ಕರೆಯಲಾಗಿದೆ.

**ತೆರ ಪದ್ಧತಿಯ ಚರಿತ್ರೆ ಮತ್ತು ವ್ಯಾಪ್ತಿ**

ತೆರ ಕೊಡುವ ಪದ್ಧತಿ ಭಾರತ ಮಾತ್ರವಲ್ಲ ಜಗತ್ತಿನ ಬಹುತೇಕ ದೇಶಗಳಲ್ಲಿ ಪ್ರಚಲಿತವಿದ್ದ, ಈಗಲೂ ಸ್ವಲ್ಪ ಮ ಚಾಲ್ತಿಯಲ್ಲಿರುವ ಪದ್ಧತಿ. ಇದು ಮಾತೃಪ್ರಧಾನ ಸಮಾಜವನ್ನು ಹೊಂದಿದ ಸಮುದಾಯಗಳಲ್ಲಿ ಬಳಕೆಯಲ್ಲಿದ್ದುದು ಕಂಡುಬರು ವೇದಗಳ ಕಾಲದಿಂದಲೂ ಈ ಪದ್ಧತಿ ಆಚರಣೆಯಲ್ಲಿರುವ ಬಗ್ಗೆ ತಿಳಿದುಬರುತ್ತದೆ. ವಿಶೇಷವಾಗಿ ಬುಡಕಟ್ಟು ಸಮಾಜಗ ಹೇರಳವಾಗಿ ಪ್ರಚಲಿತದಲ್ಲಿರುವುದಾಗಿ ತಿಳಿದು ಬರುತ್ತದೆ. ಮಾನವನ ಆದಿಮಾ ಸ್ಥಿತಿಯ ಬದುಕಿನಲ್ಲಿ ಅತ್ಯಂತ ಸಹಜ ನಡಾವಳಿಯ ಈ ತೆರ ಕೊಡುವ ಸಂಪ್ರದಾಯ ಹುಟ್ಟಿಕೊಂಡು ನಂತರ ಸಮಾಜದ ಮುಂದಿನ ಹಂತಗಳಿಗೆ ಹರಡಿಕೊಂಡಿದೆ. ವಿಶೇಷ ಭಾರತದ ಅವೈದಿಕ ಸಮಾಜಗಳಲ್ಲಿ ಈ ಪದ್ಧತಿ ಕಡ್ಡಾಯವಾಗಿ ಮಾಡಲೇ ಬೇಕಾದ ಆಚರಣೆಯಾಗಿತ್ತು, ಈಗಲೂ ಸ್ವಲ್ಪಮ ಈ ಪದ್ಧತಿ ಉಳಿದುಕೊಂಡು ಬಂದಿದೆ. ಹಿಂದೂಗಳಲ್ಲದೆ ಇಸ್ಲಾಂ ಮತ್ತಿತರ ಧರ್ಮಗಳಲ್ಲಿಯೂ ಈ ಪದ್ಧತಿ ಬಳಕೆಯಲ್ಲಿ ಹಿಂದೂಗಳಿಗೆ ಹೋಲಿಸಿದರೆ ಇತರೆ ಧರ್ಮಗಳಲ್ಲಿ ಇಂದಿಗೂ ಹೆಚ್ಚು ಗಾಢವಾಗಿ ಬಳಕೆಯಲ್ಲಿದೆ.

**ತೆರ ಪದ್ಧತಿಯ ಸ್ವರೂಪ**

ಈಗಾಗಲೇ ಪ್ರಸ್ತಾಪಿಸಿದಂತೆ ತೆರ ಪದ್ಧತಿ ಪ್ರಪಂಚಾದ್ಯಂತ ವಿಶೇಷವಾಗಿ ಬುಡಕಟ್ಟು ಸಮಾಜಗಳಲ್ಲಿ ಬಳಕೆಯಲ್ಲಿ ಎಲ್ಲಾ ಸಮಾಜಗಳಲ್ಲಿ ಒಂದೇ ತೆರನಾಗಿಲ್ಲ ಎಂಬುದು ಕುತೂಹಲದ ಸಂಗತಿ. ವಧು ದಕ್ಷಿಣೆ ಅಥವಾ ತೆರ ನಗದು ರೂಪ ಅಥವಾ ಬಟ್ಟೆ, ಒಡವೆ, ಅಡುಗೆ ಪಾತ್ರೆ, ಧಾನ್ಯ, ಸರಾಯಿಗಳ ರೂಪದಲ್ಲಿ, ಹಸು, ಆಡು, ಎಮ್ಮೆ ಮುಂತಾದ ಪ ರೂಪದಲ್ಲಿರುತ್ತಿತ್ತು. ಈ ತೆರವನ್ನು ನೇರವಾಗಿ ಹೆಣ್ಣಿಗೆ, ಹೆಣ್ಣಿನ ತಂದೆ ತಾಯಿಗೆ ಕೆಲವೊಮ್ಮೆ ಹೆಣ್ಣಿನ ಸೋದರ ಮಾವನಿಗೆ



Scanned with OKEN Scanner

ನೀಡುವ ಪದ್ಧತಿಯಿದೆ. ಆದರಲ್ಲೂ ಈ ತೆರವನ್ನು ಹೆಣ್ಣು ನಿಶ್ಚಯದ ಸಂದರ್ಭದಲ್ಲಿ ನಿಗದಿಪಡಿಸಿ ಅರ್ಧಹಣವನ್ನು ಆಗಲೇ ಉಳಿದಿದ್ದನ್ನು ಆನಂತರ ನೀಡಬಹುದು. ಹಾಗಾಗಿ ತೆರ ಕೊಡುವ ಮಾದರಿಗಳು ಈ ಮುಂದಿನಂತಿವೆ.

ಲಂಬಾಣಿ ಸಮುದಾಯದಲ್ಲಿ ಗೋವು ಮತ್ತು ಹಣದ ರೂಪದಲ್ಲಿ ತೆರ ಕೊಡುವ ಕ್ರಮ ಇತ್ತು. ಗೋವಿನ ರೂಪದಲ್ಲಿ ಕೊಟ್ಟರೆ ರಾಂಸಡೀ ಕರಾರ್ ಎಂತಲೂ, ಹಣದ ರೂಪದಲ್ಲಿ ವಾಂಸಳೀ ಕರಾರ್ ಎಂತಲೂ ಕರೆಯಲಾಗುತ್ತದೆ(ಕರ್ನಾಟಕದ ಬುಡಕಟ್ಟುಗಳು-೨, ಪುಟ-೧೨೮).

ಹಕ್ಕಿ-ಪಿಕ್ಕಿಗಳಲ್ಲಿ ಹಣದ ರೂಪದಲ್ಲಿಯಷ್ಟೇ ತೆರ ನೀಡುವ ಪದ್ಧತಿಯಿದ್ದು ಅದು ರೂ ೧೨ ರಿಂದ ೬೦೦ ರವರೆಗೆ ನಿಗದಿಮಾಡಲಾಗುತ್ತದೆ.

ರಾಜಗೊಂಡರಲ್ಲಿ ಅಕ್ಕಿ ಬೆಲ್ಲ ನೀಡಿದರೆ. ಕೊರಮರಲ್ಲಿ ಕೇವಲ ಹಣ ನೀಡುವ ಕ್ರಮವಿದೆ. ಹಣದ ಪ್ರಮಾಣ ಕೇವಲ ೭೨ ರೂ ಇದ್ದು; ಇದರಲ್ಲಿ ೪೦ ರೂ ಸೋದರ ಮಾವನಿಗೆ, ೩೦ ರೂ ತಂದೆಗೆ, ೨ ರೂ ತಾಯಿಗೆ (ಹಾಲು ಕುಡಿಸಿದ ಕೂಲಿ) ಕೊಡಲಾಗುತ್ತದೆ. ಇದರಲ್ಲಿ ಸೋದರ ಮಾವ ಪಡೆದ ಹಣವನ್ನು ತಾವೇ ಇರಿಸಿಕೊಳ್ಳಬಹುದು ಅಥವಾ ಹೆಣ್ಣಿಗೆ ಮರಳಿಸಬಹುದು.

ಕರೆ ಒಕ್ಕಲರು ಬೆಳ್ಳಿ ನಾಣ್ಯಗಳನ್ನು ಭತ್ತ ಮತ್ತು ಬೆಲ್ಲವನ್ನು ಕೊಡುವ ಸಂಪ್ರದಾಯವಿದ್ದು, ಅದರ ಪ್ರಮಾಣ ೩೨ ಬೆಳ್ಳಿ ನಾಣ್ಯಗಳು(೮ ವರಹ) ೧೫-೨೦ ಚೀಲ ಭತ್ತ, ೪-೫ ಡಬ್ಬಿ ಬೆಲ್ಲ ಆಗಿರುತ್ತದೆ.

ಮ್ಯಾಸ ಬೇಡರಲ್ಲಿ 'ಸುಖಿಮಂಚಿ' ಎಂಬ ಹೆಸರಲ್ಲಿ ಅವರವರ ಸಾಮರ್ಥ್ಯಕ್ಕನುಗುಣವಾಗಿ ಸಜ್ಜೆ, ಜೋಳ, ಅಕ್ಕಿ, ಗೋದಿ ನೀಡುವ ಕ್ರಮವಿದೆ. ಗಂಡಿನ ಕಡೆಯವರು ಹೆಣ್ಣಿನ ಮನೆಯಲ್ಲಿ ಸಮುದಾಯದ ಹಿರಿಯರ ಸಮ್ಮುಖದಲ್ಲಿ ಧಾನ್ಯ ಅಳೆದುಕೊಡುವ ಪದ್ಧತಿ ಈಗಲೂ ಬಳಕೆಯಲ್ಲಿದೆ.

ಅಸ್ಸಾಮಿನ ನಾಗ ಮತ್ತು ಇತರ ಬುಡಕಟ್ಟುಗಳಲ್ಲಿ, ಮಧ್ಯಭಾರತದ ಹಲವು ಬುಡಕಟ್ಟುಗಳಲ್ಲಿ ಈ ವಿವಾಹಪದ್ಧತಿ ರೂಢಿಯಲ್ಲಿದೆ. ತೆರಮೌಲ್ಯ ಬುಡಕಟ್ಟಿನಿಂದ ಬುಡಕಟ್ಟಿಗೆ ವ್ಯತ್ಯಾಸವಾಗುತ್ತದೆ. ಅಭೋರರಲ್ಲಿ ಗಂಡಿನ ಕುಟುಂಬದವರು ತಮ್ಮ ಶಕ್ತ್ಯಾನುಸಾರ ಭಕ್ಷ್ಯ ಭೋಜ್ಯಗಳನ್ನು ತಯಾರಿಸಿ ಹೆಣ್ಣಿನ ಕುಟುಂಬದವರಿಗೆ ಕಳುಹಿಸುವರು. ಹೀಗೆ ಕಳುಹಿಸಿದ ಆಹಾರವನ್ನೇ ತೆರ ಎಂದು ಭಾವಿಸಲಾಗುತ್ತದೆ.

ಉರಿ ಬಿಸಿಲ ನಾಡಿನಲ್ಲಿ ಬದುಕುವ ಕುಟುಂಬದ ತಂದೆಯೊಬ್ಬ ತನ್ನ ಮಗಳನ್ನು ಮದುವೆಮಾಡಿಕೊಡಲು ತನ್ನ ಅಳಿಯನಾದವನಿಂದ ಬಯಸಿದ ತೆರವೆಂದರೆ ವರ ಏಳು ವರ್ಷಗಳ ಕಾಲ ಬಿಸಿಲಲ್ಲಿ ದನಗಳನ್ನು ಮೇಯಿಸುವ ಕಾಯಕ ಮಾಡಬೇಕೆಂದು ಕೇಳಿದ್ದಾನೆ.

### ರ ಪದ್ಧತಿಯ ಮಹತ್ವ

ಈ ಮೇಲೆ ವಿವರಿಸಿದಂತೆ ತೆರ ಕೊಡುವ ಸಮುದಾಯಗಳು ಆದಿಯಿಂದಲೂ ಇದನ್ನು ಒಂದು ನಿಯಮದಂತೆ ಪಾಲಿಸಿಕೊಂಡು ಬಂದಿವೆ. ಹಾಗಾದರೆ ಈ ಪದ್ಧತಿಯ ಹಿಂದಿರುವ ನಿಜವಾದ ಉದ್ದೇಶಗಳೇನು? ಎಂಬ ಪ್ರಶ್ನೆಯನ್ನು ಳಿಕೊಂಡರೆ ತೆರದ ಮಹತ್ವ ತಿಳಿಯುತ್ತದೆ. ತೆರ ಕೊಡುವುದು ಇಂದಿನ ವರದಕ್ಷಿಣೆ ಪದ್ಧತಿಯಂತೆ ಒತ್ತಾಯದ ಬೇಡಿಕೆಯಾಗದೆ, ಅದು ಒಂದು ಸಂಪ್ರದಾಯದಂತೆ ನಡೆದುಕೊಂಡು ಬಂದಿರುವುದು ಕಂಡುಬರುತ್ತದೆ. ಬಹುಪಾಲು ಸಂದರ್ಭಗಳಲ್ಲಿ ಎಷ್ಟೇ ಶ್ರೀಮಂತನಾದರೂ ಕೊಡಬೇಕಾದ ತೆರ ಒಂದೇ ರೀತಿಯಾಗಿರುವುದು ಈ ಅಭಿಪ್ರಾಯಕ್ಕೆ ಪುಷ್ಟಿ ನೀಡುತ್ತದೆ. ಬಹುತೇಕರು ಊಹಿಸಿರುವಂತೆ ಮದುವೆಯಾಗುವ ಹೆಣ್ಣು ಗಂಡಿನ ಸಂಬಂಧಗಳು ಗಟ್ಟಿಯಾಗಿರಲಿ ಅಥವಾ ಸುಲಭವಾಗಿ ಮುರಿಯದಿರಲಿ. ಹೆಣ್ಣು ಗಂಡಿಗೆ ವಿಧೇಯಳಾಗಿರಲಿ ಎಂಬ ಉದ್ದೇಶ ತೆರ ಕೊಡುವ ಕ್ರಮದ ಹಿಂದಿರುವ ಉದ್ದೇಶವಾಗಿದೆ. ಆದ್ದರಿಂದಲೆ ಇಲ್ಲಿ ಗಂಡು ನೀಡುವ ವಸ್ತು ಹಾಗೂ ಹಣದ ರೂಪದ ತೆರ ಅದರ ಬೆಲೆಯ ಆಯಾಮಕ್ಕಿಂತ ನಂಬಿಕೆಯ ಮೌಲ್ಯಧಾರಿತವಾಗಿರುವುದು ಸ್ಪಷ್ಟವಾಗುತ್ತದೆ. ಇಲ್ಲಿ ಎಷ್ಟು ಪ್ರಮಾಣದ ತೆರ ಕೊಟ್ಟಿದ್ದಾರೆ ಎಂಬುದು ಮುಖ್ಯವಾಗುವುದಿಲ್ಲ. ಬದಲಿಗೆ ತೆರ ಕೊಟ್ಟಿದ್ದಾನೆ ಎಂಬ ನಂಬಿಕೆ ಮಾತ್ರ ಮುಖ್ಯವಾಗುತ್ತದೆ. ಒಮದು ಪಕ್ಷ ತೆರ ಪಡೆದ ವಿವಾಹವಾದ ಹೆಣ್ಣು ಗಂಡ ಬೇಡವೆನಿಸಿದಾಗ ಆತ ನೀಡುವ ತೆರದ ಪೂರ್ಣ ಪ್ರಮಾಣದಲ್ಲಿ ಅಥವಾ ಅರ್ಧದಷ್ಟನ್ನು ಗಂಡಿಗೆ ಹಿಂದುರಿಗಿಸಬೇಕಾಗುತ್ತದೆ. ಇಂಥ ಸಂದರ್ಭದಲ್ಲಿ ಹೆಣ್ಣಿನ ಕಡೆಯವರು ಶ್ರೀಮಂತರಾಗಿದ್ದರೂ ತೆರ ಹಿಂದಿರುಗಿಸುವುದು ಎಂದರೆ ಅದು ಅವಮಾನದ ಮೌಲ್ಯಹೀನವಾದ ಕಾರ್ಯವಾಗಿರುತ್ತದೆ. ಹಾಗಾಗಿಯೇ ತೆರ ಕೊಡುವುದು ಎಂದರೆ ಕೇವಲ ಧನ ಧಾನ್ಯದ ವಹಿವಾಟಲ್ಲ ಎಂಬ ಸತ್ಯವನ್ನು ಎಲ್ಲರೂ ಅರ್ಥಮಾಡಿಕೊಂಡವರಾಗಿದ್ದರು.

### ತೆರ ಪದ್ಧತಿಯ ಆಧುನಿಕ ಆಯಾಮಗಳು

ತೆರ ಪದ್ಧತಿ ಆದಿಮಾ ಸಮಾಜಗಳ ಒಂದು ಸಾಮಾಜಿಕ ನಡಾವಳಿಯಾಗಿದ್ದು, ವೇದಗಳ ಕಾಲದಿಂದಲೂ ಇದ ಅಸ್ತಿತ್ವದ ಬಗ್ಗೆ ಸ್ಪಷ್ಟವಾದ ಉದಾಹರಣೆಗಳು ದೊರೆಯುತ್ತವೆ. ಅಂದಿನಿಂದ ಇಂದಿನವರೆಗೂ ಈ ತೆರ ಪದ್ಧತಿ ಬೇರೆ ಬೇ ರೂಪಗಳಲ್ಲಿ ಉಳಿದು ಬಂದಿದೆ. ವರದಕ್ಷಿಣೆ ಬಹು ವ್ಯಾಪಕವಾಗಿ ಪ್ರಚಲಿತದಲ್ಲಿರುವ ಈ ಕಾಲದಲ್ಲಿಯೂ ಕನ್ಯಾಶುಲ್ಕ, ವಧುದಕ್ಷಿ ಎಂಬ ಹೆಸರಿನಲ್ಲಿ ಪ್ರಚಲಿತದಲ್ಲಿದೆ. ಗಂಡಿನ ಕಡೆಯವರು ಒಂದು ಕಡೆ ಭಾರೀ ಪ್ರಮಾಣದಲ್ಲಿ ವಧುವಿನ ಕಡೆಯಿಂದ ವರದಕ್ಷಿ ಪಡೆದರೂ ಮತ್ತೊಂದು ಕಡೆ ಸಂಪ್ರದಾಯದ ಪದ್ಧತಿಯಾಗಿ ಅಲ್ಪ ಪ್ರಮಾಣದಲ್ಲಿಯಾದರೂ ಹೆಣ್ಣಿಗೆ ತೆರ ಕೊಡುವುದ ನಾವು ಗಮನಿಸುತ್ತೇವೆ. ಇಂಥ ತೆರ ಸಂಪ್ರದಾಯ ಇಂದು ಪ್ರಪಂಚದಾದ್ಯಂತ ಉಳಿದು ಬಂದಿರುವುದು ಗೋಚರಿಸುತ್ತದೆ. ಈ ಹಿನ್ನೆಲೆಯಲ್ಲಿ ಜಗತ್ತಿನಲ್ಲಿ ನಡೆದ ಕೆಲವು ಕುತೂಹಲಕರವಾದ ತೆರ ಪದ್ಧತಿಯ ಸಂಗತಿಗಳನ್ನು ನೋಡುವುದಾದರೆ

ಅಮೇರಿಕಾದ ಮಾಜಿ ಅಧ್ಯಕ್ಷ ಒಬಾಮ ಅವರ ಹಿರಿಯ ಮಗಳು ಮಾಲಿಯಾಳನ್ನು ಮದುವೆ ಮಾಡಿಕೊಳ್ಳ ೫೦ ಹಸು, ೭೦ ಕುರಿ ಹಾಗೂ ೩೦ ಮೇಕೆಗಳನ್ನು ವಧುದಕ್ಷಿಣೆಯಾಗಿ ಕೊಡುವುದಾಗಿ ಕೀನ್ಯಾ ವಧುದಕ್ಷಿಣೆ ರೂಪದಲ್ಲಿ ಹೇಳಿದ್ದಾಗಿ ವರದಿಯಾಗಿದೆ. ನೈರೋಬಿಯನ್ ಪತ್ರಿಕೆ ಒಂದ ಬುಡಕಟ್ಟು ಸಮುದಾಯಕ್ಕೆ ಸೇರಿದ ವಕೀಲ ಫೆಲಿಕ್ಸ್ ಕಿಪ್ರೋನೋ ಹೇಳಿದ್ದಾಗಿ ಈ ಅಭೀಪ್ಸೆಯನ್ನು ಹೇಳಿಕೊಂಡಿದ್ದಾನೆ. ಒಬಾಮ ಕೂಡ ಕೀನ್ಯದ ಬುಡಕ ಸಂದರ್ಶನ ನೀಡಿರುವ ಫೆಲಿಕ್ಸ್ ಕಿಪ್ರೋನೋ ಸಮುದಾಯಕ್ಕೆ ಸೇರಿದವರು ಎಂಬುದು ಇಲ್ಲಿ ಗಮನಾರ್ಹ.

ಯೆಮೆನ್ನ ಶೈಜ್ ನಗರದಲ್ಲಿ ಕವಿಯಾಗಿರುವ ಸಲೇಮ್ ಆಯಶ್ ಎಂಬಾತ, ತನ್ನ ಅಳಿಯನಾಗುವವನಿಂದ ಇಂಥದ್ದೊಂ ವಿಚಿತ್ರವಾದ ದಕ್ಷಿಣೆಯನ್ನು ಕೇಳಿದ್ದಾನೆ. ಈತ ಇತ್ತೀಚೆಗೆ ಆರಂಭಿಸಿರುವ ಫೇಸ್‌ಬುಕ್ ಪೇಜ್‌ಗೆ ಇದುವರೆಗೆ ೩೦,೦೦ ಲೈಕ್‌ಗಳು ಬಂದಿವೆ. ಇದನ್ನು ೧೦ ಲಕ್ಷಕ್ಕೆ ಏರಿಸುವುದೇ ಆತನ ಗುರಿ. ಹೀಗಾಗಿ ಇದನ್ನು ಸಂಪಾದಿಸಲು ವರ್ಷಗ ತೆಗೆದುಕೊಂಡರೂ ಚಿಂತೆ ಇಲ್ಲ. ಅಳಿಯನಾಗುವವನ ಪ್ರಯತ್ನ ಇಷ್ಟವಾದರೆ ಮಗಳನ್ನು ಮದುವೆ ಮಾಡಿಕೊಡುವುದಾ ಹೇಳಿದ್ದಾನಂತೆ.

ಕೇರಳದ ಮಲೆಯಾಳಿ ವಧು 'ಸಹ್ಲಾ ನೆಚ್ಚಿಲ್' ಎಂಬ ಮುಸ್ಲೀಂ ಮಹಿಳೆ ತಮ್ಮ ಧರ್ಮದ ಪದ್ಧತಿಯ ಪ್ರಕಾ ಬಂಗಾರ, ವಜ್ರ ಮತ್ತು ಹಣದ ರೂಪದಲ್ಲಿ ಪಡೆಯಬೇಕಿದ್ದ ತೆರದ ಬದಲಿಗೆ ೫೦ ಪುಸ್ತಕಗಳನ್ನು ಕೇಳಿ ಪಡೆದಿದ್ದಾಳೆ

ಮಧ್ಯಪ್ರದೇಶದ ಭಿಂಡ್ ಪ್ರದೇಶದ ಕಿಷಿಪುರ ಗ್ರಾಮದ ಪ್ರಿಯಾಂಕ ಬಡೋರಿಯಾ ಎಂಬ ಯುವತಿ ೧೦ ಸಾವಿ ಗಿಡಗಳನ್ನು ನೆಡಬೇಕು ಎಂಬುದು ತನ್ನ ವರನ ಕಡೆಯವರಿಂದ ಬಯಸಿದ ತೆರ. ಇವಳ ಇಚ್ಛೆಯಂತೆ ಅವರ ಅತ್ತೆ ಮಾ ಅವರ ಮನೆಯ ಬಳಿ ೫ ಸಾವಿರ; ವಧುವಿನ ಮನೆಯ ಬಳಿ ೫ ಸಾವಿರ ಗಿಡಗಳನ್ನು ನೆಡುತ್ತಾರೆ.

### ತೆರ ಪದ್ಧತಿಯ ವಿಕೃತ ರೂಪಗಳು

ತೆರ ಪದ್ಧತಿ ಸ್ತ್ರೀಯರ ಪರವಾದ ಆಲೋಚನೆಯೊಂದಿಗೆ ಆರಂಭಗೊಂಡ ಪದ್ಧತಿ. ಆದರೆ ಈ ಪದ್ಧತಿ ಕಾಲಾನಂತ ವರದಕ್ಷಿಣೆಯಾಗಿ ಬದಲಾಗಿ ಸಮಾಜಿಕ ಪಿಡುಗಾಗಿ ಪರಿವರ್ತನೆಯಾಗಿದ್ದು ಒಂದು ರೀತಿಯ ವಿಕೃತ ಬದಲಾವಣೆ. ಇದ ಮಾದರಿಯ ಮತ್ತೊಂದು ಬದಲಾವಣೆ ಎಂದರೆ ವಧುವಿನ ತಂದೆ ಅಥವಾ ಸ್ವತಃ ವಧು ಈ ಪದ್ಧತಿಯನ್ನೇ ತಮ್ಮ ಅನುಕೂಲ ಬಳಸಿಕೊಂಡು ಆರೋಗ್ಯಕರ ಸಂಪ್ರದಾಯವನ್ನು ಭ್ರಷ್ಟಗೊಳಿಸಿರುವುದನ್ನು ಇಂದು ಕಾಣುತ್ತಿದ್ದೇವೆ. ನಿದರ್ಶನಕ್ಕಾಗಿ ಅಂ ಕೆಲವು ಸಂಗತಿಗಳನ್ನು ಗಮನಿಸುವುದಾದರೆ :

೧. ವಧುವಿನ ತಂದೆಯರು ತೆರ ರೂಪದಲ್ಲಿ ಬರುವ ಹಣದ ಆಸೆಗೆ ಮುದುಕರಿಗೆ, ಎರಡನೇ ಮದುವೆಯಾಗು ವರಗಳಿಗೆ ತಮ್ಮ ಹೆಣ್ಣು ಮಕ್ಕಳನ್ನು ಕೊಟ್ಟು ಮದುವೆ ಮಾಡುವ ಮೂರ್ಖತನದ ನಡೆಗಳನ್ನು ತೋರಿರುವ ಬ ಮಾಧ್ಯಮಗಳಲ್ಲಿ ಸಾಕಷ್ಟು ವರದಿಯಾಗಿದೆ.

೨. ಉತ್ತರ ಕರ್ನಾಟಕದ ೧೦ ಜಿಲ್ಲೆಗಳಲ್ಲಿ ಸಂಘಟಿತ ಕಳ್ಳ ಸಾಗಾಣಿಕೆ ಜಾಲ ಈಗಲೂ ಕಾರ್ಯಾಚರಣೆ ನಡೆಸುತ್ತಿ ಗುಜರಾತ್, ಪಂಜಾಬ್ ಮತ್ತು ಹರಿಯಾಣ ರಾಜ್ಯಗಳಿಂದ ಆಗಮಿಸುವ ಮದುವೆ ಗಂಡುಗಳು ಮದುವೆಯ ಹೆಸರಿ ಹೆಚ್ಚು ವಧು ದಕ್ಷಿಣೆ ನೀಡಿ ಇಲ್ಲಿನ ಬಡಕುಟುಂಬದ ಹುಡುಗಿಯರನ್ನು ಅದರಲ್ಲೂ ದೇವದಾಸಿಯರ ಮನೆಯ ಹೆ ಮಕ್ಕಳನ್ನು ಬೇಟೆಯಾಡುತ್ತಿವೆ



Scanned with OKEN Scanner

೩. ಇನ್ನು ಕೆಲವು ಹೆಣ್ಣು ಮಕ್ಕಳು ತೆರ ರೂಪದಲ್ಲಿ ಸಿಗುವ ಸಂಪತ್ತಿನ ಆಸೆಗಾಗಿ ಗಂಡಸರನ್ನು ಮೋಸಗೊಳಿಸುವ ಪ್ರಸಂಗಗಳು ನಡೆಯುತ್ತಿವೆ. ಉದಾಹರಣೆಗೆ ಥಾಯ್ಲೆಂಡ್ ದೇಶದಲ್ಲಿ ಜರಿಯಾಪೋಬರ್ನ್ ಬುಯಾಂಗ್ ಎಂಬ ಮಹಿಳೆ ಎರಡು ವರ್ಷದಲ್ಲಿ ೧೧ ಮದುವೆಯಾಗಿ ಒಬ್ಬೊಬ್ಬರಿಂದ ೪- ೨೦ ಲಕ್ಷದ ವರೆಗೆ ಹಣ ಪೀಕಿದ್ದಾಳೆ.

ಒಟ್ಟಾರೆ ತೆರ ಪದ್ಧತಿಯು ಹುಟ್ಟಿಕೊಂಡ ಕಾಲ ಹಾಗೂ ಬೆಳೆದ ಕ್ರಮವನ್ನು ಗಮನಿಸಿದರೆ ಇದಕ್ಕೊಂದು ವಿಶಿಷ್ಟ ಸಾಮಾಜಿಕ ಆಯಾಮವಿರುವುದು ಕಂಡುಬರುತ್ತದೆ. ಆದರೆ ಇತ್ತೀಚಿನ ಕೆಲವು ಅಸಹಜ ಬೆಳವಣಿಗೆಗಳಿಂದಾಗಿ ಈ ಕಾಲದ ಬಹುದೊಡ್ಡ ಸಾಮಾಜಿಕ ಪಿಡುಗಾದ ವರದಕ್ಷಿಣೆಗೆ ಸಂವಾದಿಯಾಗಿ ತೆರ ಕೊಡುವ ಆಚರಣೆಯನ್ನೂ ನೋಡಲಾಗುತ್ತಿದೆ. ಸರ್ಕಾರಗಳು ಕೂಡ ಒಂದು ಹಂತದಲ್ಲಿ ಇದೇ ತಪ್ಪನ್ನು ಮಾಡಿರುವುದನ್ನು ಕಾಣಬಹುದಾಗಿದೆ. ಉದಾಹರಣೆಗೆ ವಧು ದಕ್ಷಿಣೆ ನಿಷೇಧ (ಕರ್ನಾಟಕ) ನಿಯಮಗಳು, ೨೦೦೪ ರಲ್ಲಿ ವಧುದಕ್ಷಿಣೆಯನ್ನು ವರದಕ್ಷಿಣೆಗೆ ಸಮಾನವಾಗಿ ಪರಿಗಣಿಸಲಾಗಿದೆ. ಇದು ಸರಿಯಾದ ಕ್ರಮವಲ್ಲ ಎಂಬುದು ನನ್ನ ಸ್ಪಷ್ಟ ಅಭಿಪ್ರಾಯವಾಗಿದೆ. ಮೂಲತಃ ಆದಿಮಾ ಆಚರಣೆಯಾದ ತೆರ ಪದ್ಧತಿ ಬುಡಕಟ್ಟು ಸಮಾಜಗಳಲ್ಲಿ ಯಾವುದೇ ಹಿಂಸೆಯಿಲ್ಲದ ಸಾಂಕೇತಿಕ ಆಚರಣೆಯಾಗಿ ಇಂದಿಗೂ ಬಳಕೆಯಲ್ಲಿದೆ. ಭಾರತೀಯ ಸಮಾಜದ ಶಾಸ್ತ್ರಿಕ ತಳಹದಿಯ ಮೇಲೆ ನಿಂತ ಈ ತೆರ ಪದ್ಧತಿ ಮೂಲತಃ ಯಾವುದೇ ರೀತಿಯ ವ್ಯವಹಾರವಲ್ಲ. ಇಲ್ಲಿ ಬರುವ ಹಣ, ಮತ್ತಿತರ ಯಾವುದೇ ವಸ್ತು ಕೇವಲ ಸಾಂಕೇತಿಕ ಅಷ್ಟೆ. ಈ ಪದ್ಧತಿ ಒಂದು ಮೌಲ್ಯವಾಗಿ ಸಾಮಾಜಿಕ ಸಂಬಂಧಗಳನ್ನು ಬೆಸೆಯುವ ಕ್ರಮವಾಗಿದೆ. ಇಂಥ ಮಹತ್ವದ ಆದಿಮಾ ಆಚರಣೆಯೊಂದು ಇತ್ತೀಚಿನ ದಿನಗಳಲ್ಲಿ ಕೆಲವು ವಿಕೃತ ರೂಪಗಳನ್ನು ಪಡೆದಿದ್ದು ಒಂದು ದುರಂತವೇ ಸರಿ.

-ಡಾ. ಎಸ್.ಎಂ. ಮುತ್ತಯ್ಯ
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ

## A.B.C. OF HAPPINESS

Aspire to reach your goal
Become a good citizen
Create a good life
Dream about what might become
Exercise frequently
Forgive bad things
Glorify the creative spirit
Hunt for good things Instruct to others
Joy fully live everybody
Kindly help others
Love one another
Mediate daily
Nature the Environment
Organize for nation
Praise the performance of others
Query most things
Receive the best one
Smile often
Trust yourself
Visit new places
Work is worship believe as
X-ray & carefully examine the problem
Earn to improve
Zest the life.

**-Sowmya M.**
II year Biotechnology



Scanned with OKEN Scanner

## ಆರ್ಕಿಡ್– ಕಿರು ಪರಿಚಯ

ಸೀತಾಳೆ ಸಸ್ಯ ಸೀತೆ ದಂಡೆ ಹಾಗೂ ಸೋಂಬೇರಿ ಸಸ್ಯ ಎಂದು ಕರೆಯಲು ಪಡುವ ಆರ್ಕಿ ಆರ್ಕಿಡೇಸಿ ಸಸ್ಯ ಕುಟುಂಬಕ್ಕೆ ಸೇರಿದೆ. ಅವುಗಳ ವಿವಿಧ ಪ್ರಭೇದಗಳಲ್ಲಿರುವ ಅನೇಕ ವಿಸ್ಮಯಗಳು, ಕುತೂಹ ರಚನೆ, ಜೈವಿಕ ಮತ್ತು ವಂಶವಾಹಿ ಅಂಶಗಳು ಸಸ್ಯಗಳಲ್ಲೇ ವಿಶೇಷ ಕುಟುಂಬವನ್ನಾಗಿಸಿದೆ. ಈ ಅಂಶ ಸಂಶೋಧನೆಗೆ ಪ್ರಚೋಧನೆ ನೀಡಿ ಸಸ್ಯ ಶಾಸ್ತ್ರದಲ್ಲಿ ಆರ್ಕಿಡಾಲಜಿ ಎನ್ನುವ ಹೊಸ ಅಧ್ಯಯನ ಅ ಕಾರಣವಾಗಿದೆ. ಆರ್ಕಿಡ್ ಎನ್ನುವ ಪದವು ಗ್ರೀಕ್ ಭಾಷೆಯದ್ದಾಗಿದ್ದು, ಸಸ್ಯಜನಕ ಎಂದು ಕರೆಯ ಥಿಯೋಪ್ರಾಸ್ಟಸವರು ವೃಷಣದಂತೆ ಕಾಣುವ ಜೋಡಿ ಬೇರುಗಳನ್ನು ಹೊಂದಿರುವ ಸಸ್ಯಗಳನ್ನು ಆರ್ಕಿಡ್‌ಗ ವಿಶ್ಲೇಷಿಸಿದ್ದಾರೆ.

ಆರ್ಕಿಡ್‌ಗಳು ಬಹುವಾರ್ಷಿಕ ಏಕದಳ ಸಣ್ಣ ಸಸ್ಯಗಳಾಗಿದ್ದು, ಹೂ– ಬಿಡುವ ಏಕದಳ ಸಸ್ಯಗ ಅತ್ಯಂತ ವಿಕಸನ ಹೊಂದಿರುವ ಯಶಸ್ವಿ ಸಸ್ಯಗಳಾಗಿವೆ. ಆರ್ಕಿಡೇಸಿಯ ವಿವಿಧ ಪ್ರಭೇಧಗಳು ವಿಶ್ವವ್ಯಾಪಿ ಹರ ವಿಕಸನ ಹೊಂದಿರುವ ಯಶಸ್ವಿ ಸಸ್ಯ ಕುಟುಂಬ ಎಂಬುದನ್ನು ಸಾಭೀತು ಪಡಿಸಿದೆ. ಆರ್ಕಿಗಳ ಸೌಂದರ್ಯ ಸವಿರುತನ ಸಸ್ಯಶಾಸ್ತ್ರಜ್ಞರನ್ನು ಮತ್ತು ಜನ ಸಾಮಾನ್ಯರನ್ನು ಸರಿಸಮನಾಗಿ ಆಕರ್ಷಿಸಿದೆ. ಆರ್ಕಿಡ್ಗಳು ಪ್ರಪಂಚದ ಉಷ್ಣ ಮತ್ತು ಸಮಶೀತೋಷ್ಣ ವಾತಾವರಣದಲ್ಲಿ ಹರಡಿಕೊಂಡಿದೆ.

<u>ಆರ್ಕಿಡ್‌ಗಳಲ್ಲಿ ಎರಡು ಬಗೆ</u>

1. ನೆಲದ ಮೇಲೆ ಬೆಳೆಯುವ ಆರ್ಕಿಡ್ (ನೆಲವಾಸಿ ಆರ್ಕಿಡ್)
2. ಮರವನ್ನು ಆಶ್ರಯಿಸಿ ಬೆಳೆಯುವ ಆರ್ಕಿಡ್ (ಮರವಾಸಿ ಆರ್ಕಿಡ್)

ನೆಲವಾಸಿ ಆರ್ಕಿಡ್‌ಗಳು ಸಾಮಾನ್ಯವಾಗಿ ಪಶ್ಚಿಮ ಘಟ್ಟದುದ್ದಕ್ಕೂ ಕೊಳೆತ ಮರದ ಎಲೆಗಳ ಮತ್ತು ಹುಲ್ಲುಗಾವಲಿನಲ್ಲಿ ಕಂಡು ಬರುತ್ತವೆ. ಈ ಆರ್ಕಿಡ್‌ಗಳು ಸಾಮಾನ್ಯವಾಗಿ ಮೇಯಿಂದ ಅಕ್ಟೋಬರ್ ಹೂ–ಬಿಟ್ಟು ಪರಾಗ ಸ್ಪರ್ಶದ ನಂತರ ಒಣಗಿ ಹೋಗುತ್ತವೆ. ಮುಂದೆ ಬರುವ ಮೇ ತಿಂಗಳವರೆಗೆ ವೃಷಣದಂತೆ ಕಾಣುವ ಜೋಡಿ ಬೇರು ಜೀವಂತವಾಗಿದ್ದು ಪುನಃ ಮೇ ತಿಂಗಳಿನ ನಂತರ ಈ ಬೇರು, ಮತ್ತು ಹೂವನ್ನು ಬಿಡುತ್ತವೆ.

ಮರವಾಸಿ ಆರ್ಕಿಡ್‌ಗಳು ಸಾಮಾನ್ಯವಾಗಿ ರಸ್ತೆ ಬದಿಗಳ ಮರಗಳಿಂದ ಹಲಸಿನಮರ, ಮಾವಿನ ಇತ್ಯಾದಿ ಮರಗಳ ಮೇಲೆ ಹಾಗೂ ಕಾಡಿನ ಒಳಭಾಗದಲ್ಲಿ ಇರುವ ಮರಗಳ ಮೇಲೂ ಸಹ ಕಂಡು ಬರುತ್ತವೆ. ಆರ್ಕಿಡ್‌ಗಳು ಬಹುವಾರ್ಷಿಕ ಸಸ್ಯಗಳಾಗಿದ್ದು ವರ್ಷದ ಎಲ್ಲಾ ತಿಂಗಳಿನಲ್ಲಿ ಬೇರೆ ಬೇರೆ ಪ್ರಭೇದಗಳು ಹೂವ ಬಿಡುತ್ತವೆ. ಈ ಹೂಗಳು ತುಂಬಾ ಆಕರ್ಷಣೀಯವಾಗಿದ್ದು ಒಳ್ಳೆ ಸುವಾಸನೆಯನ್ನು ಬೀರುತ್ತಾ ಇರುತ್ತವೆ. ಹೂಗಳು ಒಂದ ರಿಂದ ಎರಡು ತಿಂಗಳಿನವರೆಗೆ ಒಣಗಿ ಹೋಗುವುದಿಲ್ಲ. ಕೆಲವರಿಗಂತೂ ನೋಡಿದೊಡ ಇದೇನು ಹೂವೆ...? ಎಂಬ ಪ್ರಶ್ನೆ ಮೂಡಿಸುತ್ತದೆ. ನೋಡದೆ ಮುಂದೆ ಹೋಗಲು ಸಾಧ್ಯವಿಲ್ಲದೇ ಇರುವಂತ ಹೂವೆ "ಆರ್ಕಿಡ್".

ಈ ಹೂವಿನ ವಿನ್ಯಾಸ ಉಳಿದ ಹೂಗಳಿಗಿಂತ ವಿಭಿನ್ನ ಮತ್ತು ಆಕರ್ಷಿತ ಎದ್ದು ಕಾಣುವ ದಳವೇ ಹೂವಿನ ಹೆಗ್ಗುರುತು. ನಾಲಿಗೆ ಆಕಾರದಲ್ಲಿ ಇರುವ ಒಂದು ದಳ ಎಲ್ಲರನ್ನು ಒಮ್ಮೆ ನೋಡುವಂತೆ ಮೂಡುತ್ತ ಈ ಸಸ್ಯಗಳು ವಾತಾವರಣದಲ್ಲಿ ಸಿಗುವ ತೇವಾಂಶ ಮತ್ತು ಪೌಷ್ಠಿಕಾಂಶಗಳನ್ನು ಹೀರಿಕೊಂಡು ಬೆಳೆಯುವ ಶಕ್ತಿಯನ್ನು ಪ್ರಕೃತಿ ವಿಶೇಷವಾಗಿ ಈ ಸಸ್ಯಗಳಿಗೆ ನೀಡಿದೆ. ಸಾಮಾನ್ಯವಾಗಿ ಮೇಯಿಂದ ಜೂನ್ ತಿಂಗಳಿನಲ್ಲಿ ಅರಳುವ ಸೀತಾಳೆ ಹೂ ಕಂಡೊಡನೆ ಮಲೆನಾಡಿನ ರೈತ ಮಹಿಳೆಯರು ಅದನ್ನು ಕಿತ್ತು ತಮ್ಮ ಮುಡಿಗೇರಿಸಿಕೊಳ್ಳುತ್ತಾರೆ. ಆದರೆ ಈ ಆಕಾಂಕ್ಷೆ ಕಮ್ಮಿಯಾಗುತ್ತಾ ಬಂದಿದೆ. ಏಕೆಂದರೆ ತನ್ನಿಂದ ತಾನೇ ಬೆಳೆದು ಅರಳುತ್ತಿದ್ದ ಸೀತಾಳೆ ಸಸ್ಯಗಳು ನಶಿಸುತ್ತಿವೆ.



Scanned with OKEN Scanner

ವಿಶೇಷವಾಗಿ ರಸ್ತೆ ಬದಿಯ ಮರಗಳಲ್ಲಿ ಹಾಗೂ ಮನೆ ಹಿತ್ತಲಿನ ಮಾವಿನ ಮರ ಹಾಗೂ ಹಲಸಿನ ಮರದಲ್ಲಿ ಹೆಚ್ಚಾಗಿ ಬೆಳೆಯುವ ಈ ಸಸ್ಯಗಳು ಮರವನ್ನು ಆಶ್ರಯಿಸುತ್ತವೆ ವಿನಃ ಇವು ಮರಗಳಿಗೆ ಯಾವುದೇ ಹಾನಿಯನ್ನು ಮಾಡುವುದಿಲ್ಲ. ಕೆಲವರು, ಇದರ ಬಗ್ಗೆ ಜ್ಞಾನ ಇಲ್ಲದವರು ಇದನ್ನು 'ಬಂದಳಿಕೆ' ಎಂದು ಕಿತ್ತು ಹಾಕುವುದರಿಂದ ಈ ಅಪರೂಪದ ಸಸ್ಯಗಳೀಗ ವಿನಾಶದ ಅಂಚಿಗೆ ತಲುಪಿದೆ.

ಈ ಗಿಡದ ಹೂಗಳು ಎಷ್ಟೇ ದೊಡ್ಡದಾಗಿದ್ದರೂ ಸಹ ಬೀಜಗಳು ಬಹು ಸೂಕ್ಷ್ಮ. ಅತಿ ಚಿಕ್ಕದಾದ ಬೀಜವನ್ನು ಈ ಸೀತಾಳೆ ಸಸ್ಯಗಳಲ್ಲಿ ಕಾಣಬಹುದಾಗಿದೆ. ನಾವು ಈ ಬೀಜಗಳಿಂದ ನೇರವಾಗಿ ಸಸ್ಯಗಳನ್ನು ಪಡೆಯಲು ಸಾಧ್ಯವಿಲ್ಲ ಏಕೆಂದರೆ ಈ ಬೀಜಗಳು ಮೊಳಕೆಯಾಗಬೇಕೆಂದರೆ ಇದಕ್ಕೆ ಕೆಲವು ಮೈಕೋರೈಜಲ್ ಶಿಲೀಂಧ್ರದ ಅವಶ್ಯಕತೆ ಇರುತ್ತದೆ. ಹಾಗೆಯೇ ಈ ಸಸ್ಯಗಳನ್ನು ನಾವು ಬಲವಂತವಾಗಿ ನಮ್ಮ ಮನೆ ಬಾಗಿಲ್ಲಿ ಬೆಳೆಸುವುದು ಕಷ್ಟಕರ. ಏಕೆಂದರೆ ಈ ಸಸ್ಯದ ಹೂಗಳು ಪರಾಗಸ್ಪರ್ಶ ಕ್ರಿಯೆಗೆ ಹಲವಾರು ಕೀಟಗಳನ್ನು ಅವಲಂಬಿಸಿರುತ್ತವೆ. ಪ್ರತಿ ಪ್ರಭೇದಗಳು ನಿರ್ದಿಷ್ಟವಾದ ಕೀಟಗಳನ್ನು ಅವಲಂಬನೆ ಮಾಡಿಕೊಂಡಿದ್ದು, ಪರಾಗಸ್ಪರ್ಶದ ಕ್ರಿಯೆ ಸಾಧ್ಯವಾಗುವುದು ಅತ್ಯಂತ ಕಷ್ಟಕರ ಸಂಗತಿ.

ಆದ್ದರಿಂದ ಈ ಸಸ್ಯಗಳು ನೈಜವಾಗಿ ಎಲ್ಲಿ ಬೆಳೆಯುತ್ತವೋ ಅಲ್ಲೇ ಇವನ್ನು ಕಾಪಾಡಿಕೊಳ್ಳುವುದು ಉತ್ತಮ. ದಿನದಿಂದ ದಿನಕ್ಕೆ ಮರವಾಸಿ ಆರ್ಕಿಡ್‌ಗಳ ವಾಸಸ್ಥಾನವನ್ನು ಸಂರಕ್ಷಿಸಲು ಕಷ್ಟವಾಗಿದೆ ಏಕೆಂದರೆ ಎಗ್ಗಿಲ್ಲದ ಅರಣ್ಯನಾಶ ಮತ್ತು ಮರಗಳ ಕಡಿತ, ರಸ್ತೆಗಳ ಅಗಲೀಕರಣ ಪರಿಸರದ ಮಾಲಿನ್ಯದಿಂದ ನೈಸರ್ಗಿಕ ವಾಸಸ್ಥಾನ ಹಾಳಾಗುತ್ತಿದೆ ಹಾಗೆಯೇ ನೆಲವಾಸಿ ಆರ್ಕಿಡ್‌ಗಳು ಸಹ ನಶಿಸುವಿಕೆಯತ್ತ ಮುಖ ಮಾಡಿದ್ದು ಇದಕ್ಕೆ ಹೆಚ್ಚಾಗಿ ದನ ಮೇಯಿಸುವಿಕೆ, ಮಣ್ಣಿನ ಸವೆತ, ಗಣಿಗಾರಿಕೆಗಳಿಂದ ಇವುಗಳ ವಾಸಸ್ಥಾನ ಹಾಳಾಗುತ್ತಿದೆ.

ಆದ್ದರಿಂದ ಈ ಸಸ್ಯಗಳ ಸಂಗ್ರಹಣೆ, ಆರ್ಕಿಡ್ ನೈಸರ್ಗಿಕ ವಾಸಸ್ಥಾನ ಸಂರಕ್ಷಣೆ, ಜನರಲ್ಲಿ ಜಾಗೃತಿ ಮೂಡಿಸುವಿಕೆ, ಅರಣ್ಯ ಸಂಪತ್ತು ರಕ್ಷಣೆ ಮಾಡುವಲ್ಲಿ ಕಠಿಣ ಕಾನೂನು ಕ್ರಮ ಜಾರಿಗೊಳಿಸಿದಲ್ಲಿ ಮಾತ್ರ ನಾವು ಮುಂದಿನ ದಿನಗಳಲ್ಲಿ ಈ ನೈಸರ್ಗಿಕವಾಗಿ ಬೆಳೆಯುವ ಆರ್ಕಿಡ್ ಸಸ್ಯಗಳನ್ನು ನೋಡಬಹುದು. ಇಲ್ಲವಾದಲ್ಲಿ ಇವುಗಳನ್ನು ಚಿತ್ರದಲ್ಲಿ ಮಾತ್ರ ನೋಡಬೇಕಾಗುತ್ತದೆ.

–ಡಾ. ಪ್ರಶಾಂತ ಕೆ. ಎಂ.
ಉಪನ್ಯಾಸಕರು, ಸಸ್ಯಶಾಸ್ತ್ರ ವಿಭಾಗ

## ಅಕ್ಷರಮಾಲೆ ಶಿಕ್ಷಕ....

ಅ–ಅಂಧಕಾರವನ್ನು ತೊಲಗಿಸುವುದು
ಆ–ಆದರ್ಶಮೂರ್ತಿಗಳನ್ನು ರೂಪಿಸುವವನು
ಇ–ಇಂದಿನ ಭಾವಿ ಪ್ರಜೆಗಳ ನಿರ್ಮಾಪಕ
ಈ–ಈಶನ ಪ್ರತಿರೂಪ ಹೊಂದಿರುವವನು
ಉ–ಊರಿಗೆ ಹೊಸ ಚೇತನವನ್ನು ನೀಡುವವನು
ಋ–ಋಷಿ ಸದೃಷನಾದವನು
ಎ–ಎಲ್ಲಾ ವಿಷಯಗಳನ್ನು ತಿಳಿದಿರುವವನು
ಐ–ಐಕ್ಯತೆಯನ್ನು ಪ್ರತಿರೂಪಿಸುವವನು
ಒ–ಒಂದೇ ಎನ್ನುವ ಭಾವನೆಯನ್ನು
ವಿದ್ಯಾರ್ಥಿಗಳಲ್ಲಿ ಮೂಡಿಸುವವನು
ಓ–ಓದುವುದನ್ನು ಕಲಿಸುವವನು
ಔ–ಔದಾರ್ಯವುಳ್ಳವನು
ಅಂ–ಅಹಂಕಾರವನ್ನು ಅಳಿಸುವವನು
ಅಃ–ಹ.. ಹ... ಎಂದು ಅತಿಯಾಗಿನಕ್ಕರೆ ತಿದ್ದಿ
ಹೇಳುವವನು

–ಸೌಮ್ಯ ಎಂ.
II Year Biotechnology

# ಭ್ರಾತೃತ್ವದ ಮಡಿಲು–ನನ್ನ ಎನ್.ಎಸ್.ಎಸ್.

ಭವ್ಯಭಾರತದ ಕನಸು ಕಂಡ ನನಗೆ ನನ್ನ ದೇಶಕ್ಕಾಗಿ ಏನನ್ನಾದರೂ ಮಾಡಬೇಕೆಂಬ ಹಂಬಲ ಜೊತೆಯಲ್ಲಿ ಏನನ್ನಾದರೂ ಸಾಧಿಸಬೇಕೆಂಬ ಛಲ. ಅಂದು ಸಾಧಿಸಲು ಹಲವು ದಾರಿಗಳಿದ್ದವು. ಆದರೆ ನಾನು ಆಯ್ಕೆ ಮಾಡಿಕೊಂಡಿದ್ದು ಮಾತ್ರ ನನ್ನ ಸಹ್ಯಾದ್ರಿಯ ಮಡಿಲನ್ನು ಸಾಧಿಸುವ ಬಯಕೆಯೊಂದಿಗೆ ಇಲ್ಲಿಗೆ ಬಂದೆ. ನನ್ನ ಜೀವನವನ್ನು ರೂಪಿಸಿಕೊಳ್ಳುವುದರ ಜೊತೆ ದೇಶಾಭಿಮಾನವನ್ನು ಉಳಿಸಿಕೊಳ್ಳುವ ಅವಕಾಶವೂ ದೊರೆಯಿತು. ಆ ದಾರಿಯ ಹುಡುಕುತ್ತಾ ಹೊರಡುವಾಗ ನನ್ನ ಮುಂದೆ ಕಂಡದ್ದು "ಎನ್.ಎಸ್.ಎಸ್" ಎಂಬ ಮೂರಕ್ಷರಗಳ ಮಹಾಸಾಗರ......

ಭಾರತಾಂಬೆಯ ಮಡಿಲಲ್ಲಿ ಜನಿಸಿರುವ ನಮಗೆ ದೇಶದ ಗಡಿಕಾಯುವ ಅವಕಾಶ ಸಿಗದಾದರೂ ಕೂಡ ಅವಳ ಸೇವೆಯನ್ನು ಮಾಡುವ ಕಿಂಚಿತ್ತು ಅದೃಷ್ಟವಾದರೂ ನನ್ನದಾಗುತ್ತಿದೆ ಎಂದು ಅನಿಸಿದ್ದು "ನನಗಲ್ಲ ನಿನಗೆ" ಎಂಬ ಧ್ಯೇಯವಾಕ್ಯದಿಂದ ಕಂಗೊಳಿಸುತ್ತಿದ್ದ ಎನ್.ಎಸ್.ಎಸ್ ನ ಫಲಕವನ್ನು ಕಂಡಾಗ.

ಮೊದಲ ವರ್ಷ ಗೊಂದಲದಲ್ಲಿ ಎನ್.ಎಸ್.ಎಸ್ ನ ಅವಕಾಶ ಕ್ಕೆ ತಪ್ಪಿ ಹೋಯಿತು. ಆದರೆ ಮುಂದಿನ ಪ್ರಯತ್ನದಲ್ಲಿ ನನ್ನ ದ್ವಿತೀಯ ವರ್ಷ ನನಗೆ ಎನ್.ಎಸ್.ಎಸ್ ನ ಕೈ ಹಿಡಿಸಿತು. ಎನ್.ಎಸ್.ಎಸ್. ಎಂಬುದು ಕೇವಲ ಕೆಲಸಕ್ಕಷ್ಟೇ ಸೀಮಿತವಲ್ಲ. ಅದು ರಾಷ್ಟ್ರೀಯತೆ, ಭಾವೈಕ್ಯತೆ, ಸಹೋದರತೆ, ಸ್ನೇಹ–ಸೌಹಾರ್ದತೆಗಳ ಆಗರ ಮುಂಬರುವ ಪ್ರತಿಭೆಗಳಿಗೆ ಕಲೆಯ ಮಹಾಸಾಗರ.

ಎಷ್ಟೋ ಚಿಗುರುಗಳು ಹೆಮ್ಮರವಾಗಿ ಬೆಳೆದಿದೆ ಈ ನನ್ನ ಎನ್.ಎಸ್.ಎಸ್. ಮೊದಲ ದಿನದ ನನ್ನ ಎನ್.ಎಸ್.ಎಸ್ ಜೀವನ ಎಲ್ಲರ ಕಿರುಪರಿಚಯದೊಂದಿಗೆ ಪ್ರಾರಂಭವಾಯಿತು. ಪ್ರತಿ ಶನಿವಾರ ಕಾಲೇಜು ಆವರಣದಲ್ಲಿ ಎಲ್ಲರೂ ಒಟ್ಟಾಗಿ ಸೇರುವಾಗ ಏನೋ ಒಂದು ಅದ್ಭುತ ಅನುಭವದೊಂದಿಗೆ ಕೊನೆಗೊಳ್ಳುತ್ತಿತ್ತು. ಎನ್.ಎಸ್.ಎಸ್. ನಲ್ಲಿ ನಾನು ಮೊದಲ ಬಾರಿ ಗುರುತಿಸಿಕೊಂಡದ್ದು "ಸಾವಿರ ನದಿಗಳ ಸಾವಿದು" ಎಂಬ ದೇಶಭಕ್ತಿಗೀತೆಯೊಂದಿಗೆ ನನ್ನ ಪ್ರತಿಭೆಯನ್ನು ಗುರುತಿಸಿಕೊಳ್ಳುವ ಅವಕಾಶ ನನ್ನ ಎನ್.ಎಸ್.ಎಸ್ ನಿಂದ ದೊರಕಿತು.

ಎನ್.ಎಸ್.ಎಸ್. ಎಂದರೆ ಕೇವಲ ಸ್ವಚ್ಛ ಮಾಡುವುದು ಎಂದುಕೊಂಡವರ ಪಾಲಿಗೆ ಅದು ಕೇವಲ ಶ್ರಮದಾನಕ್ಕೆ ಮಾತ್ರ ಸೀಮಿತ. ಆದರೆ ನನಗೆ ನನ್ನ ಎನ್.ಎಸ್.ಎಸ್. ನನ್ನ ಜೀವನದ ಒಂದು ಅಂಗವಾಗಿ ಮಾರ್ಪಾಡಾಗಿತ್ತು. ನಮ್ಮ ಎನ್.ಎಸ್.ಎಸ್. ಜೀವನದ ನಿಜವಾದ ಅರ್ಥ ತಿಳಿದದ್ದು ಶಿಂಗನಬಿದರೆ ಮತ್ತು ಚಿತ್ರಶೆಟಿಹಳ್ಳಿಯಲ್ಲಿ ನಡೆದ ಶಿಬಿರದ ನಂತರ ಸುಂದರ ಪರಿಸರ ಹಸಿರು ತೊಟ್ಟ ಪ್ರಕೃತಿಮಾತೆಯ ಮಡಿಲಲ್ಲಿ ಕಳೆದ ಮಧುರ ಕ್ಷಣಗಳು ಎನ್.ಎಸ್.ಎಸ್ ಜೀವನವನ್ನು ಕಲಿಸುವ ಜೊತೆಯಲ್ಲಿ ಬದುಕುವ ಮಾರ್ಗವನ್ನು ಕಲಿಸುತ್ತದೆ ಎಂಬುದಕ್ಕೆ ಇದೇ ಸಾಕ್ಷಿ ಮೂಲಭೂತ ಸೌಕರ್ಯಗಳಿಲ್ಲದ ನಾಡಿನಲ್ಲಿ ಏಳು ದಿನಗಳ ಕಾಲ ಬದುಕುವ ಕ್ಷಣಗಳು ಒಂದು ರೀತಿಯ ವಿಸ್ಮಯವೇ ಸರಿ. ಎಂಥಹ ಪರಿಸ್ಥಿತಿಯಲ್ಲಿಯೂ, ಕೊರತೆಗಳ ನಡುವೆಯೂ ಒಬ್ಬ ಎನ್.ಎಸ್.ಎಸ್ ಸ್ವಯಂಸೇವಕ ಬದುಕಬಲ್ಲನೆಂಬ ಆತ್ಮಸ್ಥೈರ್ಯ ಹುಟ್ಟಿಸುತ್ತದೆ.

ರಾಷ್ಟ್ರಗೀತೆ, ನಾಡಗೀತೆ, ದೇಶಭಕ್ತಿ, ಧ್ವಜವಂದನೆ ಇವೆಲ್ಲವೂ ಕೇವಲ ಪ್ರೌಢಶಿಕ್ಷಣದ ಹೊತ್ತಲ್ಲೇ ಮರೆಯಾಗಿ ಹೋಯಿತೆಂಬ ಕೊರಗಿದ್ದ ನನಗೆ ಆ ಲೋಕವನ್ನು ಮರುಸೃಷ್ಟಿಸಿದ್ದು ನನ್ನ ಎನ್.ಎಸ್.ಎಸ್. ಸೂರ್ಯೋದಯ ಸಮಯದಲ್ಲಿ ಧ್ವಜವಂದನೆ. ಉತ್ತಮ ವಿಷಯಗಳನ್ನೊಳಗೊಂಡ ಸೇವಾ ಸ್ಪಂದನೆಗೆ ಬಿಡುಗಡೆ. ಚಿತ್ರ ವಿಶ್ಲೇಷಣೆ ನಂತರ ವ್ಯಾಯಾಮಾದಿಗಳು ಬೆಳಗಿನ ಉಪಹಾರದ ನಂತರ ಸ್ವಲ್ಪಕಾಲ ಶ್ರಮಧಾನ ಇದರ ಜೊತೆಯಲ್ಲಿ ಉತ್ತಮ ವ್ಯಕ್ತಿಗಳ ಹಿತವಚನ ಸಂಜೆ ಸ್ವಯಂಸೇವಕರಿಂದ ಸಾಂಸ್ಕೃತಿಕ ಚಟುವಟಿಕೆಗಳು, ಯೋಗ, ಇದೆಲ್ಲದರ ನಡುವೆ ರಾತ್ರಿ ಎಲ್ಲರೂ ಬಾನಂಗಳದಲ್ಲಿ ಕುಳಿತು ಊಟ ಮಾಡಿತ್ತಿದ್ದ ಮಧುರ ಕ್ಷಣಗಳು, ಟ್ರಕ್ಕಿಂಗ್, ಒಂದೇ ಎರಡೇ... ಕ ಸುಂದರ ಅನುಭವಗಳು.

ಇನ್ನು ಕೊನೆಯ ದಿನ ದೀಪೋತ್ಸವದ ಬಗ್ಗೆ ಹೇಳಲು ಮಾತುಗಳೇ ಸಾಲದು ಸಾಂಪ್ರದಾಯಿಕ ಉಡುಗೆಗಳೊಂದಿಗೆ

Scanned with OKEN Scanner

ಕತ್ತಲ ರಾತ್ರಿಯಲ್ಲಿ, ಸಹೋದರರ ರಕ್ಷಣೆಯಲ್ಲಿ ಕೈ-ಕೈ ಹಿಡಿದು ಕುಳಿತು ದೇಶಾಭಿಮಾನದ ಜ್ಯೋತಿಯನ್ನು ಭಾರತಾಂಬೆಯ ಮಡಿಲಿಗೆ ಅರ್ಪಿಸುತ್ತಾ ದೇಶಭಕ್ತಿಯ ಸಾರುವ ಆ ಮಧುರ ಕ್ಷಣ... ಭಾವನೆಗಳಿಗೆ ನಿಲುಕದ್ದು, ಕೊನೆಯ ದಿನ ಕಣ್ಣುತುಂಬಿ ಬರುವ ಕಂಬನಿ, ಉಳಿಯಲು ಸ್ಥಳಾವಕಾಶಗಳೇ ಇಲ್ಲದ ಆ ಕತ್ತಲ ಕಾಡಿನಲ್ಲಿ ನಮ್ಮನ್ನು ಆಶ್ರಯಿಸಿದ ಮಾತೃ ಹೃದಯಿಗಳಿಗೆ ನಾನು ಎಂದಿಗೂ ಚಿರಋಣಿಯಾಗಿರುತ್ತೇನೆ.

ಇದರ ಜೊತೆಯಲ್ಲಿ ನಮ್ಮ ಕಾಲೇಜಿನಲ್ಲಿ ನಡೆಸಿದ ಜಿಲ್ಲಾಮಟ್ಟದ ಶಿಬಿರ ಹೊರಗಿನ ಜಗತ್ತಿನ ವ್ಯಕ್ತಿಗಳ ಜೊತೆ ನನ್ನ ಮೊದಲ ಶಿಬಿರ ಸುಮಾರು 30 ಕ್ಕೂ ಹೆಚ್ಚು ಕಾಲೇಜಿನ 200 ಕ್ಕೂ ಹೆಚ್ಚು ಸ್ವಯಂ ಸೇವಕರು ಅಪರಿಚಿತರು ಪರಿಚಿತರಾಗಿ ಸ್ನೇಹ-ಸೌಹಾರ್ದತೆಯಿಂದ ಕಳೆದ ಕ್ಷಣಗಳು.

ಇದರೊಂದಿಗೆ ಜೈಪುರದ ಎನ್.ಎಸ್.ಎಸ್. ಯುವಜನೋತ್ಸವಕ್ಕೆ ನಾನು ಆಯ್ಕೆಯಾಗಿದ್ದು ನನ್ನ ಅದೃಷ್ಟವೇ ಸರಿ... ಇಡೀ ವಿಶ್ವವಿದ್ಯಾಲಯವನ್ನು ಪ್ರತಿನಿಧಿಸುವ ಅವಕಾಶ ಜಿಲ್ಲೆಯ ಹತ್ತು ಸ್ವಯಂ ಸೇವಕರಿಗೆ ಮಾತ್ರ ಸಿಕ್ಕಿತು. ಆದರೆ ಅದೊಂದು ಕೆಟ್ಟ ಘಳಿಗೆ ದುರಾದೃಷ್ಟವಶಾತ್...! ಜೈಪುರಕ್ಕೆ ಹೋಗುವ ಅವಕಾಶ ಅನಿವಾರ್ಯ ಕಾರಣಗಳಿಂದ ಕೈ ತಪ್ಪಿಹೋಯಿತು ಅಂದು ಕಣ್ಣಹನಿಯು ಜಾರಿ ಭೂ ಸ್ಪರ್ಷವಾಗಿತ್ತು

ಕೊಂಚ ಬೇಜಾರಿನಲ್ಲೂ ಎಲ್ಲಾ ಮರೆತೂ ಮುಂದಿನ ಅವಕಾಶಗಳಿಗಾಗಿ ಕಾಯುತ್ತಾ ಕುಳಿತೆ. ಕೊನೆಯ ದಿನಗಳು ನನ್ನ ಸ್ನೇಹಿತರೊಂದಿಗೆ ಕಳೆದ ಕ್ಷಣಗಳು ಮರುಕಳಿಸುವುದು ಚಿತ್ರಶೆಟ್ಟಿಹಳ್ಳಿಯ ಶಿಬಿರವನ್ನು ನೆನೆದಾಗ. ಕತ್ತಲು ಕಾಡಿನಲ್ಲಿ ಕಳೆದ ದಿನಗಳು ಮೂಲಭೂತ ಸೌಕರ್ಯಗಳಿಲ್ಲದೆ ಬದುಕುತ್ತಿರುವ ಜನ. ಅವರ ಒಡನಾಟ ಅಬ್ಬಾ.... ಅವರೊಂದಿಗೆ ಕಳೆದ ಕ್ಷಣಗಳು ಅಬ್ಬಾ...! ಎಂಥಾ ಅನುಭವ. ಅವರ ಪ್ರೀತಿ ಮಮತೆಗೆ ನಾನೆಂದಿಗೂ ಚಿರಋಣಿ.ಆ ಶಿಬಿರವು ನನಗೆ ನೀಡಿದ ಅನುಭವಗಳು ಕಲ್ಪನೆಗೂ ಮೀರಿದ್ದು. ಎನ್.ಎಸ್.ಎಸ್. ನನ್ನಲ್ಲಿನ ನಿರೂಪಕಿ, ಗಾಯಕಿ, ನಟನೆಯ ಕಲೆಯನ್ನು ಹೊರಹಾಕಿ ನನ್ನ ಕೊನೆಯ ಎನ್.ಎಸ್.ಎಸ್ ಕಾರ್ಯಕ್ರಮದ ನಿರೂಪಣೆ ಅದಕ್ಕೆ ಕುಲಪತಿಗಳು, ಪ್ರಾಂಶುಪಾಲರು, ನನ್ನ ಸ್ನೇಹಿತರಿಂದ ಪಡೆದ ಪ್ರಶಂಸೆ ನಿಜಕ್ಕೂ ಅವಿಸ್ಮರಣೀಯ.

ಎನ್.ಎಸ್.ಎಸ್ ನಲ್ಲಿ ನಾನು ಅನುಭವಗಳ ಜೊತೆಯಲ್ಲಿ ಅನುಭವಗಳೊಂದಿಗೆ ಕಲಿತದ್ದೇ ಹೆಚ್ಚು, ಕಳೆದುಕೊಂಡಿದ್ದಕ್ಕಿಂತ ಪಡೆದುಕೊಂಡದ್ದೇ ಹೆಚ್ಚು, ಸಂತಸದ ದಿನಗಳ ಜೊತೆಯಲ್ಲಿ ಕೆಲ ದುಃಖದ ಘಟನೆಗಳು. ಸಿಹಿ-ಕಹಿ ಅನುಭವಗಳು. ನನ್ನ ಬೆಳೆಸಿದ, ಹರಸಿದ, ಪ್ರೀತಿ ತೋರಿದ, ಕಣ್ಣೀರು ಒರೆಸಿದ ನನ್ನ ಎಲ್ಲಾ ಶಿಕ್ಷಕರಿಗೆ ಸ್ನೇಹಿತರಿಗೆ, ಸಹೋದರ-ಸಹೋದರಿಯರಿಗೆ, ಮಾತೃ ಹೃದಯಿಗಳಿಗೆ, ಜೊತೆಯಲ್ಲಿ ನನ್ನ ಎನ್.ಎಸ್.ಎಸ್.ಗೆ ನಾನೆಂದಿಗೂ ಚಿರಋಣಿಯಾಗಿರುತ್ತೇನೆ. ನನ್ನ ಎನ್.ಎಸ್.ಎಸ್. ಕುಟುಂಬ ನನಗೆ ಬದುಕುವ ಮಾರ್ಗವನ್ನು ಕಲಿಸಿದೆ.

ನನ್ನ ಪದವಿ ಶಿಕ್ಷಣದ ಜೀವನ ಮುಗಿದರೂ ನನ್ನ ಎನ್.ಎಸ್.ಎಸ್ ನ ಜೀವನ ಎಂದಿಗೂ ಕೊನೆಗೊಳ್ಳುವುದಿಲ್ಲ. ನನ್ನ ಜೀವನದ ಕೊನೆಯುಸಿರಿರುವ ತನಕ ನಾನೊಬ್ಬ ಎನ್.ಎಸ್.ಎಸ್. ಸ್ವಯಂ ಸೇವಕಿ ಎಂದು ಹೇಳಿಕೊಳ್ಳಲು ನನಗೊಂದು ಹೆಮ್ಮೆ. ನನ್ನ ಹುಟ್ಟುಹಬ್ಬದಂದು ನೆಟ್ಟ ಪುಟ್ಟ ಸಸಿಯೊಂದು ನನ್ನ ಸಹ್ಯಾದ್ರಿಯ ಮಡಿಲಲ್ಲಿ ಬೆಳೆಯುತ್ತಿದೆ. ಅದು ಹೆಮ್ಮರವಾಗಿ ಇತರರಿಗೆ ನೆರಳು ನೀಡಲಿ ಎನ್ನುವುದು ನನ್ನ ಆಸೆ.

ನನ್ನ ಪ್ರೀತಿಯ ಸ್ನೇಹಿತರೇ ನನ್ನ ಕೋರಿಕೆ ಒಂದೇ ಕರ್ತವ್ಯ ಪಾಲನೆ ಕೇವಲ ಒಂದು ದಿನಕಷ್ಟೇ ಸೀಮಿತವಾಗದೇ ಅದು ಇಡೀ ಬದುಕಿಗೆ ಮೀಸಲಾಗಲಿ... ದೊಡ್ಡ ಮಟ್ಟದಲ್ಲಾಗದಿದ್ದರೂ ಅಳಿಲು ಸೇವೆಯನ್ನಾದರೂ ದೇಶಕ್ಕೆ ಅರ್ಪಿಸೋಣ. ಉತ್ತಮ ವ್ಯಕ್ತಿಗಳಾಗುವ ಜೊತೆಯಲ್ಲಿ ಅತ್ಯುತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳೋಣ ಎನ್.ಎಸ್.ಎಸ್. ನ "ನನಗಲ್ಲ ನಿನಗೆ" ಎಂಬ ಧ್ಯೇಯ ವಾಕ್ಯದೊಂದಿಗೆ ನಾನು ಸದಾ ಸಿದ್ಧ ಎಂಬ ನುಡಿಯನ್ನು ಪಾಲಿಸೋಣ ಅಂದು ನಾವು ವ್ಯಕ್ತಿತ್ವ ಪೂರ್ಣ ಸ್ವಯಂಸೇವಕರಾಗುತ್ತೇವೆ.

-ಸುಮ ಎಸ್. ಆರ್
(ಎನ್.ಎಸ್.ಎಸ್. ಸ್ವಯಂಸೇವಕಿ)
ತೃತೀಯ ಬಿ.ಎಸ್ಸಿ., ಇ-1 ವಿಭಾಗ

ವಂದೇ ಮಾತರಂ............

# ಹೊಸಗನ್ನಡ ಸಾಹಿತ್ಯ –ಒಂದು ಅವಲೋಕನ

ಮೊದಲು ನಾಡಿನ ಉಗಮ, ಅನಂತರ ನುಡಿಯ ಉಗಮ, ತದನಂತರ ಸಾಹಿತ್ಯದ ಉಗಮ. ಇದು ಕ್ರ ಕೂಡ. ಸಾಹಿತ್ಯ ಶಿಶುವಿಗೆ ಭಾಷೆ ಹುಟ್ಟಿ ಬೆಳೆದು ಸತ್ವಶಾಲಿಯಾಗುತ್ತ, ತೇಜೋನ್ವಿತವಾಗುತ್ತಾ ಬಂದಿತೆಂಬುದು ಅಲ್ಲಗಳೆಯಲಾಗದ ಅಪ್ಪಟ ಸತ್ಯ. ಆಡುನುಡಿ ನೂರಾರು ವರ್ಷಗಳ ಸತತ ಬಳಕೆಯಿಂದ ಸೂಕ್ಷ್ಮವಾಗುತ್ತ, ಮೊನಚಾಗುತ್ತ, ಪರಿತವಾಗುತ್ತ, ಸರ್ವಗ್ರಾಸಿಯಾಗುತ್ತ, ಸರ್ವಭಾವ 'ಭಿತ್ತಿಯಾಗುತ್ತ, ಲಿಪಿಯನ್ನು ಸೃಷ್ಟಿಸಿ ಸಂಕೇತವಾಗುತ್ತ ಮೂಲಕ ಚಾಕ್ಷುಷತ್ವ ಪಡೆದು ಚಿರಂಜೀವಿಯಾಗುತ್ತ ಸಾಗುತ್ತದೆ. ಇದರ ಪೂರ್ವ ಚರಿತ್ರೆಯನ್ನು ತಿಳಿಯಲು ಎರಡು ಮುಖ್ಯ ಆಧಾರಗಳಿವೆ. ಒಂದು ಶಾಸನಾಧಾರ, ಮತ್ತೊಂದು ಶಾಸನೇತರ ಆಧಾರ.

ಈ ಕಾರಣದಿಂದಲೇ ಎರಡು ಸಾವಿರ ವರ್ಷಗಳಿಗೂ ಅಧಿಕ ಇತಿಹಾಸವಿರುವ ಕನ್ನಡ ಭಾಷೆಯ ಸಾಹಿತ್ಯಕ್ಕೆ 1500 ವರ್ಷಗಳ ದೀರ್ಘ ಇತಿಹಾಸವಿರುವ ಮಹತ್ವದ ಸಂಗತಿಯಾಗಿದೆ. ಕ್ರಿ.ಶ. 4ನೇ ಶತಮಾನದ 'ಹಲ್ಮಿಡಿ ಶಾಸನದಿಂದ 9ನೇ ಶತಮಾನದ 'ಕವಿರಾಜಮಾರ್ಗ'ದವರೆಗೆ ಇದರ ಪ್ರಾಚೀನತೆಯನ್ನು ಗುರುತಿಸಬಹುದು. ಪಂಪಪೂರ್ವ ಯುಗ, ಪಂಪ ಯುಗ, ಕುಮಾರವ್ಯಾಸ ಯುಗ ಮತ್ತು ಆಧುನಿಕ ಯುಗ ಎಂದು ವಿಂಗಡಿಸಲಾಗಿದೆ. ಇದನ್ನೇ ಕ್ರಮವಾಗಿ ಪೂರ್ವ ಹಳೆಗನ್ನಡ, ಹಳೆಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಎಂದು ಕರೆಯಲಾಗಿದೆ. ಅಧ್ಯಯನ ದೃಷ್ಟಿಯಿಂದ ಆ ಕಾಲದ ಸಾಹಿತ್ಯ ರಚನೆಯ ಉದಯ, ಹಿನ್ನೆಲೆ, ಲಕ್ಷಣ, ಭಾಷೆ, ವಸ್ತು ಹಾಗೂ ಅವು ಮಹತ್ವತೆಯನ್ನು ಕುರಿತು ಪ್ರಯೋಗಶೀಲತೆಯನ್ನು ಆಯಾ ಕಾಲಕ್ಕೆ ಅನುಗುಣವಾಗಿಯೇ ಅಭ್ಯಾಸಿಸುತ್ತಾ ಬಂದಿರುವುದನ್ನು ಗಮನಿಸಬಹುದು. ಈ ಹಿನ್ನೆಲೆಯಲ್ಲಿ ಆಧುನಿಕ ಕನ್ನಡ ಸಾಹಿತ್ಯದ ಉದಯ ಮತ್ತು ಅದರ ರಚನೆಯ ಶಕ್ತಿ ನೆಲೆಗಳನ್ನು ನೋಡುವ ಪ್ರಯತ್ನವನ್ನು ಮಾಡಲಾಗಿದೆ. ಆಧುನಿಕ ಕನ್ನಡ ಸಾಹಿತ್ಯದ ಉದಯಕ್ಕೆ ಪ್ರಮುಖವಾಗಿ ಮೂರು ಕಾರಣಗಳು ಮುಖ್ಯವಾಗುತ್ತವೆ. ಮೊದಲನೆಯದಾಗಿ ಕ್ರೈಸ್ತ ಮಿಷನರಿಗಳ ಕೊಡುಗೆ, ಹರಿದು ಹಂಚಿಹೋಗಿದ್ದ ಕನ್ನಡ ಭಾಷೆಯ ನಿಘಂಟನ್ನು ರಚಿಸಿ ಆ ಮೂಲಕ ಕನ್ನಡ ಭಾಷೆಯ ಜೀರ್ಣೋದ್ಧಾರಕ್ಕೆ ಶ್ರಮಿಸಿ ತಮ್ಮ ಸೇವೆಯನ್ನು ಮುಡುಪಾಗಿಟ್ಟ ಕ್ರೈಸ್ತ ಮಿಷನರಿಗಳ ಕಾರ್ಯದ ಫಲ. ಎರಡನೆಯದಾಗಿ ಉನ್ನತ ಶಿಕ್ಷಣದ ಪ್ರಭಾವ ನಮ್ಮ ದೇಶವನ್ನು 200 ವರ್ಷಗಳ ಕಾಲ ಆಳ್ವಿಕೆ ಮಾಡಿದ ಆಂಗ್ಲರು ಆ ಸಂದರ್ಭದಲ್ಲಿ ಉನ್ನತ ಶಿಕ್ಷಣವನ್ನು ಜಾರಿಗೆ ತಂದಿದ್ದರಿಂದ ನಮ್ಮವರು ಕೂಡ ಉನ್ನತ ಶಿಕ್ಷಣವನ್ನು ಪಡೆದು ಇಂಗ್ಲೀಷ್ ಭಾಷೆಯನ್ನು ತಿಳಿಯಲು ಸಾಧ್ಯವಾಯಿತು. ಇದರಿಂದ ಪಾಶ್ಚಿಮಾತ್ಯ ಸಾಹಿತ್ಯದ ಎರವಲನ್ನು ಪಡೆದುಕೊಳ್ಳಲು ಹಾಗೂ ಆಧುನಿಕ ಕನ್ನಡ ಸಾಹಿತ್ಯ ರಚನೆಗೆ ಅನುವು ದೊರಕಿದಂತಾಗಿತ್ತು. ಇನ್ನೂ ಕೊನೆಯದಾಗಿ ಮುದ್ದಣ ಕವಿಯ 'ಶ್ರೀ ರಾಮಾಶ್ವಮೇಧ' ಕೃತಿ ರಚನೆ ಪದ್ಯವನ್ನು ತ್ಯಜಿಸಿ ಹೊಸ ಗದ್ಯದ ಮಾದರಿಯ ಪ್ರಯೋಗಕ್ಕೆ ಅಣಿಯಾಗಿದ್ದು, ಪ್ರಮುಖವಾದ ಅಂಶವಾಗಿದೆ. ಆ ಕಾರಣದಿಂದಲೇ ಮುದ್ದಣ ಕವಿಯನ್ನು 'ಹೊಸಗನ್ನಡ ಸಾಹಿತ್ಯದ ಮುಂಗೋಳಿ' ಎಂದು ಕರೆಯಲಾಗಿದೆ.

ಹತ್ತೊಂಬತ್ತನೆಯ ಶತಮಾನದ ಆದಿಭಾಗದಿಂದ ಮುದ್ರಣ ಯಂತ್ರ ಸ್ಥಾಪನೆ, ಕ್ರೈಸ್ತ ಮಿಷನರಿಗಳ ಆಸಕ್ತಿ ಪತ್ರಿಕೋದ್ಯಮದ ಬೆಳವಣಿಗೆ, ಇಂಗ್ಲೀಷ್ ಶಿಕ್ಷಣದ ಪರಿಣಾಮ ಮುಂತಾದವುಗಳ ಕಾರಣವಾಗಿ ಹೊಸಗನ್ನಡ ಉದಯವಾಯಿತು. ಈ ಸಂಧಿ ಕಾಲದ ಕವಿಯಾಗಿ ಮುದ್ದಣ ಸ್ವತಂತ್ರ ಕ್ರಾಂತಿಯಿಂದ ಕಂಗೊಳಿಸುತ್ತಾನೆ ಪುರಾತನ ವಸ್ತುವಿಗೆ ವಿನೂತನ ವಿನ್ಯಾಸವನ್ನು ಕೊಟ್ಟು ತಿರುಳುಗನ್ನಡದ ಬನಿಯನ್ನು ಅನ್ಯಾದೃಶ್ಯವಾಗಿ ಮೆರೆ ವಿಶಿಷ್ಟ ಗದ್ಯ ಗ್ರಂಥ ಇವನ 'ಶ್ರೀ ರಾಮಾಶ್ವಮೇಧ' ಕೃತಿಯಾಗಿದೆ. ಆನಂತರ ಚಿ.ವಾಸುದೇವಯ್ಯ, ಗುಲ್ವಾಡಿ ವೆಂಕಟರಾಯರು, ಬೋಳಾರ ಬಾಬುರಾಯರು, ಎಂ.ಎಸ್. ಪುಟ್ಟಣ್ಣನವರು ತಮ್ಮ ಕಾದಂಬರಿಗಳ ಮೂಲಕ ಹೊಸಗನ್ನಡ ಗದ್ಯಕ್ಕೆ ಗಟ್ಟಿಯಾದ ಅಡಿಪಾಯ ಹಾಕಿದರು. ಬಿ. ವೆಂಕಟಚಾರ್ಯರು ಮತ್ತು ಗಳಗನಾಥರು ಬಂಗಾಳಿ ಮತ್ತು ಮರಾಠಿ ಕೃತಿಗಳನ್ನು ಕನ್ನಡಿಸುವ ಮೂಲಕ ಹೊಸಗನ್ನಡ ಸಾಹಿತ್ಯಕ್ಕೆ ಹೊಸ ಹೆಬ್ಬಾಗಿಲನ್ನು ತೆರೆದರು. ಜಡವಾಗಿ ಮಂಕಾಗಿದ್ದ ಸಾಹಿತ್ಯವಾಹಿನಿಗೆ ಜೀವಂತಿಕೆಯನ್ನು ತುಂಬಿದರು.

Scanned with OKEN Scanner

ಆಧುನಿಕ ಸಾಹಿತ್ಯ ಎಂದು ನಾವು ಕರೆಯುವ ಸಾಹಿತ್ಯ ಸೃಷ್ಟಿ ಕಳೆದ ಸುಮಾರು ಎಂಬತ್ತು ವರ್ಷಗಳದ್ದು. ೨೧ ರಲ್ಲಿ ಪ್ರೋ. ಬಿ.ಎಂ. ಶ್ರೀ ಅವರ 'ಇಂಗ್ಲೀಷ್ ಗೀತೆಗಳು' ಪ್ರಕಟವಾಯಿತು. ಇಲ್ಲಿಗೆ ಆಧುನಿಕ ಸಾಹಿತ್ಯದ ಬ್ಬಾರಿ ತೆರೆಯಿತು ಎನ್ನಬಹುದು. 'ಇಂಗ್ಲೀಷ್ ಗೀತೆಗಳು' ಹನ್ನೆರಡು ಇಂಗ್ಲೀಷ್ ಕವನಗಳ ಅನುವಾದದ ಗ್ರಹ. ಈ ಹೊತ್ತಿಗಾಗಲೇ ಆಧುನಿಕ ಕನ್ನಡ ಸಾಹಿತ್ಯದ ಅರುಣೋದಯವು ಮುದ್ದಣನ 'ರಾಮಾಶ್ವಮೇಧ', ತ್ತರಕನ್ನಡ ಜಿಲ್ಲೆಯಲ್ಲಿ ರಚಿತವಾದುದೆಂದು ಹೇಳಲಾದ 'ಇಗ್ಗಪ್ಪ ಹೆಗ್ಗಡೆ' ಪ್ರಹಸನ ಮೊದಲಾದ ಕೃತಿಯಲ್ಲಿ ತನ್ನ ದಯವನ್ನು ಸಾರಿ ಹೇಳಿತು ಎಂದು ಹೇಳಬಹುದು.

ಹೀಗೆ ಹತ್ತೊಂಬತ್ತನೆಯ ಶತಮಾನದ ಕಡೆಯ ದಶಕಗಳು ಮತ್ತು ಇಪ್ಪತ್ತನೆಯ ಶತಮಾನದ ಮೊದಲ ರಡು ದಶಕಗಳು ಇಡೀ ಭಾರತದಲ್ಲಿ ಮಹತ್ವದ ಬದಲಾವಣೆಗಳ ಕಾಲ. ಪಾಶ್ಚಾತ್ಯ ಸಂಸ್ಕೃತಿ, ರೀತಿ-ನೀತಿಗಳು, ಚಾರ ಲಹರಿ, ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ವ್ಯಕ್ತಿಯ ಮಹತ್ವವನ್ನು ಕುರಿತ ಕಲ್ಪನೆಗಳು ಇವುಗಳ ಪ್ರಭಾವ ಾರತೀಯರ ಮೇಲೆ ಸಹಜವಾಗಿ ಕನ್ನಡಿಗರ ಮೇಲೆ ಆದ ಕಾಲ. ಪಾಶ್ಚಾತ್ಯ ಸಂಸ್ಕೃತಿಗೆ ಒಮ್ಮೆ ಮನಸೋತು, ಮ್ಮೆ ಅದಕ್ಕೆ ಬೆನ್ನು ತಿರುಗಿಸಿ ಭಾರತೀಯರ ಮನಸ್ಸು ಹೊಸ ಒಲವು-ನಿಲುವುಗಳನ್ನು ಸ್ವೀಕರಿಸುತ್ತಿದ್ದ ಕಾಲವಾಗಿತ್ತು.

ಈ ಪ್ರಕಾರ ಸುತ್ತಮುತ್ತಣ ಮತ್ತು ಒಳಗಿನ ಗಾಳಿ ಬೆಳಕುಗಳಿಗೆ ಮುಕ್ತವಾಗಿ ತನ್ನನ್ನು ತೆರೆದುಕೊಂಡ ಹೊಸಗನ್ನಡ ಸಾಹಿತ್ಯ ಕೇವಲ ಏಳೆಂಟು ದಶಕಗಳಲ್ಲಿ ಸರ್ವವ್ಯಾಪಕವಾಗಿ, ಸಂಪುಷ್ಟವಾಗಿ, ಸರ್ವೋನ್ನತವಾಗಿ ೆಳೆದು ನಿಂತಿದೆ. ಕಾಲಕಾಲಕ್ಕೆ ನವೋದಯ, ಪ್ರಗತಿಶೀಲ, ನವ್ಯ, ದಲಿತ, ಬಂಡಾಯ, ಆಂದೋಲನಗಳಿಗೆ ನ್ನನ್ನು ಖುಷಿಯಿಂದ ಒಡ್ಡಿಕೊಂಡು, ಅವುಗಳ ಸಾರತ್ವವನ್ನು ಹೀರಿಕೊಂಡು ವಿರಾಟ ಸ್ವರೂಪಿಯಾಗಿ ವಿಜೃಂಭಿಸಿದೆ. ಾವಗೀತೆ, ಸಣ್ಣಕಥೆ, ಕಾದಂಬರಿ, ನಾಟಕ, ಪ್ರಬಂಧ ಮತ್ತು ಮಹಾಕಾವ್ಯ ಪ್ರಕಾರಗಳು ಈ ಕಾಲದ ಸಾಹಿತ್ಯದ ಮುಖ್ಯಾಂಗಗಳಾಗಿವೆ. ಹಾಗೂ ಇವೆಲ್ಲ ಪಾಶ್ಚಾತ್ಯ ಸಾಹಿತ್ಯದಿಂದ ಸ್ಫೂರ್ತಿ ಪ್ರೇರಣೆ ಪಡೆದಿರುವುದನ್ನು ಕಾಣಬಹುದಾಗಿದೆ.

ಕನ್ನಡದಲ್ಲಿ ಹೊಸ ಬಗೆಯ ಸಾಹಿತ್ಯ ಸೃಷ್ಟಿಗೆ ಮುಖ್ಯ ಪ್ರೇರಣೆ ಇಂಗ್ಲೀಷ್ ವಿದ್ಯಾಭ್ಯಾಸದಿಂದ ಬಂದದ್ದು. ಇಂಗ್ಲೀಷ್ ವಿದ್ಯಾಭ್ಯಾಸದಿಂದ ಸಾಹಿತ್ಯದ ಮಟ್ಟಿಗೆ ಮುಖ್ಯವಾಗಿ ಎರಡು ಪರಿಣಾಮಗಳಾದವು ಮೊದಲನೆಯದು ಹೊಸದೊಂದು ಜೀವನ ಮನೋಧರ್ಮದ ದರ್ಶನವಾದದ್ದು, ಎರಡನೆಯದು ಹೊಸದೊಂದು ಸಾಹಿತ್ಯದ ಜಗತ್ತೆ ಲಭ್ಯವಾದದ್ದು.

ಅಂದಿನ ಶಿಕ್ಷಣದ ರೀತಿಯನ್ನು ಈಗ ನಾವು ಕಲ್ಪಿಸಿಕೊಳ್ಳುವುದು ಅಗತ್ಯ ಪ್ರೌಢಶಾಲೆಯಲ್ಲಿಯೇ ಎಲ್ಲಾ ವಿದ್ಯಾರ್ಥಿಗಳೂ ಇಂಗ್ಲೆಂಡಿನ ಚರಿತ್ರೆಯನ್ನು ಅಭ್ಯಾಸ ಮಾಡುತ್ತಿದ್ದರು. ವಿಜ್ಞಾನದ ವಿದ್ಯಾರ್ಥಿಗಳು ಕಡ್ಡಾಯ ಇಂಗ್ಲೀಷ್ ಅಭ್ಯಾಸಕ್ಕೆ ಓದುತ್ತಿದ್ದ ಹಲವು ಪಠ್ಯ ಪುಸ್ತಕಗಳು ಇಂದು ಎಂ.ಎ. ತರಗತಿಗಳವರು ಅಭ್ಯಾಸ ಮಾಡುವಂತಹವು. 14ನೆಯ ಶತಮಾನದ ಛಾಸರ್‌ನ ಕವನಗಳನ್ನು ಓದುತ್ತಿದ್ದರು. ಷೇಕ್ಸ್‌ಪಿಯರ್‌ನ ನಾಟಕಗಳ ಅಭ್ಯಾಸ ಮಾಡುತ್ತಿದ್ದರು. ಜೊತೆಗೆ ಕ್ರಿ.ಪೂ. 4ನೇ ಶತಮಾನದ ಗ್ರೀಕ್ ಬರಹಗಾರ ಕ್ಸೆನೊಫಾನ್‌ನ 'ಅನಾಬೇಸಿಸ್'ನ ಇಂಗ್ಲೀಷ್ ಅನುವಾದ, ಪ್ಲೇಟೋನ ಸಂಭಾಷಣೆಗಳ ಅನುವಾದ, ಜೇಮ್ಸ್‌ಫ್ರೂಡನ 'ಜೂಲಿಯಸ್ ಸೀಸರ್', ಕಾರ್ಲೈಲ್‌ನ 'ಹೀರೋ ಅಂಡ್ ಹೀರೋ ವರ್‌ಷಿಪ್' ಮತ್ತು ಮಿಲ್ಟನ್, ವರ್ಡ್ಸ್‌ವರ್ತ್, ಷೆಲಿ, ಕೀಟ್ಸ್, ಬ್ರೌನಿಂಗ್, ಟೆನಿಸನ್, ಆರ್ನಾಲ್ಡ್ ಮೊದಲಾದವರ ಕವನಗಳು, ಜೇನ್ ಆಸ್ಟಿನ್, ಸ್ಕಾಟ್, ಥ್ಯಾಕರೆ ಮೊದಲಾದವರ ಕಾದಂಬರಿಗಳು ಪಠ್ಯಪುಸ್ತಕಗಳಾಗಿರುತ್ತಿದ್ದವು ಎಂದರೆ ಸುಮಾರು ಐದು ಶತಮಾನಗಳಿಗೂ ಹೆಚ್ಚಿನ ಕಾಲದ ಇಂಗ್ಲೀಷ್ ಸಾಹಿತ್ಯವು ವಿದ್ಯಾರ್ಥಿಗಳಿಗೆ ಒಮ್ಮೆಲೆ ಲಭ್ಯವಾಯಿತು. ಇಂಗ್ಲೀಷ್ ಸಾಹಿತ್ಯ ಇಂಗ್ಲೆಂಡಿನ ಚರಿತ್ರೆ ಇವುಗಳ ಅಧ್ಯಯನದಿಂದ ಎಲ್ಲವನ್ನೂ ಪ್ರಶ್ನಿಸುವ, ವಿಶ್ಲೇಷಿಸುವ ಮನೋಧರ್ಮದ ಪರಿಚಯವಾಯಿತು.

ಇಷ್ಟೇ ಮುಖ್ಯವಾದ ಇನ್ನೊಂದು ಅಂಶ ಎಂದರೆ, ಸಾಹಿತ್ಯ ಜೀವನಗಳ ಸಂಬಂಧ ಎಷ್ಟು ವ್ಯಾಪಕವಾದದು, ನಿಕಟವಾದುದು ಹೇಗೆ ಸಾಹಿತ್ಯ, ಸಮಾಜ ಮತ್ತು ವ್ಯಕ್ತಿಯ ಜೀವನದ ಎಲ್ಲಾ ಸಂವೇದನೆಗಳಿಗೆ ಸ್ಪಂಧಿಸುತ್ತದೆ ಎಂಬುದರ ದರ್ಶನವಾದದ್ದು, ಸಮಾಜದ ಕಟ್ಟಡ, ರಾಜನ ಅಧಿಕಾರದ ಇತಿಮಿತಿ, ದಂಗೆಯ ಸ್ವರೂಪ, ಅಗತ್ಯ

ಇವೆಲ್ಲದರ ವಿಶ್ಲೇಷಣೆ, ಮಿಲ್ಟನ್ನನ ಕವನಗಳಲ್ಲಿ ಕವಿಯ ಸ್ವಾತಂತ್ರ್ಯ
ಪರಿಣಾಮ- ಷೇಕ್ಸಪಿಯರ್‌ನ ನಾಟಕಗಳಲ್ಲಿ ಇವೆಲ್ಲದರ ವಿಶ್ಲೇಷಣೆ, ಮಿಲ್ಟನ್ನನ ಕವನಗಳಲ್ಲಿ ಕವಿಯ ಸ್ವಾತಂತ್ರ್ಯದ ಪ್ರೇಮದ ಅಭಿವ್ಯಕ್ತಿ, ರೊಮ್ಯಾಂಟಿಕ್ ಕವಿಗಳಲ್ಲಿ ಕವಿಯ ವಿಶಿಷ್ಟ ಅನುಭವಗಳು ಇವೆಲ್ಲ ಭಾರತೀಯ ಸಾಹಿತ್ಯವನ್ನೇ ಓದಿದವರಿಗೆ ಹೊಸ ಅನುಭವವಾದವು. ಕಾರ್ಲೈಲ್, ರಸ್ಕಿನ್ ಮೊದಲಾದ ಸಾಹಿತಿಗಳು ಸಮಕಾಲೀನ ಸಮಾಜದ ಸಮಸ್ಯೆಗಳ ಸೂಕ್ಷ್ಮ ವಿಶ್ಲೇಷಣೆ ಮಾಡಿದರು. ರಸ್ಕಿನ್‌ನ 'ಅನ್ ಟು ದಿಸ್ ಲಾಸ್ಟ್' ಗಾಂಧೀಜಿಯವರ ಮೇಲೆ ಗಾಢವಾದ ಪರಿಣಾಮವನ್ನು ಮಾಡಿದುದನ್ನು ಇಲ್ಲಿ ಸ್ಮರಿಸಬಹುದು. ಸಮಕಾಲೀನ ವೈಜ್ಞಾನಿಕ ಮತ್ತು ರಾಜಕೀಯ ಆಗುಹೋಗುಗಳಿಗೆ ಕವಿ ಚೇತನದ ಸ್ಪಂದನ ಷೆಲ್ಲಿ, ಟೆನಿಸನ್, ಅರ್ನಾಲ್ಡ್ ಮೊದಲಾದವರ ಕಾವ್ಯಗಳಲ್ಲಿ ರೂಪ ತಾಳಿತು.

ಇಂಗ್ಲೀಷ್ ಭಾಷೆ, ಯುರೋಪಿನ ಚಿಂತನೆ ಮತ್ತು ಸಾಹಿತ್ಯಗಳ ಕಣ್ಣು ಕೋರೈಸುವ ಭಂಡಾರವನ್ನು ತೆರೆಯುವ ಬೀಗದ ಕೈ ಆಯಿತು. ಯುರೋಪಿನ ಸಂಸ್ಕೃತಿಯ ತೊಟ್ಟಿಲು ಅಥೆನ್ಸ್, ಆ ಪುಟ್ಟ ರಾಜ್ಯದ ತತ್ವಶಾಸ್ತ್ರ ಸಾಹಿತ್ಯಗಳೇ ಇಂದಿಗೂ ಯಾವ ವಿದ್ಯಾರ್ಥಿಯನ್ನಾದರೂ ಬೆರಗುಗೊಳಿಸುತ್ತವೆ. ಸಾಹಿತ್ಯ ಜೀವನಗಳ ಸಂಬಂಧವನ್ನು ವಿಶ್ವರೂಪದರ್ಶನ ದೊರಕಿದಂತೆಯೇ ಅಂದಿನ ವಿದ್ಯಾರ್ಥಿಗಳಿಗೆ ವಿಫುಲವಾದ ಶ್ರೀಮಂತವಾದ, ವೈವಿಧ್ಯಮಯವಾದ ಸಾಹಿತ್ಯ ಹಿಮಾಲಯ ದರ್ಶನವೂ ದೊರಕಿತು. ಹೀಗೆ ಆಂಗ್ಲ ಸಾಹಿತ್ಯದ ಪ್ರೇರಣೆಯಿಂದ ಆಧುನಿಕ ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳು ರಚನೆಯಾಗಲಿಕ್ಕೆ ಕಾರಣವಾದವು. ಕವನ, ಸಣ್ಣಕಥೆ, ನಾಟಕ, ಕಾದಂಬರಿ, ಜೀವನ ಚರಿತ್ರೆ, ಪ್ರಬಂಧ, ಕಾವ್ಯ ಮೀಮಾಂಸೆ, ವಿಮರ್ಶೆ ಹೀಗೆ ಇಂಗ್ಲೀಷ್ ಸಾಹಿತ್ಯದ ಅಭ್ಯಾಸ ಅದರ ಸತ್ವ ಶಕ್ತಿಗಳನ್ನು ತೆರೆದಿಟ್ಟಿತು. ಪಾಶ್ಚಾತ್ಯ ಪ್ರೇರಣೆ ಸಾಹಿತ್ಯ ಸೃಷ್ಟಿಗೆ ಕಾರಣವಾದದ್ದು ಮಾತ್ರವಲ್ಲ, ಸಾಹಿತ್ಯದ ಮನೋಧರ್ಮ ಮತ್ತು ಸ್ವರೂಪಗಳನ್ನು ಪ್ರಭಾವಿಸಿತು.

ಸಂಸ್ಕೃತ ಸಾಹಿತ್ಯ-ಕನ್ನಡ ಸಾಹಿತ್ಯಗಳ ಬಾಂಧವ್ಯ ಬಹು ಪ್ರಾಚೀನವಾದದ್ದು, ಪಾಶ್ಚಾತ್ಯ-ಸಂಸ್ಕೃತಿ ಭಾರತೀಯರನ್ನು ಆಕರ್ಷಿಸಿತು. ಅದರ ಜೊತೆಗೆ 'ನಮ್ಮದೆನ್ನುವುದು ಏನು ಇಲ್ಲವೇ?' ಎಂದು ಪ್ರಶ್ನಿಸಿಕೊಳ್ಳುವಂತೆ, ನಮ್ಮ ಪರಂಪರೆಯ ಆಸ್ತಿಯನ್ನು ವಿಮರ್ಶಿಸಿ ನೋಡುವಂತೆ ಪ್ರೇರೇಪಿಸಿತು. ಸಂಸ್ಕೃತದ ಕೃತಿಗಳನ್ನು ಕನ್ನಡದಲ್ಲಿ ಕನ್ನಡಿಗರಿಗೆ ಲಭ್ಯ ಮಾಡಿಕೊಡಬೇಕೆಂಬ ಹಂಬಲ ಮುಮ್ಮಡಿ ಕೃಷ್ಣರಾಜ ಒಡೆಯರಿಂದಲೇ ಸಾಹಿತ್ಯ ರಚನೆ ಮಾಡಿಸಿತು. ಎಸ್.ಜಿ. ನರಸಿಂಹಾಚಾರ್ಯರು ಕಾಳಿದಾಸನ ರಘುವಂಶದಿಂದ ಎರಡು ಖಂಡಕಾವ್ಯಗಳನ್ನು 'ಅಜನೃಪ ಚರಿತೆ' ಮತ್ತು 'ದಿಲೀಪ ಚರಿತೆ' ಎಂದು ಕನ್ನಡಿಸಿದರು. ಚುರುಮುರು ಶೇಷಗಿರಿರಾಯರು, ಬಸಪ್ಪಶಾಸ್ತ್ರಿಗಳು ಕಾಳಿದಾಸನ 'ಶಾಕುಂತಳ' ನಾಟಕವನ್ನು ಸೊಗಸಾಗಿ ಕನ್ನಡಕ್ಕೆ ತಂದರು. ಧೋಂಡೋ ನರಸಿಂಹ ಮುಳಬಾಗಿಲ ಅವರು 'ವೇಣೀ ಸಂಹಾರ', 'ಮೃಚ್ಛಕಟಿಕ' ಮತ್ತು 'ಉತ್ತರರಾಮಚರಿತ'ಗಳನ್ನು ಕನ್ನಡಕ್ಕೆ ಅನುವಾದಿಸಿದರು. ಈ ಕಾಲದ ಕವಿಗಳು ಮತ್ತೆ ಮತ್ತೆ ಸಂಸ್ಕೃತ ಸಾಹಿತ್ಯದತ್ತ ತಿರುಗಿದರು. ಮುದ್ದಣನೂ ತನ್ನ ಕೃತಿಗೆ ರಾಮಾಶ್ವಮೇಧ ವಸ್ತುವನ್ನೇ ಆರಿಸಿಕೊಂಡ ಈ ಸಂದರ್ಭದಲ್ಲೆ ಪಾಶ್ಚಾತ್ಯರಿಂದ ನಮ್ಮ ಸಂಸ್ಕೃತಿ ಸಾಹಿತ್ಯಗಳ ಅಧ್ಯಯನಕ್ಕೆ ದೊರೆತ ಕ್ರಿಯಾಶೀಲ ಪ್ರಚೋದನೆಯನ್ನು ಸ್ಮರಿಸಬೇಕು.

ಬಂಗಾಳಿ ಸಾಹಿತ್ಯದಿಂದ ಕನ್ನಡಕ್ಕೆ ಹೊಸ ಗಾಳಿ ಬೀಸಿತು. ಸಾಮಾಜಿಕ ಸುಧಾರಣೆಯ ಬಲವೂ ಭಾರತದ ಸತ್ವ-ಸಂಸ್ಕೃತಿಗಳ ಅಧ್ಯಯನದ ಬಲವೂ ಮೊದಲು ಬಲಗೊಂಡದ್ದು ಬಂಗಾಳದಲ್ಲಿ. ಭಾರತೀಯ ಭಾಷೆಯೊಂದರಲ್ಲಿ ಆಧುನಿಕ ಎನ್ನಬಹುದಾದ ಸಾಹಿತ್ಯ ಮೊದಲು ಸೃಷ್ಟಿಯಾದದ್ದು, ಬಂಗಾಳಿ ಭಾಷೆಯಲ್ಲಿ. 1865ರಲ್ಲಿ ಬಂಕಿಮ್ ಚಂದ್ರರ 'ದುರ್ಗೇಶ ನಂದಿನಿ' ಪ್ರಕಟವಾಯಿತು. 1882ರಲ್ಲಿ ಪ್ರಸಿದ್ಧ ಕಾದಂಬರಿ 'ಆನಂದ ಮಠ' ಪ್ರಕಟವಾಯಿತು. ಬಿ. ವೆಂಕಟಚಾರ್ಯರು 'ದುರ್ಗೇಶ ನಂದಿನಿ'ಯನ್ನು 1885ರಲ್ಲಿಯೂ 'ವಿಷವೃಕ್ಷ' ಕಾದಂಬರಿಯನ್ನು 1900 ರಲ್ಲಿಯೂ ಅನುವಾದಿಸಿದರು. ಬಂಕಿಮ್‌ಚಂದ್ರರ ಕಾದಂಬರಿಗಳಲ್ಲಿ ಸಾಮಾನ್ಯವಾಗಿ ಐತಿಹಾಸಿಕ ಎಂದು ಕರೆಯುವ ಕೃತಿಗಳಲ್ಲಿಯೂ ಐತಿಹಾಸಿಕ ಅಂಶ ಕಡಿಮೆಯೇ. ಆದರೆ ಐತಿಹಾಸಿಕ ಸಂಗತಿಗಳನ್ನು ಸಂದರ್ಭಗಳನ್ನು ಬಳಸಿ ಕಾದಂಬರಿಗಳನ್ನು ರಚಿಸುವ ಮಾದರಿ ಇವರಿಂದ ಕನ್ನಡಕ್ಕೆ ದೊರಕಿದಂತಾಯಿತು. ಬಂಕಿಮ್‌ರ ನಂತರ ಬಂಗಾಳದ ಸಾಹಿತ್ಯದಲ್ಲಿ ರವೀಂದ್ರನಾಥ್ ಠಾಗೋರ್‌ರ ಯುಗದ ಉದಯವಾಯಿತು. ಅವರಿಗೆ 1913ರಲ್ಲಿ ನೊಬೆಲ್ ಬಹುಮಾನ

Scanned with OKEN Scanner

ದೊರಕಿದ ನಂತರ ಅವರ 'ಗೀತಾಂಜಲಿ' ಭಾರತದ ಎಲ್ಲಾ ಭಾಷೆಗಳಿಗೆ ಅನುವಾದವಾಯಿತು. ಅಧ್ಯಯನ ನಡೆದವು. ವೈಷ್ಣವ ಕೀರ್ತನೆಗಳ ಪರಂಪರೆಗೆ ಮತ್ತೆ ಶಕ್ತಿ ಮೂಡಿತು. ಅವರ ಗುಣಗಾನ ಪರಂಪರೆಗಳಲ್ಲೂ ಆಸಕ್ತಿ ಮೂಡಿತು. ಅಲ್ಲದೆ ರವೀಂದ್ರರ ಕಿರುಗತೆಗಳು, ದೇಶೀಯ ಭಾಷೆಯಲ್ಲಿ ಸಾಹಿತ್ಯ ರಚನೆಗೆ ಹೊಸ ಪುಷ್ಟಿ ಬಂದಂತಾಯಿತು.

ಹಿಂದಿನ ಮೈಸೂರು ರಾಜ್ಯಕ್ಕೆ ಸಾಹಿತ್ಯ ಸಂಸ್ಕೃತಿಗಳಲ್ಲಿ ಸ್ವಾಭಿಮಾನವಿದ್ದ ಉದಾರ ದೃಷ್ಟಿಯ ಮಹಾರಾಜರು ದೊರೆತದ್ದು ಕನ್ನಡದ ಸುದೈವ. ಮುಮ್ಮಡಿ ಕೃಷ್ಣರಾಜರು, ಚಾಮರಾಜ ಒಡೆಯರು, ನಾಲ್ವಡಿ ಕೃಷ್ಣರಾಜ ಒಡೆಯರು ಎಲ್ಲರೂ ಪಂಡಿತರಿಗೆ, ಕಲಾವಿದರಿಗೆ ಕಲ್ಪವೃಕ್ಷವಾಗಿದ್ದರು. ಕನ್ನಡ ನಾಡಿನಾಚೆಯ ವಿದ್ವಾಂಸರೂ, ಸಾಹಿತಿಗಳೂ, ಕಲಾವಿದರೂ ಮೈಸೂರು ಮಹಾರಾಜರ ಮೆಚ್ಚುಗೆಯನ್ನು, ನೆರವನ್ನೂ ಪಡೆದದ್ದುಂಟು. ಮುಮ್ಮಡಿ ಕೃಷ್ಣರಾಜರೇ ಸ್ವತಃ ಗ್ರಂಥ ರಚನೆ ಮಾಡಿದರು. ಈ ಕಾಲದ ಪ್ರಭಾವಗಳನ್ನು ಗುರುತಿಸುವಾಗ ಬಹುಮಟ್ಟಿಗೆ ವಿದ್ವಜ್ಜನರ ಎಣಿಕೆಗೆ ಬರದೆ ಜನಜೀವನ ಮೌಲ್ಯಗಳನ್ನು ತನ್ನ ಗರ್ಭದಲ್ಲಿರಿಸಿಕೊಂಡು ಕಾಯ್ದಿರುವ, ಅನಕ್ಷರಸ್ಥರಾದರೂ ಹುಟ್ಟು ಕವಿಗಳಾದವರ ಆಣಿಮುತ್ತುಗಳನ್ನು ಅರಿಸಿರುವ ಜಾನಪದವನ್ನು ಮರೆಯುವಂತಿಲ್ಲ. ಕಳೆದ ಶತಮಾನದ ಮಧ್ಯಭಾಗದಲ್ಲೆ ಚಾರ್ಲ್ಸ್ ಗೋವರ್ ಎಂಬಾತ ' ಫೋಕ್ ಸಾಂಗ್ಸ್ ಆಫ್ ಸದರನ್ ಇಂಡಿಯಾ' ಎಂಬ ಗ್ರಂಥದಲ್ಲಿ ಹಲವು ಕನ್ನಡ ಜಾನಪದ ಗೀತೆಗಳನ್ನು ಇಂಗ್ಲೀಷಿಗೆ ಭಾಷಾಂತರ ಮಾಡಿದ. ಜೆ.ಎಫ್. ಫ್ಲೀಟ್ ಎಂಬಾತ 'ಇಂಡಿಯನ್ ಆ್ಯಂಟಿಕ್ವೆರಿಯ ಸಂಪುಟಗಳಲ್ಲಿ 1885ರ ಸುಮಾರಿಗೆ ಲಾವಣಿಗಳನ್ನು ಪ್ರಕಟಿಸಿದನು. ಇವುಗಳಲ್ಲಿ ಹಲವು ಐತಿಹಾಸಿಕ ಘಟನೆಗಳನ್ನು ಕುರಿತವು. ಕಿಟೆಲ್ ತನ್ನ ಶಬ್ದಕೋಶದಲ್ಲಿ ನಾಲ್ಕು ಸಾವಿರಕ್ಕು ಹೆಚ್ಚು ಗಾದೆಗಳನ್ನು ಸಂಗ್ರಹಿಸಿದರು. ನವೋದಯದ ಪ್ರಾರಂಭದಲ್ಲೆ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಲಾವಣಿ ಸಾಂಗತ್ಯವನ್ನು ಕುರಿತು ಒಳ್ಳೆಯ ಲೇಖನವನ್ನು ಬರೆದರು. ಯಕ್ಷಗಾನ, ಬಯಲಾಟಗಳು, ಹಳ್ಳಿಯ ಜೀವನದ ಭಾಗವಾಗಿದ್ದವು. ಮಾಸ್ತಿಯವರ 'ಭಾವ', ಶ್ರೀರಂಗರ ಸಾಹಿತಿಯ 'ಆತ್ಮ ಜಿಜ್ಞಾಸೆ' ಇಂತಹ ಕೃತಿಗಳನ್ನು ಓದಿದವರಿಗೆ ಜಾನಪದ ಎಂತಹ ಜೀವಂತ ಶಕ್ತಿಯಾಗಿತ್ತು ಎಂಬುದು ಕಾಣುತ್ತದೆ. ಜನಪದ ಸಾಹಿತ್ಯ ಬೇಂದ್ರೆಯವರು ಬಳಸಿಕೊಂಡ ಭಂಡಾರಗಳಲ್ಲಿ ಒಂದು. ಅಂತೂ ಕನ್ನಡ ಸಾಹಿತ್ಯದಲ್ಲಿ ಬೆಳೆ ಸೊರಗಿದ ಕಾಲದಲ್ಲಿ ಈ ನೆಲವನ್ನು ಫಲವತ್ತು ಮಾಡಲು ಹತ್ತು ಕಡೆಗಳಿಂದ ನೀರು ಹರಿದು ಬಂದಿತು.

ಒಟ್ಟಿನಲ್ಲಿ ಕನ್ನಡ ಸಾಹಿತ್ಯ ಕಳೆದ ಒಂದು ಸಾವಿರ ವರ್ಷಗಳ ಸಾಧನೆ ಒಂದು ತೂಕವಾದರೆ, ನಂತರದ ನೂರು ವರ್ಷಗಳ ಸಾಧನೆಯೇ ಮತ್ತೊಂದು ತೂಕವಾಗಿದೆ. ಈ ಸಾಧನೆಯು ವೈವಿಧ್ಯಮಯವಾಗಿದೆ, ಅಪೂರ್ವಮಯವಾಗಿದೆ ಮತ್ತು ಈ ಕಾರಣದಿಂದ ಯಾವುದೇ ಭಾರತೀಯ ಭಾಷಾ ಸಾಹಿತ್ಯಕ್ಕೆ ಸಮಸ್ಪರ್ಧಿಯಾಗಿದೆ ಎಂದೇಳಬಹುದು. ಕನ್ನಡ ಸಾಹಿತ್ಯ ಈಗ ಯಾವ ಚಳುವಳಿಯ ಅಬ್ಬರವಿಲ್ಲದೆ ಧ್ಯಾನ ಸ್ಥಿತಿಯಲ್ಲಿರುವಂತೆ ತೋರುತ್ತಿದೆಯಾದರೂ ಜಾಗತೀಕರಣ, ಉದಾರೀಕರಣ, ಆಧುನೀಕರಣಗಳ ಹೆಬ್ಬಾಗಿಲಿನಲ್ಲಿ ನಿಂತು ಅವುಗಳ ಎದುರಿಸುವ ಸ್ಥಿತಿಯಲ್ಲಿ ಕನ್ನಡದ ಮನಸ್ಸು ಚಿಂತನಶೀಲವಾಗಿರುವಂತೆ ಕಂಡುಬರುತ್ತದೆ.

-ಕೆ.ಸಿ. ಶಿವಣ್ಣ
ಉಪನ್ಯಾಸಕರು, ಕನ್ನಡ ವಿಭಾಗ



Scanned with OKEN Scanner

# ಮುಳ್ಳಿನ ಗುಲಾಬಿ

ಭಾರತೀಯ ಸಂಸ್ಕೃತಿಯಲ್ಲಿ ಅನಾದಿ ಕಾಲದಿಂದಲೂ ಹೆಣ್ಣಿಗೆ ಮಹತ್ವದ ಸ್ಥಾನ ನೀಡಿದೆ. ನಮ್ಮ ಸಮಾಜ ಇದಕ್ಕೆ ಸಾಕಷ್ಟು ಪುರಾವೆಗಳೂ ದೊರೆಯುತ್ತವೆ.

ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು
ಕಣ್ಣು ಕಾಣದ ಗಾವಿಲರು.
ಪೆಣ್ಣಲ್ಲವೇ ನಮ್ಮನ್ನೆಲ್ಲ ಪಡೆದ ತಾಯಿ
ಪೆಣ್ಣಲ್ಲವೇ ನಮ್ಮನ್ನೆಲ್ಲ ಪೊರೆದವಳು

ಸಂಚಿ ಹೊನ್ನಮ್ಮ ವಿರಚಿತ ಕವಿತೆಯ ಸಾಲುಗಳು ಎಂದೆಂದಿಗೂ ಪ್ರಸ್ತುತ ಎಂತಹ ಅರ್ಥಗರ್ಭಿತವಾದ ಮಾತುಗಳು. ಹಾಗೇ ಆರ್ಯ ಸಮಾಜದಲ್ಲಿ ಮಹಿಳೆಯರಿಗೆ ಉತ್ತಮ ಸ್ಥಾನಮಾನ ದೊರಕಿತ್ತು. ವೇದ ಉಪನಿಷತ್ತುಗಳನ್ನು ಕಲಿಯುವ ಅವಕಾಶ ನೀಡಲಾಗಿತ್ತು. ಹೋಮ ಹವನಗಳಲ್ಲಿ ಭಾಗವಹಿಸಬಹುದಿತ್ತು.

ಉದಾ:ಅಖಿಲ, ಗಾರ್ಗೇಯಿ ಮೈತ್ರೇಯಿ ಅಂತಹ ಮಹಾನ್ ಸ್ತ್ರೀಯರು ಅಂದು (ಸುರಕ್ಷಿತ) ಸುಶಿಕ್ಷಿತ ಮಹಿಳೆಯರೆನಿಸಿದ್ದರು. ತದನಂತರದಲ್ಲಿ ಹೆಣ್ಣಿನ ಶೋಷಣೆ ನಡೆಯಲಾರಂಭಿಸಿತು ರಾಮಾಯಣದಲ್ಲಿ ಸೀತೆ ಅನುಭವಿಸಿದ ಯಾತನೆ, ಆಕೆಯ ಸಹೋದರಿ ಊರ್ಮಿಳೆ ಪಟ್ಟ ಪಾಡು, ಮಹಾಭಾರತದಲ್ಲಿ ದ್ರೌಪದಿ ಅನುಭವಿಸಿದ್ದ ಕಷ್ಟ, ಹೀಗೆ ಸರದಿಯಂತೆ ಶತ ಶತಮಾನಗಳಿಂದಲೂ ಹೆಣ್ಣಿನ ಶೋಷಣೆ ನಡೆಯುತ್ತಲೇ ಇದೆ.

ಸತಿ ಸಹಗಮನ ಪದ್ಧತಿ, ಅವಕುಂಠನ ಪದ್ಧತಿಯಂತಹ ಕಟ್ಟುಪಾಡುಗಳಿಂದ ಆಕೆಯನ್ನು ಬಂಧನದಲ್ಲಿರಿಸಲಾಯಿತು. ಶಿಕ್ಷಣದಿಂದ ವಂಚಿತಳಾದಳು ಕೇವಲ ಮನೆಯ ಚಾಕರಿಗಾಗಿ ಇರುವವಳು ಎಂಬಂತಹ ದೃಷ್ಟಿಕೋನ ಬೆಳೆಸಿಕೊಂಡಿತು ನಮ್ಮ ಪುರುಷ ಸಮಾಜ.

ದೈವತ್ವಕ್ಕೆ ಏರಿಸಿದ್ದ ಪುರುಷ ಸಮಾಜವೇ ದಬ್ಬಾಳಿಕೆ ಮಾಡಲಾರಂಭಿಸಿತು. ಆದರೆ ಮಹಿಳೆಯ ಬದುಕಿನಲ್ಲಿ ಆಶಾಕಿರಣದಂತೆ ರಾಜಾ ರಾಮ ಮೋಹನರಾಯರು ಬ್ರಹ್ಮಸಮಾಜ ನಿರ್ಮಿಸಿ, ಸತಿಸಹಗಮನ ಪದ್ಧತಿಯಂತಹ ಅವಕಾಶ ಕಲ್ಪಿಸಿದರು. ಅವರ ಜೊತೆ ಜ್ಯೋತಿಬಾಪುಲೆ, ಗೋವಿಂದ ರಾನಡೆಯಂತಹ ನೇತಾರರು ಕೈ ಜೋಡಿಸಿದರು.

ದೇಶದ ಮುಕುಟ ಮಣಿಗಳಿಗೆ ಜನ್ಮ ನೀಡಿದ "ಶಿವಾಜಿಯ" ತಾಯಿ "ಜೀಜಾ ಬಾಯಿ" ಗಾಂಧೀಜಿಯವರ ತಾಯಿ ಪುತಲೀಬಾಯಿ, ವಿವೇಕನಂದರ ತಾಯಿ ಭುವನೇಶ್ವರಿ ದೇವಿಯಂತಹ ಶ್ರೇಷ್ಠ ಮಹಿಳೆಯರು.

ಮಹಿಳೆಯರು ಸಬಲರು ಎಂಬುದನ್ನು ನಿರೂಪಿಸಿದರು. ಅದೇ ರೀತಿ ಕಿತ್ತೂರು ರಾಣಿ ಚೆನ್ನಮ್ಮ, ಲಕ್ಷ್ಮೀ ಬಾಯಿಯಂತಹ ದಿಟ್ಟ ಧೈರ್ಯ ತೋರಿದ ಧೀರ ಮಹಿಳೆಯರೂ ನಮ್ಮ ನೆಲದವರೇ ಎಂಬುದನ್ನು ಮರೆಯುವಂತಿಲ್ಲ.

ಕಾರ್ಯೇಷು ದಾಸಿ, ಕರುಣೇಷು ಮಂತ್ರಿ
ಭೋಜ್ಯೇಷು ಮಾತಾ, ಶಯನೇಷು ಧಾತ್ರಿ,
ಶಾತ್‌ಧರ್ಮಯುಕ್ತ ಕುಲಧರ್ಮ ಪತ್ನೀ..

ನೀತಿ ಸಾರ : ಹೆಣ್ಣು ತಾಯಿಯಾಗಿ, ಸಹೋದರಿಯಾಗಿ, ಪತ್ನಿಯಾಗಿ, ಮಗಳಾಗಿ ದೈವ ಸ್ವರೂಪಿಣಿಯಾಗಿ, ತಾಳ್ಮೆ ಸಹನೆಯ ಗಣಿಯಾಗಿ ಈ ಭೂಮಿ ಮೇಲೆ ಬದುಕಿರುವ ನೈಜ ದೇವತೆ, ಆಕೆಯ ಋಣವ ತೀರಿಸಲು ಎಷ್ಟು ಜನ್ಮ ಕಳೆದರೂ ಸಾಲದು ಅಲ್ಲವೇ?

ಅವಳಿಗೆ ಅವಳೇ ಸಾಟಿ ಸಂಸಾರ ನೌಕೆಯ ಬಂಡಿ ಸಾಗಿಸಲು ಆಕೆ ಹಾಕುವ ಶ್ರಮಕ್ಕೆ ಎಲ್ಲರೂ ಕೈ ಮುಗಿಯಲೇ ಬೇಕು.

ಅವಳ ನಿಷ್ಕಲ್ಮಷ ಪ್ರೀತಿ, ಸ್ವಾರ್ಥ ರಹಿತ ಪ್ರೇಮ, ಪ್ರತಿಫಲಾಪೇಕ್ಷೆ ಇಲ್ಲದ ಸೇವೆ ನಿಜಕ್ಕೂ ಅವರ್ಣನೀಯ



Scanned with OKEN Scanner

ದೇವರು ಎಲ್ಲೆಡೆಯೂ ಇರಲು ಸಾಧ್ಯವಿಲ್ಲ ಎಂದು ತಾಯಿಯನ್ನು ಸೃಷ್ಟಿಸಿದ ತಾಯಿ ಕೊನೆಯವರೆಗೂ ಜೊತೆ ಇರಲು ಸಾಧ್ಯವಿಲ್ಲ ಎಂದು ಹೆಂಡತಿಯನ್ನು ಸೃಷ್ಟಿಸಿದ.

ಹೆಣ್ಣು ಇಂದು ಸುಶಿಕ್ಷಿತಳಾಗಿ ಸ್ವಾವಲಂಬಿಯಾಗಿ ಬದುಕು ಕಟ್ಟಿಕೊಳ್ಳುವ ಸ್ಥೈರ್ಯವಿದ್ದರೂ ಈ ಪುರುಷಸಮಾಜದ ಎದುರು ಹಿಮ್ಮೆಟ್ಟಲೇಬೇಕಾಗಿದೆ, ಎಂಬುದು ನಿಜಕ್ಕೂ ಶೋಚನೀಯ. ಅಧಿಕಾರಿಯಾಗಿ ಅಧ್ಯಕ್ಷೆಯಾಗಿ ಎಲ್ಲಾ ಕ್ಷೇತ್ರದಲ್ಲಿಯೂ ತೊಡಗಿಸಿಕೊಂಡಿದ್ದರೂ ಸಹ ಆಕೆಗೆ ಇಂದು ಜೀವನ ಭದ್ರತೆಯ ಕೊರತೆ ಕಾಡುತ್ತಿದೆ. ಹೆಣ್ಣು ನೆಮ್ಮದಿಯಾಗಿ ಬದುಕಬೇಕು ಎಂದರೆ ನಮ್ಮ ಪುರುಷ ಸಮಾಜದ ಧೋರಣೆ ಬದಲಾಗಬೇಕು. ಹಾಗೇ ದೃಷ್ಟಿಕೋನಗಳು ಬದಲಾಗಬೇಕು. ಪುರುಷರ ಜನ್ಮಕ್ಕೆ ಕಾರಣಳು ಈ ಹೆಣ್ಣು ಎಂಬುದನ್ನು ಮರೆತು ಮರೆತ್ತಿರುವುದು ನಿಜಕ್ಕೂ ನೋವಿನ ಸಂಗತಿ. ಇಂದು ಹೆಣ್ಣು ಮಕ್ಕಳನ್ನು ಕಾಮುಕ ದೃಷ್ಟಿಯಿಂದ ನೋಡುತ್ತಿದೆ ನಮ್ಮ ಸಮಾಜ. ಭೋಗದ ವಸ್ತು ಅದೊಂದು ಜೀವಂತ ಕಲ್ಲು ಬೊಂಬೆ ಎಂದೆಣಿಸಿದೆ. ಹೆಣ್ಣು ತಾಯಿಯಾಗಿ ಬೇಕು ಮಗಳಾಗಿ ಏಕೆ ಬೇಡ ಈ ಸಮಾಜಕ್ಕೆ. ಭ್ರೂಣಹತ್ಯೆಯೆಂಬ ಪೆಡಂಭೂತ ಅಂಟಿ ಕುಳಿತಿದೆ. ಏನೂ ಅರಿಯದ ಆ ಕಂದನನ್ನು ಹತ್ಯೆಗೈಯುವುದು ಮಹಾ ಪಾಪವಲ್ಲವೇ?

ಗಂಡುಮಗು ಜನಿಸಿದಾಗ ಸಿರಿಯೇ ಸಿಕ್ಕಂತೆ ಸಂಭ್ರಮಿಸುವ ಜನ ಹೆಣ್ಣು ಮಗು ಜನಿಸಿದರೆ ಹೊರೆ ಎಂಬಂತೆ ನೋಡುವ ಮೂಢನಂಬಿಕೆ ಎಂದಿಗೆ ಅಳಿಸಿ ಹೋಗುವುದೇ ತಿಳಿಯದು. ವಿಜ್ಞಾನ ಕ್ಷೇತ್ರದಲ್ಲಿ ಇಷ್ಟು ಮುಂದುವರಿದರೂ ತಂತ್ರಜ್ಞಾನ ಬೆಳೆಯುತ್ತಿದ್ದರೂ ವಿದ್ಯಾವಂತರಿರುವ ಸಮಾಜದಲ್ಲಿ ಇನ್ನೂ ಜೀವಂತವಾಗಿ ಬೇರೂರಿದೆ ಮೂಢನಂಬಿಕೆ, ಪರಿವೇಯಿಲ್ಲದೆ ದೊಡ್ಡ ಪಾಪದ ಕೂಪಕ್ಕೆ ಕೈ ಹಾಕುತ್ತಿದೆ.

ರಕ್ಷಣೆ ನೀಡಬೇಕಾದವರೆ ಭಕ್ಷಕರಾದರೆ ಹೆಣ್ಣಿಗೆಲ್ಲಿದೆ ಸುರಕ್ಷತೆ, ಅವಳೊಂದು ಜೀವ, ಅವಳ ಭಾವನೆಗಳಿಗೆ ಸ್ಪಂದಿಸಿ, ಸ್ವಚ್ಛಂದ ಬದುಕು ನಿರ್ಮಿಸಿಕೊಡಬೇಕಾದ ನಮ್ಮ ಸಮಾಜ ಅವಳನ್ನ ಹಿಂಸಿಸಿ ಅವಳ ಸಮಾಧಿಯ ಮೇಲೆ ಕೇಕೆ ಹಾಕಿ ಕುಣಿಯುತ್ತಿರುವುದು ನಿಜಕ್ಕೂ ಹೇಯಕರವಾಗಿದೆ. ಹಿಂದಿನ ರಾಕ್ಷಸರಿಗೂ ಇಂದಿನ ನೀಚ ಪುರುಷ ಸಮಾಜಕ್ಕೂ ಯಾವುದೇ ವ್ಯತ್ಯಾಸ ಕಾಣುತ್ತಿಲ್ಲ.

ಇದು ಹೀಗೆ ಮುಂದುವರಿದರೆ ಭಾರತೀಯ ಸಂಸ್ಕೃತಿಗೆ ಕಳಂಕ ಹಿಡಿಯುವುದು ಖಚಿತ.

ವಿನಾಶದ ಅಂಚಿಗೆ ತಲುಪುವುದು ಖಚಿತ. ನಮ್ಮ ಪುರುಷ ಸಮಾಜ ಬದಲಾಗಬೇಕಿದೆ. ಮೌಢ್ಯ ಕಿತ್ತೊಗೆಯಬೇಕಿದೆ. ಹೆಣ್ಣಿನ ಬಗ್ಗೆ ಪೂಜ್ಯ ಭಾವನೆ ಬೆಳೆಸಿಕೊಳ್ಳಬೇಕಿದೆ. ಇದಕ್ಕೆ ಕೇವಲ ಸರ್ಕಾರ, ಸಮಾಜ ಮಾತ್ರ ಕಾನೂನು ರೂಪಿಸಿದರೆ ಸಾಲದು ಸ್ವತಃ ನಾವುಗಳೂ ಕೈಜೋಡಿಸಬೇಕು. ಹೆಣ್ಣಿನ ಸಂಕುಲವನ್ನು ಉಳಿಸಿಕೊಳ್ಳಬೇಕು. ಆತ್ಮ ರಕ್ಷಣೆ ಮಾಡಿಕೊಳ್ಳುವ ಸ್ಥೈರ್ಯ ಬೆಳೆಸಿಕೊಳ್ಳಬೇಕು. ಭಾರತಮಾತೆಯ ಸಂಸ್ಕೃತಿಯ ಉಳುವಿಗಾಗಿ ನಾವು ಹೋರಾಡಲೇಬೇಕು. ಅದು ಅನಿವಾರ್ಯ, ಹೆಣ್ಣನ್ನು ಕೀಳಾಗಿ ನೋಡುತ್ತಿರುವ ನಮ್ಮ ಸಮಾಜಕ್ಕೆ ತಕ್ಕಪಾಠ ಕಲಿಸಲೇಬೇಕು.

ಹೆಣ್ಣು ಎಲ್ಲವೂ ಹೌದು, ಜೀವನೋತ್ಸಾಹದ ಜೀವ ಜಲ ಎಂದೂ ಮಾಸದ ಮಾನಸ ಸರೋವರ, ಚೈತನ್ಯ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ದುರ್ಬಲಳೆಂಬ ಪಟ್ಟ ಹೊತ್ತ ಪ್ರಬಲೆ, ಸಬಲೆ ಶಕ್ತಿಶಾಲಿ, ಬತ್ತದ ಚಿಲುಮೆ ಸಂಸ್ಕೃತಿಯ ರಕ್ಷಕಿ, ತ್ಯಾಗದ ಪ್ರತೀಕ ಸಂಬಂಧಗಳ ಹುಟ್ಟಿಗೆ ಕಾರಣಳು, ಪ್ರೀತಿಯ, ಮಮತೆಯ ಅಕ್ಷಯ ಪಾತ್ರೆ ಅಹಂ ಇಲ್ಲದ , ಸ್ವಾಭಿಮಾನಿ ಹೆಣ್ಣು, ಒಂದು ಜೀವಕ್ಕೆ ಜೀವ ಕೊಡುವ ಶಕ್ತಿ ಇರುವುದು ಹೆಣ್ಣಿಗೆ ಮಾತ್ರ, ಅವಳ ಋಣವ ತೀರಿಸಲೂ ಎಂದಿಗೂ ಸಾಧ್ಯವಿಲ್ಲ. ನಮ್ಮ ಜೀವನ ಅವಳು ಹಾಕಿದ ಭಿಕ್ಷೆ ಎಂಬುದನ್ನು ಮರೆತು ಮರೆಯುತ್ತಿದೆ ನಮ್ಮ ಪುರುಷ ಸಮಾಜ.

– ಸೌಮ್ಯ ಎಂ.
ದ್ವಿತೀಯ ಬಿ.ಎಸ್ಸಿ.,

# ಅಕ್ಕನ ವಚನಗಳಲ್ಲಿ ಆಧ್ಯಾತ್ಮ

ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ವೈದಿಕ ಚಿಂತನಾ ಕ್ರಮದ ಪುರುಷ ಪರ ನೀತಿಯಿಂದಾಗಿ ಹೆಣ್ಣು ಮೋಕ್ಷಾಧಿಕಾರಕ್ಕೆ ಅನರ್ಹಳಾಗಿ ಶೂದ್ರ ನೆಲೆಗೆ ಸರಿದಿದ್ದ ಮಹಿಳೆಯರಿಗೆ ಧರ್ಮಸಾಧನೆಯನ್ನು ಮುಕ್ತಗೊಳಿಸಿದ ಜೈನ, ಬೌದ್ಧ ಧರ್ಮಗಳು ಮಹಿಳೆಯರಿಗೆ ಲೌಕಿಕ ಪಾರಲೌಕಿಕ ಸಮಸ್ಯೆಗಳನ್ನು ಕೆಲಮಟ್ಟಿಗೆ ಹಗುರಗೊಳಿಸಿ, ಸ್ತ್ರೀ ವಿರೋಧಿಯಾಗಿದ್ದ ಸಾಮಾಜಿಕ ವಾಸ್ತವತೆಯಲ್ಲಿ ಜೀವಪರತೆಯ ಹೊಸಬೆಳಕು ಮೂಡಿಸಿದವು. ಕಾಲಾನಂತರ ಪರಕೀಯರ ಆಕ್ರಮಣ, ರಾಜಕೀಯ, ಧಾರ್ಮಿಕ ಸ್ಥಿತ್ಯಂತರಗಳು ಮತ್ತು ಮತ ಧರ್ಮಗಳ ಪೈಪೋಟಿಯಲ್ಲಿ ಮಹಿಳೆಯ ಬದುಕು ಹೊಸ ಹೊಸ ನಿರ್ಬಂಧಗಳಿಗೆ ಗುರಿಯಾಯಿತು. ಪುರುಷಾಧೀನತೆಯೇ ಶ್ರೇಷ್ಠ ಮೌಲ್ಯ ಎನಿಸಿತು. ಹೆಣ್ಣು ದುಃಖದಾಯಿನಿ ಎನ್ನುವ ತಿರಸ್ಕಾರಕ್ಕೆ ಗುರಿಯಾದಳು. ಸೇವೆ ಮತ್ತು ಸಂತಾನೋತ್ಪತ್ತಿಯ ಸಾಧನ ಮಾತ್ರವೇ ಆಗಿದ್ದ ಸಂದರ್ಭದಲ್ಲಿ ಕಾಣಿಸಿಕೊಂಡ ಶೈವ ಮತ್ತು ವೈಷ್ಣವ ಭಕ್ತಿ ಪಂಥಗಳ ಜೀವಪರ ಆಶಯಗಳು ಮಹಿಳೆಯರನ್ನು ಸುತ್ತುವರಿದಿದ್ದಾ ಸಾಮಾಜಿಕ - ಧಾರ್ಮಿಕ ದಿಗ್ಬಂಧನಗಳನ್ನು ಸಡಿಲಗೊಳಿಸಿದವು.

ಸ್ತ್ರೀಯ ವ್ಯಕ್ತಿತ್ವ ಮತ್ತು ಅಸ್ತಿತ್ವವನ್ನು ಪ್ರಾಪಂಚಿಕ ನೆಲೆಯಲ್ಲಿ ಕನಿಷ್ಠವಾಗಿಸಿ ಆಧ್ಯಾತ್ಮಿಕವಾಗಿ ಮಾಯೆ, ರಾಕ್ಷಸಿ ಎಂದೂ ಪರಿಗಣಿಸುತ್ತಿದ್ದ ಮಧ್ಯ ಕಾಲದ ಪುರುಷ ಪ್ರಧಾನ ಸಾಂಸ್ಕೃತಿಕ ಸಂದರ್ಭದಲ್ಲಿ ಕರ್ನಾಟಕದ ಶರಣರು ವ್ಯಕ್ತಪಡಿಸಿದ ಲಿಂಗ ಸಮಾನತೆಯ ಮಾನವೀಯ ಕಾಳಜಿ ವಿಸ್ಮಯಕಾರಿಯಾದ ಬೆಳವಣಿಗೆಯಾಗಿದೆ. ಜೀವವಿರೋಧಿ, ಸ್ತ್ರೀ ವಿರೋಧಿ ವ್ಯವಸ್ಥೆಯನ್ನು ಮಾನವೀಕರಣಗೊಳಿಸಲೆತ್ನಿಸಿದ ಜನಪರ, ಜೀವಪರ ವಿಮೋಚನಾ ಹೋರಾಟವಾಗಿ ಪ್ರಕಟವಾದ ವಚನ ಚಳುವಳಿಯು ಚಾರಿತ್ರಿಕವಾಗಿ ಬಹಳ ಮೌಲ್ಯಯುತವಾದದ್ದು (ವರ್ಣ - ವರ್ಗ ಶ್ರೇಣೀಕರಣದ ವಿರುದ್ಧ). ಹಾಗೂ 12ನೇ ಶತಮಾನದ ಈ ವಚನ ಚಳುವಳಿಯು ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗೆ ಕ್ರಾಂತಿಕಾರಕ ತಿರುವುಗಳನ್ನು ಒದಗಿಸಿದ ಮಹತ್ವದ ಘಟ್ಟ. ಭಾರತೀಯ ಚಿಂತನಾ ಕ್ರಮವನ್ನು ಏಕಲಿಂಗಿಯಾಗಿಸಿದ ಲಿಂಗ ತಾರತಮ್ಯದ ಕರಿನೆರಳು ಪತಿ-ಪತ್ನಿಯ ಕೌಟುಂಬಿಕ ಸಂಬಂಧವನ್ನು ಪಾಲಕ - ಆಶ್ರಿತ ಎನ್ನುವ ತರತಮ ನೆಲೆಯಲ್ಲಿ ಗಟ್ಟಿಗೊಳಿಸಲು ಕಾರಣವಾಗಿವೆ. ಆದರೆ ವಚನಕಾರರು ಸತಿಪತಿ ಸಂಬಂಧವನ್ನು ಹೆಚ್ಚು ಉದಾತ್ತಗೊಳಿಸಿದ್ದಾರೆ.

ಜೇಡರ ದಾಸಿಮಯ್ಯ ವಚನ ಹೀಗಿದೆ:

'ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ

ಸತಿಪತಿಗಳೊಂದಾಗದ ಭಕ್ತಿ ಅಮೃತದೊಳಗೆ ವಿಷವ

ಬೆರೆಸಿದಂತೆ ಕಾಣಾ ರಾಮನಾಥ' ಎಂದಿದ್ದಾರೆ.

ಭಕ್ತಿ, ಜ್ಞಾನ, ವೈರಾಗ್ಯ ಇತ್ಯಾದಿ ಆತ್ಮಜ್ಞಾನದ ಸಮಸ್ತ ಮಾರ್ಗಗಳನ್ನು ಸ್ತ್ರೀಯರ ಪಾಲಿಗೆ ಮುಚ್ಚಿದ ಬಾಗಿಲುಗಳಾಗಿಸಿ ವಿವಾಹವನ್ನು ಮೋಕ್ಷದ ಏಕೈಕ ಮಾರ್ಗವಾಗಿಸಿದ ವ್ಯವಸ್ಥೆಯ ಸ್ತ್ರೀ ದಮನದ ನೀತಿಯನ್ನು ಶರಣರು ನಿರಾಕರಿಸಿದರು. ಆಧ್ಯಾತ್ಮ ಸಾಧಕಿಯಾಗಿ ಲೌಕಿಕದ ವಿವಾಹ ವ್ಯವಸ್ಥೆಯನ್ನು ಧಿಕ್ಕರಿಸಿದ ಅಕ್ಕಮಹಾದೇವಿ ಮೊದಲ ಶರಣೆಯಾಗಿ ಕಾಣುತ್ತಾಳೆ. ಹೆಣ್ಣಿಗೆ ವಿವಾಹವೇ ಮೋಕ್ಷದ ಆತ್ಯಂತಿಕ ಮಾರ್ಗವೆಂದು ನಂಬಿದ ಪರಂಪರೆಯಲ್ಲಿ ಮಹಿಳೆ ವಿರಾಗಿಯಾಗಿ ಯೋಗ ಸಾಧಕಗಳಾಗುವುದು ಅವಾಸ್ತವವಾಗಿದ್ದಿತ್ತು. ಆದರೆ ಅಕ್ಕಮಹಾದೇವಿ ಸತ್ಯಕ, ಗೊಗ್ಗವ್ವೆ, ಬೊಂತಾದೇವಿರು ಶ್ರೇಷ್ಠ ಶಿವಭಕ್ತೆಯರಾಗಿ ಮನ್ನಣೆಗೊಂಡುರು.

**ಅಕ್ಕಮಹಾದೇವಿ**

ಮಧುರ ಭಕ್ತಿಯ ಸಾಧಕಳಾದ ಮಹಾದೇವಿ ಅಕ್ಕ ಸ್ತ್ರೀ ವಿರೋಧಿ ವಾಸ್ತವದ ವೈರುಧ್ಯಗಳೊಂದಿಗೆ ಮುಖಾಮುಖಿಯಾಗುತ್ತಲೇ ಲೋಕೋತ್ತರವಾಗಿ ಬೆಳೆದ ಅಪ್ರತಿಮ ಸಾಧಕಿ. ಶ್ರೇಷ್ಠ ಅನುಭವಿಯಾಗಿ 'ಹೆಣ್ಣಿನ ಗೌರವ ಸಾಧನೆಯ, ಹೆಣ್ಣಿನ ಸ್ವಾತಂತ್ರ್ಯ ಸಾಧನೆಯ, ಹೆಣ್ಣಿನ ಪಾರಮಾರ್ಥ ಸಾಧನೆ'ಯ ಒಂದು ಮಹಾ ಪ್ರಕರಣವಾಗಿ ಇತಿಹಾಸವನ್ನು ನಿರ್ಮಿಸಿದ್ದಾಳೆ. ಅಕ್ಕನ ವಚನಗಳಲ್ಲಿ ಉತ್ಕಟವಾದ ಭಕ್ತಿ, ಪ್ರೇಮ, ವಿರಹ, ವೇದನೆ - ನಿವೇದನೆಯ ಭಾವ ವಿನ್ಯಾಸಗಳಿವೆ. ಇವು ಶ್ರೇಷ್ಠ ಭಾವಗೀತೆಗಳೇ ಆಗಿವೆ.



Scanned with OKEN Scanner

ಅಕ್ಕನ ಬಗ್ಗೆ ಹರಿಹರನಿಂದ ಚೆನ್ನಬಸವಾಂಕ ರಾಜಕವಿ. ತೆಲುಗಿನ ಪಾಲ್ಕುರಿಕ ಸೋಮನಾಥ, ಕವಿ ...ಲಾಪಾಂಪಾಂಬಾ ಇವರು ಅಕ್ಕನ ಕುರಿತು ಸ್ವತಂತ್ರ ಕಾವ್ಯಗಳನ್ನು, ಕೃತಿಗಳನ್ನು ರಚಿಸಿರುವುದೇ ಅಕ್ಕನ ಶ್ರೇಷ್ಠತೆಗೆ ...ಕ್ಷಿ. ಹೆಣ್ಣಿನ ಸ್ವಂತಿಕೆ ವೈಯಕ್ತಿಕತೆಯನ್ನು ಕಡೆಗಣಿಸುತ್ತ ಆಕೆಯ ಬದುಕು ಭಾವನೆಗಳನ್ನು ನಿಯಂತ್ರಿಸಿ ಸ್ತ್ರೀಯನ್ನು ...ಹವಾಗಿ, ಸಂತಾನೋತ್ಪತ್ತಿಯ ಸಾಧನವಾಗಿ ಭಾವಿಸಿದ ಅಂದಿನ ಸಾಮಾಜಿಕ ವಾಸ್ತವತೆಗೆ ಮಹಾದೇವಿಯಕ್ಕ ...ನ್ನು ತಿರುಗಿಸಿದವಳು.

ಆಕೆಗೆ ಬಂದೊದಗಿದ ಉದ್ದೇಶ ಪೂರ್ವಕ ಸ್ಥಿತಿಗಳು ಏನೆಂದರೆ ಕಿನ್ನರಿ ಬೊಮ್ಮಯ್ಯನ ಪ್ರಸಂಗ: (ಹರಿಹರನ ...ಗಳೆ) ಈತನು ಅಕ್ಕನ ವೈರಾಗ್ಯವನ್ನು ಪರೀಕ್ಷಿಸಲು ಬಂದವನು. ಶ್ರೀಶೈಲದ ಪ್ರಸಂಗವಿದು (ಶೂನ್ಯ ಸಂಪಾದನೆ) ...ಲ್ಯಾಣದ ದಾರಿಯಲ್ಲಿ ನಡೆಯಿತೆಂದೂ ಹೇಳಲಾಗಿದೆ. ಅಕ್ಕನ ಕಾಮಸಂಹಾರಿತ್ವದ ಸ್ಥಾಪನೆಯೂ ಈ ಪರೀಕ್ಷೆಯ ...ಉದ್ದೇಶವಾಗಿ ಕಂಡುಬಂದಿದೆ.

ಹೇಗೂ ಇರಲಿ ನೋಡುವ ಎಂದು ಬೊಮ್ಮಯ್ಯನು 'ಸಮಸುಖಕೂಟ'ಕ್ಕಾಗಿ ಆಹ್ವಾನಿಸುತ್ತಾನೆ ಆಗ ಅಕ್ಕನು ಚೆನ್ನಮಲ್ಲಿಕಾರ್ಜುನನಲ್ಲದೆ ಮಿಕ್ಕನ ಪುರುಷರೆನಗೆ ಸಹೋದರ ಛೀ ಹೋಗಾ ಮರುಳೆ' ಎಂದು ತನ್ನ ದೈವೀ ಸಂಪತ್ತಿದ ಒಲವನ್ನು ತೋರುತ್ತಾಳೆ (ಆತ ಅನುಚಿತವಾಗಿ ವರ್ತಿಸಿದ್ದಾನೆ ಎಂಬ ಉಲ್ಲೇಖ ಕಾಣಸಿಗುತ್ತದೆ).

ಅಂದಿನ ಸಮಾಜದ ಒಪ್ಪಿತ ಮೌಲ್ಯಗಳಿಗೆ ವ್ಯತಿರಿಕ್ತವಾಗಿ ತನ್ನ ಬದುಕಿನ ದಾರಿ ಆಯ್ದುಕೊಂಡ ಮಹಾದೇವಿಯಕ್ಕ ...ವ್ಯವಸ್ಥೆಯ ಅಸಹನೆ ಪ್ರತಿರೋಧಗಳನ್ನು ಅನುಭವಿಸಿದ್ದಾಳೆ. ಮತ್ತೆ ಮತ್ತೆ ಪರೀಕ್ಷೆಗೊಳಗಾಗಿದ್ದಾಳೆ. ಆದ್ದರಿಂದ ತನ್ನ ...ಯ್ಕೆ ಮತ್ತು ಅನುಭಾವದ ನೆಲೆಯನ್ನು ಮತ್ತೆ ಮತ್ತೆ ಸಮರ್ಥಿಸಿಕೊಳ್ಳಬೇಕಾದ ಬಿಕ್ಕಟ್ಟಿಗೆ ಒಳಗಾಗಿದ್ದಾಳೆ ಎಂಬುದಕ್ಕೆ ಸಾಕ್ಷಿಯಾಗಿರುವ ವಚನ ಇಂತಿದೆ.

ಬಂಜೆ ಬೇನೆಯನ್ನರಿವಳೆ ಬಲದಾಯಿ ಮುದ್ದಬಲ್ಲಳೆ
ನೊಂದ ನೋವ ನೋಯದವರೆತ್ತ ಬಲ್ಲವರೋ
ಚೆನ್ನಮಲ್ಲಿಕಾರ್ಜುನಯ್ಯನೆಂಬ ಕತ್ತಿಯ ಅಲಗು
ಒಡಲೊಳಗೆ ಇರಿದು ಹೊರಳವ ಎನ್ನಳಲನು
ನೀವೆತ್ತ ಬಲ್ಲಿರೆ ಎಲೆತಾಯಿಗಳಿರಾ?

ಎಂದು ವಿಷಾದಿಂದಲೇ ಪ್ರಶ್ನಿಸುತ್ತಾಳೆ ಹಾಗೂ ಆಧ್ಯಾತ್ಮದ ಅರಿವು - ಇರುವುಗಳೆರಡನ್ನು ತಾತ್ವಿಕವಾಗಿ ಸಮರ್ಥಿಸಿಕೊಳ್ಳುತ್ತಾಳೆ. ಸಾವಿಲ್ಲದ ಕೇಡಿಲ್ಲದ, ರೂಹಿಲ್ಲದ, ಭವವಿಲ್ಲದ, ಭಯವಿಲ್ಲದ, ನಿರ್ಭಯ ಚಲುವನಿಗೊಲಿದು ಬಯಲುದೇಹಿಯಾದ ಅಕ್ಕನ ಸೀಮೆಗೆಟ್ಟ ಸ್ಥಿತಿಯನ್ನು ನಿರಾಭಾರಿ ತತ್ವವನ್ನು ಅಲ್ಲಮನಂತವರೂ ಪರೀಕ್ಷಿಸಿಬಿಡುತ್ತಾರೆ. ಅಕ್ಕನ ಅನುಭಾವವನ್ನು ಕುರಿತ ಮತ್ತೊಂದು ವಚನ ಹೀಗಿದೆ.

ಆವವಿದ್ಯೆಯ ಕಲಿತಡೇನು?
ಸಾವವಿದ್ಯೆ ಬೆನ್ನಬಿಡದು
ಆಶನವ ತೊರೆದಡೇನು
ವ್ಯಸನವ ಮರೆದಡೇನು?
ಉಸುರ ಹಿಡಿದಡೇನು?
ಬಸುರ ಕಟ್ಟಿದಡೇನು?
ಚೆನ್ನಮಲ್ಲಿಕಾರ್ಜುನ ದೇವಯ್ಯಾ ನೆ
ನೆಲ ತಳವಾರನಾದಡೆ ಕಳ್ಳನೆಲ್ಲಿಗೆ ಹೋಹನು.



Scanned with OKEN Scanner

ಸಾವಿನಿಂದ ತಪ್ಪಿಸಿಕೊಳ್ಳಲು ಸಾವು ಖಚಿತ – ವಾಸ್ತವ– ನೆಲನೇ ತಳವಾರನಾಗಿ ಕಾಯುವಾಗ ಸಾವೆಂಬ ಕಳ್ಳ ಎಲ್ಲಿ ಹೋಗುವನು.

ಅಕ್ಕಮಹಾದೇವಿಯ ಅನುಭಾವದ ಬೆಳಕಿನಲ್ಲಿ ದೇಹ ಗುಣಗಳನ್ನು ಜೀವಭಾವವನ್ನು ಕಳೆದುಕೊಂಡು ಬಯಲ ಭಾವದ ಧ್ವನಿಯಾಗಿ ಮತ್ತು ಅಂತಿಮವಾಗಿ ನೆಲಾ ಹುಟ್ಟು ಸಾವಿನ ಚಕ್ರದಿಂದ ಬಿಡುಗಡೆಗೊಂಡ ಬಯಲ ಭಾವದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ವಿದ್ಯೆಗಳಲ್ಲಿ ಅರವತ್ನಾಲ್ಕು ವಿದ್ಯೆಗಳಿವೆಯೆಂದು ತಳವಾರನಾಗಿರುವಾಗ ಸಾವು(ಯಮನು) ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಅದು ಖಚಿತವಾದದ್ದು. ಬೇಕಾದರೆ ಚರ್ಮ ಹೇಳಲಾಗಿದೆ. ಈ ಯಾವ ವಿದ್ಯೆಯಿಂದಲೂ ಸಾವನ್ನ ಗೆಲ್ಲಲಾಗದು ಬೆಳಗ್ಗೆ ಹೇಗೆ ಬೇಕಾದರೂ ವಿನ್ಯಾಸಗೊಳಿಸಬಹುದು. ಸುಕ್ಕು ಗಟ್ಟದೇ ಇರಲು ಔಷಧಿ ಇರಬಹುದು. ಉದ್ದ, ದಪ್ಪ, ತೆಳಗೆ, ಬೆಳಗ್ಗೆ ಹೇಗೆ ಬೇಕಾದರೂ ವಿನ್ಯಾಸಗೊಳಿಸಬಹುದು. ಬದಲಿ ಅಂಗ ಜೋಡಸಬಹುದು ಆದರೆ ಸಾವು ಬರದಂತೆ ತಡೆಯಲು ಯಾವ ಅಮೃತಬಳ್ಳಿ ಕಷಾಯದಿಂದಲೂ ಆಗದು.

ಆಹಾರ ಬಿಟ್ಟು, ದುಃಖಿ, ಮರೆತು, ಯೋಗ, ಪ್ರಾಣಾಯಾಮ ಮಾಡಿ ಹೊಟ್ಟೆಕಟ್ಟಿ, ನೇಮ ವ್ರತಗಳನ್ನು ಮಾಡಿದರೆ ಸಾವನ್ನುಗೆಲ್ಲಲಾಗದು. ಆದರೆ ಹುಟ್ಟು ಸಾವಿನ ನಡುವೆ ಇರುವ ಅರಿಷಡ್ವರ್ಗಗಳನ್ನು ಮೀರುವ ಮೂಲಕ ನಿಜವಾದ ಅನುಭಾವಿಕ ಸಂತೋಷವನ್ನು ಕಾಣಲು ಸಾಧ್ಯ ಎಂಬುವ ನಂಬಿಕೆಯಲ್ಲಿ ಆಧ್ಯಾತ್ಮಿಕ ಉನ್ನತಿ, ಆತ್ಮ ತೃಪ್ತಿ ಇವೆ ನಿಜವಾದವು ಎಂದು ಸಮರ್ಥಿಸುವ ಭಾವವನ್ನು ಅಕ್ಕನ ವಚನದಲ್ಲಿ ನೋಡಬಹುದು.

ಹೀಗೆ ವಿಭಿನ್ನ ಪ್ರತಿಮೆಗಳ ಮೂಲಕ ಸಾಂಕೇತಿಕವಾದ ಪರಿಭಾಷೆಯಲ್ಲಿ ಅಮೂರ್ತ ಆಧ್ಯಾತ್ಮಿಕ ಅನುಭವ ಲೋಕವನ್ನು ಮೂರ್ತಗೊಳಿಸಲೆತ್ನಿಸುವ ವಚನಗಳು ಇಂದ್ರಿಯ ಭಾವಗಳ ನಿರಸನದಿಂದ ಭಕ್ತನ ಅಂತರಂಗದಲ್ಲಿಯ ಅರಿವಿನ ಎಚ್ಚರವನ್ನು ಬೆಡಗಿನ ಶೈಲಿಯಲ್ಲಿ ವಿವರಿಸುತ್ತಾಳೆ.

–ಡಾ. ಪ್ರೇಮ ಜಿ.ಕೆ.
ಉಪನ್ಯಾಸಕರು, ಕನ್ನಡ ವಿಭಾಗ





Scanned with OKEN Scanner

## ಆವತ್ತು-ಇವತ್ತು

ಒಂದೊಮ್ಮೆ ಆವತ್ತು
ಹೊತ್ತು ಮುಳುಗುವ ಹೊತ್ತು
ಮನದಿ ಮೂಡಿತ್ತು
ಬಯಲಾಟದ ಗಮ್ಮತ್ತು
ಹೋದರೆ ಜೋಕೆ ಎನ್ನುವ
ವಾಕ್ಯ ಅಮ್ಮನದು ಗುನುಗುಟ್ಟಿತ್ತು
ಆದರೂ...... ಕಾಡಿತ್ತು
ಬಯಲಾಟದ ಗಮ್ಮತ್ತು
ಮೆಲಕೆ ಮುತ್ತಿಟ್ಟಂತೆ ಹೆಜ್ಜೆ ಇತ್ತು
ಚಪ್ಪಲಿ ಸದ್ದು ಮಾಡಿಯೇ ಬಿಟ್ಟಿತ್ತು
ಅಮ್ಮನ ಕಣ್ಣು ಬಾಗಿಲ ಬಳಿ ಬಿತ್ತು
ಓಡಿದೆ ನಾ ಹಿಂತಿರುಗಿಸದೆ ಕತ್ತು
ಸಿಹಿ ಬಾಲ್ಯವು ಹೀಗಿತ್ತು
ಅದ ನೆನೆದೆ ನಾ ಇವತ್ತು.

-ವಿದ್ಯಾ ಹೆಚ್.ಎನ್
ಪ್ರಥಮ ಬಿ.ಎಸ್ಸಿ (ಸಿಬಿಬಿಸಿ)'ಜೆ'ಸೆಕ್ಷನ್

ಹೇಗೆ ತಾನೆ ಮರೆಯಲಿ
ಅದು ಹೇಗೆ ತಾನೆ ಮರೆಯಲಮ್ಮ
ನಿನ್ನ ಕಣ್ಣ ಮಿಂಚನು
ಅದುವೇ ತಾನೆ ಎನ್ನ ನಿನ್ನ
ಮೌನ ವೀಣಾ ರಾಗವು
ನವಮಾಸ ಕಷ್ಟ ನುಂಗಿ
ಬರುವಿಕೆಗೆ ಹೆಣೆದೆ ಅಂಗಿ
ಪುಟ್ಟಪಾದ ಕಣ್ಣಿಗೊತ್ತಿ
ಹಮ್ಮನುಸಿರ ಬಿಟ್ಟ
ಕೋಮಲಾಂಗಿಯೇ ನಿನ್ನ
ಹೇಗೆ ತಾನೆ ಮರೆಯಲಿ...
ನೂರು ಕನಸ ಮನದಿ ಭಿತ್ತಿ
ಅಭಲ ವಾಣಿಯ ಗಟ್ಟಿಗಿತ್ತಿ
ನಿನ್ನ ಆಸೆ ಬದಿಗೆ ಒತ್ತಿ
ಎನ್ನ ಹರಸಿ ನಕ್ಕ
ವಿಲಾಸಿನಿಯೇ ನಿನ್ನ
ಹೇಗೆ ತಾನೆ ಮರೆಯಲಿ..
ಅದು ಹೇಗೆ ತಾನೆ ಮರೆಯಲಮ್ಮ
ನಿನ್ನ ಕಡೆಯ ಕ್ಷಣವನು
ಅದುವೇ ತಾನೆ ಎನ್ನ ನಿನ್ನ
ಕೊರಳ ಶೋಕ ರಾಗವೂ...
ಹೇಗೆ ತಾನೇ ಮರೆಯಲಿ...

-ವಿದ್ಯಾ ಹೆಚ್.ಎನ್
ಪ್ರಥಮ ಬಿ.ಎಸ್ಸಿ (ಸಿಬಿಬಿಸಿ)'ಜೆ'ಸೆಕ್ಷನ್



## Stop Violence Against WOMEN

ನನ್ನೊಳಗೆ ನೀವೊಂದು ಜಗತ್ತು
ನಿಮ್ಮ ಖುಷಿ ನನ್ನ ಜಗತ್ತು
ಇಂದು ಖುಷಿಯೇ ಮೃಗವಾಗಿ
ಕಿಂದಿದೆ ನನೆಲ್ಲಾ ಕನಸನ್ನು...
ಕೇಳುವೆ ನಿಮ್ಮೆಲ್ಲರಿಗೂ
ದಯಮಾಡಿ ಗೌರವಿಸಿ ನನ್ನ ಮನಸ್ಸನ್ನು....
ಇಂತಿ ನಿಮ್ಮವಳು

-Meghana K T
II B Sc 'D' Section

ಅಂದು ಐಕ್ಯತೆಯ ಮಂತ್ರ
ಇಂದು ವಿಭಜನೆಯ ಕುತಂತ್ರ
ಅಂದು ಪಾನ ನಿಷೇಧ
ಇಂದು ಪಾನವೇ ಪ್ರಸಾದ
ಇದುವೇ ನಮ್ಮ ಸ್ವತಂತ್ರ ಭಾರತ...........

-ಸೌಮ್ಯ ಎಂ
ದ್ವಿತೀಯ ಬಿ.ಎಸ್ಸಿ (ಬಯೋಲಜಿ)

## ಕುವೆಂಪು....

ಆ ನಿನ್ನ ವಾಣಿ...
ಕವಿಯ ವಾಣಿ ಆಕಾಶ ವಾಣಿ
ಮಾನವ ವಾಣಿ ಜಗದ ವಾಣಿ
ಕುವೆಂಪು ಉಲಿ ಬಾನುಲಿ
ಇಂಪಿಂಪುಕಲಿ ಜನರಲಿ

ಆ ನಿನ್ನ ಕವನ...
ಕೊಳಲಿನ ಮೂಲಕ ಕೇಳಿಸಿತು
ಹಂಸದ ಮೂಲಕ ಹಾರಿಸಿತು
ಕೋಗಿಲೆಯ ಮೂಲಕ ಹಾಡಿಸಿತು
ನವಿಲಿನ ಮೂಲಕ ನರ್ತಿಸಿತು
ಸಹೃದಯನ ಮೂಲಕ ವ್ಯಾಪಿಸಿತು

ಆ ನಿನ್ನ ಕೀರ್ತಿ...
ಶ್ರೀ ರಾಮಾಯಣ ದರ್ಶನಂ ಭವ್ಯತೆಯಲಿ
ಜ್ಞಾನಪೀಠ ಪ್ರಶಸ್ತಿ ವಿಜೇತನಾದೆ
ಶ್ರೀ ವಿಶ್ವಮಾನವತೆಯ ದಿವ್ಯತೆಯಲಿ
ಮಹಾನ್ ಮಾನವ ಮತದ ಚೇತನನಾದೆ

ಆ ನಿನ್ನ ಅದೃಷ್ಟ...
ನೀ ಮುಟ್ಟಿದ್ದೆ ಚಿನ್ನವಾಯ್ತು
ನೀ ಮಾಡಿದ್ದೆ ಮಡಿಯಾಯ್ತು
ನೀ ನಡೆದಿದ್ದೆ ಯಾತ್ರೆಯಾಯ್ತು
ನೀ ನುಡಿದಿದ್ದ ಕಾವ್ಯವಾಯ್ತು
ನೀ ಜನಿಸಿದ್ದೆ ಕನ್ನಡ ಶ್ರೀಮಂತವಾಯ್ತು

ಈ ನಮ್ಮ ಕನ್ನಡಕ್ಕೆ...
ಕನ್ನಡ ಡಿಂಡಿಮವ ಬಾರಿಸಿದ
ಕನ್ನಡ ಕಂಠೀರವನಾದೆ
ಕನ್ನಡ ಭೂ ದೇವಿಯಲಿ ಜನಿಸಿದ
ಕನ್ನಡ ಕವಿರತ್ನನಾದೆ
ಸಾಹಿತ್ಯ ರಂಗದಲಿ ಆಳಿಸದ
ರಾಷ್ಟ್ರಕವಿಯಾದೆ
ಮಾನವ ಹೃದಯದಲಿ ನೆಲೆಸಿದ
ಕರ್ನಾಟಕ ರತ್ನನಾದೆ

ಓ ಕುವೆಂಪು; ಆಗು ನೀ ಭಾರತ ರತ್ನ!

## ನೊಂದ ಜೀವ....

ನನ್ನ ಬಾಳ ಪುಟಗಳ ಅಂಚಿನಲಿ
ತೇಲಿಹೋದ ದಿನಗಳು
ಉರುಳಿದವು ದುಃಖದಿಂದಲಿ
ಇನ್ನೆಲ್ಲಿಯ ನೆಮ್ಮದಿ; ಇನ್ನೆಲ್ಲಿಯ ಶಾಂತಿ

ಹುಟ್ಟಿನಿಂದಲೇ ಕಷ್ಟಪಡುತ್ತಾ ಬಂದ
ಈ ನಮ್ಮ ಜೀವನ ಏಳು-ಬೀಳಿನ ಗಾಯ್ನ
ನ್ಯಾಯಕ್ಕೆ ತಕ್ಕ ಪ್ರತಿಫಲವಿಲ್ಲ
ಓದಿಗೆ ತಕ್ಕ ಕೆಲಸವಿಲ್ಲ

ಒಬ್ಬರನ್ನೊಬ್ಬರು ನುಂಗಿ ನೀರು ಕುಡಿಯುವ
ರಾಜಕಾರಣಿಗಳ ದೌರ್ಜನ್ಯದಲಿ
ಇನ್ನೆಲ್ಲಿ ಕೇಳಿ ಬರಬೇಕು
ಯುವ ತರುಣರ ಘೋಷಣೆಗಳು

ಪುಟಪುಟಗಳನ್ನು ತೆರೆದು ನೋಡಿದಾಗ
ಎಲ್ಲವೂ ಶೂನ್ಯ; ಎಲ್ಲವೂ ನಶ್ವರ
ಲಕ್ಷಾಂತರ ವಿದ್ಯಾರ್ಥಿಗಳು ಕೆಲಸವಿಲ್ಲದೆ
ಬೀದಿಪಾಲಾಗಿದ್ದಾರೆ
ಆದರೂ ಗಲಭೆ ತಪ್ಪಿಲ್ಲ; ಶೋಷಣೆ ಬಿಟ್ಟಿಲ್ಲ

ದುಡ್ಡೇ ದೊಡ್ಡಪ್ಪ ಎನ್ನುವ ಈ ಕಲಿಯುದಲ್ಲಿ
ಇನ್ನೆಲ್ಲಿ ಬರಬೇಕು ಆ ತೇತ್ರಾಯುಗ
ಒಬ್ಬರನ್ನೊಬ್ಬರು ನಂಬದ ಈ ಸಮಾಜದಲ್ಲಿ
ಇನ್ನೆಲ್ಲಿ ಬರಬೇಕು ಮತ್ತೆ ಗಾಂಧಿಯುಗ

ಎಲ್ಲಿದೆ ನ್ಯಾಯ ಎಲ್ಲಿದೆ ಧರ್ಮ
ಎಲ್ಲಿದೆ ನೀತಿ ಎಲ್ಲಿದೆ ಪ್ರೀತಿ
ಇದು ಎಂಥ ಮರ್ಮದ ಪ್ರಶ್ನೆ?
ಸಿಡಿದೇಳಿ ಬೀಳುವ ಯುವಕರ
ದುರಂತವೇ ಇದಕ್ಕೆ ಉತ್ತರ

ನೊಂದಿತು ಮನ; ಮಿಡಿಯಿತು ಹೃದಯ
ನೊಂದ ಜೀವ ಎಂಬುದು ಆರಿ ಹೋದ ಹಣತೆ

-ಕೆ.ಸಿ. ಶಿವಣ್ಣ
ಕನ್ನಡ ಪ್ರಾಧ್ಯಾಪಕರು

Scanned with OKEN Scanner

# JOKES [ಹಾಸ್ಯ ಸಂಗ್ರಹಗಳು]

ಇತಿಹಾಸ ಮೇಸ್ಟ್ರು:
ಬಾಬರ ಭಾರತದ ಮೇಲೆ ಯಾವಾಗ ದಾಳಿ ಮಾಡಿದ?
ಸಂತಾ: ಗೊತ್ತಿಲ್ಲ ಸಾರ್.
ಮೇಸ್ಟ್ರು: ಮೂರ್ಖನಿದ್ದೀಯ.. ಬೋರ್ಡ್‌ನಲ್ಲಿ ಬರೆದ್ರೂ ಓದಕ್ಕಾಗಲ್ವ?
ಸಂತಾ: ಅದು ಅವನ ಫೋನ್ ನಂಬರ್ ಅಂದ್ಕೊಂಡಿದ್ದೆ ಸಾರ್..!

ಸಂತಾ ದೇವಸ್ಥಾನಕ್ಕೆ ಮೊತ್ತ ಮೊದಲ ಬಾರಿ ಹೋಗಿದ್ದ, ಎಲ್ಲರೂ ಹುಂಡಿಗೆ ಕಾಣಿಕೆ ಹಾಕಿ ಪ್ರಾರ್ಥನೆ ಮಾಡೋದನ್ನ ನೋಡಿದ ಆತನಿಗೆ ಆಶ್ಚರ್ಯ. ರಿಸೀವರ್ ಇಲ್ದೇನೆ ಫೋನಲ್ಲಿ ಮಾತಾಡ್ತಿದ್ದಾರಲ್ಲ.. ಭಾರತ ತುಂಬಾ ಮುಂದುವರಿದಿದೆ ಅಂತ..!

ಆಫೀಸರ್– ರಜೆ ಕೊಡೋಕೆ ಸಾಧ್ಯವಿಲ್ಲರಿ.
ಕ್ಲರ್ಕ್– ಸಾರ್, ನನ್ನ ಮದುವೆ ಸಾರ್, ರಜ ಕೊಡದೆ ಇದ್ದರೆ ಹೇಗೆ ಸಾರ್?
ಆಫೀಸರ್– ಮದುವೇನಾ? ನಿನ್ನನ್ನು ಮದುವೆ ಆಗೋಕೆ ಮುಂದೆ ಬಂದಿರೊ ಮೂರ್ಖಳು ಯಾರಯ್ಯ?
ಕ್ಲರ್ಕ್– ನಿಮ್ಮ ಮಗಳೆ ಸಾರ್.

ವಿಚಾರಣಾ ಕಿಟಕಿಯ ಬಳಿ ನಿಂತ ಸುಂದರ ತರುಣಿಯ ಬಳಿ ಹೋಗಿ ಸುಂದರ ತರುಣನೊಬ್ಬ ನಿಂತುಕೊಂಡ. ತರುಣಿ ಮಂದಹಾಸದಿಂದ ನಿನಗೇನು ಬೇಕು? ಎಂದು ಕೇಳಿದಳು.
ನಿನ್ನ ಮನೆಯ ವಿಳಾಸ ಎಂದ ಯುವಕ.

**ಕಿಟ್ಟು:** ನಿನಗೆಷ್ಟು ಮಂದಿ ಒಡ ಹುಟ್ಟಿದವರು?
**ಪುಟ್ಟು:** ನಾವು ಸಹೋದರ ಸಹೋದರಿಯರೆಲ್ಲಾ ಸೇರಿ ಇಪ್ಪತ್ತೈದು ಮಂದಿ ಇದ್ದೇವೆ.
**ಕಿಟ್ಟು:** ಹೌದು .... ನಿಮ್ಮ ಮನೆಗೆ ಕುಟುಂಬ ಯೋಜನೆಯವರು ಬರಲಿಲ್ಲವಾ?
**ಪುಟ್ಟು:** ಇಲ್ಲ ಅವರು ಬಂದಿದ್ದರು.... ಆದರೆ ನಮ್ಮ ಮನೆಯನ್ನು ಅಂಗನವಾಡಿ ಎಂದು ತಿಳಿದು ವಾಪಾಸ್ ಹೋದರು...!

**ಗುಂಡ:** ಅಮ್ಮ ನಾನು UKG ಆದ್‌ಮೇಲೆ ಸ್ಕೂಲ್‌ಗೆ ಹೋಗಲ್ಲಾ.
**ಅಮ್ಮ:** ಯಾಕೋ
**ಗುಂಡ:** ನಾನ್ JOB ಮಾಡ್ತಿನಿ
**ಅಮ್ಮ** : ಬರಿ UKG ಗೆ ಏನ್ JOB ಮಾಡ್ತಿಯಾ.
**ಗುಂಡ:** LKG ಹುಡುಗಿಯರಿಗೆ ಟ್ಯೂಷನ್ ಮಾಡ್ತಿನಿ

**ಎಸ್.ಎಸ್.ಎಲ್.ಸಿ. ಹುಡುಗ :** ಸರ್ ಫೇಲ್ ಮಾಡಿ ನನ್ನ ನಿಮಗೆ ಕೈ ಮುಗಿತಿನಿ.
**ಸರ್:** ಯಾಕೇ? ಎಲ್ಲರೂ ಪಾಸ್ ಮಾಡಿ ಅಂತ ಕೇಳ್ತಾರೆ. ಆದರೆ ನೀನು ಫೇಲ್ ಮಾಡಿ ಅಂತಿದ್ದೀಯ
**ಎಸ್.ಎಸ್.ಎಲ್.ಸಿ. ಹುಡುಗ:** ನಮ್ಮಪ್ಪ ಪಾಸ್ ಆದ್ರೆ ಕಾಲೇಜಿಗೆ ಕಳಿಸ್ತೀನಿ, ಫೇಲ್ ಆದ್ರೆ ಮದುವೆ ಮಾಡಿಸ್ತೀನಿ ಅಂದ್ರು ಅದಕ್ಕೆ ಸರ್...

**ಅಪ್ಪ :** ಪಿ ಯು ಸಿ ಆದ ಮೇಲೆ ಏನ್ ಮಾಡಬೇಕು ಅಂತಿದ್ದೀಯ?
**ಮಗಳು:** ಬಿ.ಕಾಂ ಮಾಡ್ಬೇಕು ಅಂತಾ.
**ಅಪ್ಪ:** ಒಳ್ಳೇದು ಈ ಬಿ.ಕಾಂ ಅಂದ್ರೆ ಏನು?
**ಮಗಳು:** Boy's ನ Compleate Mental ನ ಮಾಡೋದು.

**ಹುಡುಗಿ:** ಪ್ರೀತಿ ಏಕೆ ಭೂಮಿ ಮೇಲಿದೆ?
**ಹುಡುಗ:** ಮಹಡಿ ಮೇಲೆ ಜಾಗ ಇಲ್ಲದೆ.
**ಹುಡುಗಿ:** ನನ್ನೇ ಏಕೆ ಪ್ರೀತಿ ಮಾಡಿದೇ?
**ಹುಡುಗ:** ನಿನ್ನ ಅಕ್ಕನಿಗೆ ಮದುವೆ ಆಗಿದೆ.

**–ಮೇಘನಾ ಕೆ.ಟಿ.**
ದ್ವಿತೀಯ ಬಿ.ಎಸ್ಸಿ., ಡಿ. ವಿಭಾಗ



Scanned with OKEN Scanner

## ಚಾಣಾಕ್ಯನ ನೀತಿಗಳು –

* ದುರ್ಬಲ ಮನಸ್ಸಿನ ಮನುಷ್ಯ ವಿಷಯಗಳನ್ನು ದೊಡ್ಡದು ಮಾಡುತ್ತಾನೆ. ಆದರೆ ಅವನಿಂದ ದೊಡ್ಡದನ್ನು ಪಡೆಯಲಾಗುವುದಿಲ್ಲ.
* ಮನುಷ್ಯ ಯಾರನ್ನು ಹೆಚ್ಚು ಪ್ರೀತಿ ಮಾಡುತ್ತಾನೋ, ಅವರಿಂದ ತುಂಬ ಸುಲಭದಲ್ಲಿ ಮೋಸಗೊಳ್ಳುತ್ತಾನೆ.
* ಸ್ವೇಚ್ಛೆಯಾಗಿ ಬೆಳೆಯುತ್ತಿರುವ ಶತ್ರುವನ್ನು ಯಾವನು ಉದಾಸೀನ ಮಾಡುವನೋ, ಯಾವನು ಸೋಮಾರಿತನದಿಂದ ಕೂಡಿ ರೋಗವನ್ನು ಉದಾಸೀನ ಮಾಡುವನೋ, ಅವನು ಅದರಿಂದಲೇ ಕ್ರಮ ಕ್ರಮವಾಗಿ ಕೊಲ್ಲಲ್ಪಡುತ್ತಾನೆ.
* ಎಲ್ಲರನ್ನು ನಂಬುವುದು ಅಪಾಯ, ಹಾಗೆ ಯಾರನ್ನು ನಂಬದೇ ಇರುವುದು ಇನ್ನು ದೊಡ್ಡ ಅಪಾಯ.
* ಬುದ್ಧಿವಂತನಿಗೆ ಜೀವನದ ಭಯವಿಲ್ಲ.
* ಸ್ನೇಹಿತರನ್ನು ಹತ್ತಿರ ಇಟ್ಟುಕೊಳ್ಳಿ; ಆದರೆ ನಿಮ್ಮ ಶತ್ರುಗಳನ್ನು ಇನ್ನು ಹತ್ತಿರದಿಂದ ಗಮನಿಸಿ.
* ಏನೇ ಕೆಲಸ ಮಾಡಿದರೂ ಕೊನೆಗೆ ಅದರಲ್ಲಿ ಸಮಾಧಾನ ಇಲ್ಲದಿದ್ದರೆ ಜೀವನವೇ ನರಕವಾಗಿಬಿಡುತ್ತದೆ. ಆದುದರಿಂದ ನಮ್ಮ ಪಾಲಿಗೆ ಬಂದಿದ್ದರಲ್ಲಿ ಮೊದಲಿಗೆ ಸಂತುಷ್ಟರಾಗಲು ನಾವು ಕಲಿಯಬೇಕು.
* ನೀವು ಮಾಡುವ ಪ್ರತಿಯೊಂದು ಕೆಲಸಗಳಿಗೆ ಅಥವಾ ಕೇಳುವ ಮಾತುಗಳಿಗೆ, ನೋಡುವ ನೋಟಗಳಿಗೆ ತನ್ನದೇ ಆದ ದೃಷ್ಟಿಕೋನ ಇರುತ್ತದೆ. ಎದುರಾಳಿಯ ದೃಷ್ಟಿಕೋನದಿಂದ ಮತ್ತು ಹೊರ ಜಗತ್ತಿನ ದೃಷ್ಟಿಕೋನದಿಂದ ನಾವು ಕೆಲವು ವಿಚಾರಗಳನ್ನು ಆಲೋಚಿಸಬೇಕು. ತುಂಬ ನಿಯತ್ತಾಗಿದ್ರೆ ಒಳ್ಳೇದಲ್ಲ, ನಿಯತ್ತಾಗಿರೋ ಮನುಷರನ್ನ ಆಟ ಆಡಿಸುತ್ತೆ ಪ್ರಪಂಚ.

## ವಚನಗಳು

### ಅಂಬಿಗರ ಚೌಡಯ್ಯ

ಉಂಡರೆ ಭೂತನೆಂಬರು
ಉಣದಿದ್ದರೆ ಜಾತಕನೆಂಬರು
ಭೋಗಿಸಿದರೆ ಕಾಮಿಯೆಂಬರು
ಭೋಗಿಸದಿದ್ದರೆ ಮುನ್ನ ಮಾಡಿದ ಕರ್ಮ ಎಂಬರು
ಊರೊಳಗಿದ್ದರೆ ಸಂಸಾರಿ ಎಂಬರು
ಅಡವಿಯೊಳಗಿದ್ದರೆ ಮೃಗಜಾತಿ ಎಂಬರು
ನಿದ್ರೆಗೈದರೆ ಜಡದೇಹಿ ಎಂಬರು
ಎದ್ದಿದ್ದರೆ ಚಕೋರನೆಂಬರು
ಇಂತೀ ಜನಮೆಚ್ಚಿ ನಡೆದವರ
ಎಡದ ಪಾದ ಕಿರಿ ಕಿರುಗುಣಿಯಲ್ಲಿ
ಮನೆ ಮಾಡು ಮನೆ ಮಾಡು
ಎಂದಾತ ನಮ್ಮ ಅಂಬಿಗರ ಚೌಡಯ್ಯ

### ಪುಣ್ಯಸ್ತ್ರೀ ಮಸಣಮ್ಮ

ಕಾಗೆಯ ಬಾಯ ತಿಂದವರಿಲ್ಲ
ವ್ರತಭ್ರಷ್ಟರ ಕೂಡಿದವರಿಲ್ಲ
ನಾಯಿಗೆ ನಾರುಂಗನವ ಇಕ್ಕುವುದೇ?
ಲೋಕದ ನರಂಗೆ ವ್ರತವ ಇಕ್ಕುವುದೇ?
ಶಿವ ಬೀಜಕ್ಕಲ್ಲದೆ ನೀವೇ ಸಾಕ್ಷಿ
ನಿಜಗುಣೇಶ್ವರಲಿಂಗದಲ್ಲಿ

### ಅಲ್ಲಮ ಪ್ರಭುಗಳ ವಚನ

ಹೊನ್ನು ಮಾಯೆ ಎಂಬರು
ಹೆಣ್ಣು ಮಾಯೆ ಎಂಬರು
ಮಣ್ಣು ಮಾಯೆ ಎಂಬರು
ಹೊನ್ನು ಮಾಯೆಯಲ್ಲ, ಹೆಣ್ಣು ಮಾಯೆಯಲ್ಲ,
ಮಣ್ಣು ಮಾಯೆಯಲ್ಲ, ಮನದ ಮುಂದಣ ಆಶೆಯೇ
ಮಾಯೆ ಕಾಣ ಗುಹೇಶ್ವರ ॥

### ಅಜಗಣ್ಣ ತಂದೆ

ಆದ್ಯರ ಅರವತ್ತು ವಚನಕ್ಕೆ, ದಣ್ಣಾಯಕರ ಇಪ್ಪತ್ತು ವಚನ
ದಣ್ಣಾಯಕರ ಇಪ್ಪತ್ತು ವಚನಕ್ಕೆ, ಪ್ರಭುದೇವರ ಹತ್ತು ವಚನ
ಪ್ರಭುದೇವರ ಹತ್ತು ವಚನಕ್ಕೆ, ಅಜಗಣ್ಣನ ಐದು ವಚನ
ಅಜಗಣ್ಣನ ಐದು ವಚನಕ್ಕೆ,
ಕೂಡಲ ಚೆನ್ನಸಂಗಯ್ಯನಲ್ಲಿ
ಅಜಗಣ್ಣ ತಂದೆ
ಮಹಾದೇವಿಯಕ್ಕಗಳ ಒಂದು ವಚನ
ನಿರ್ವಚನ ಕಾಣಾ ಸಿದ್ಧರಾಮಯ್ಯಾ



Scanned with OKEN Scanner

# 'कटाआउट' व्यंग्य में समकालीन किसान विमर्श

भारत संरचनात्मक दृष्टि से गांवोम का देश हैं और सभी ग्रामूण समुदायों में अधिक मात्रा में कृषि कार्य किया जाता है इस लिए भारत को कृषि प्रधान देश की संज्ञा से अभिहीत किया गया है । लगभग ७० भारतीय लोग किसान हैं । किसान भारत देश के रिड की हड्डी के समान हैं । खाद्य फसलों और तिलहन का उत्पादन करते हैं वे वानिज्यिक फसलों का उत्पादन भी करते हैं । आम जनता के उदय के लिए कच्चे माल भी तैयार करते हैं । यही कारण है कइ वे इस देश के जीव रक्त है । परंतु आज उनकी स्थिती बहुत ही शोचनिय बन पडी है । जैसे पहले किसान भुखे मरते थे आज भी वैसे ही मर रहे है, आज भी आत्महत्या का सिल्सिला शुरु है । इन्ही विष्यओं पर व्यंग्य करती है कटऔट व्यंग्य संग्रह । एक ज़माना था,जब भारत का नाम पिछडे हुये देशों के साथ लिया जाता था । भारत को सपेरों का देश कह कर खिल्लि उडाया जाता था । लेकिन आज भारत देश का नाम विकसित डेशों के साथ लिया जाता हैं । भारत देश हर क्षेत्र में विकास कर रहा है कला, विज्ञान, तंत्रज्ञान, खेल, आदि । अब समय बदल चुका है, परिवेश बदल गये है, देश बदल चुका है । परंतु, विडंबना की बात यह है, कि आज भी किसान और श्रमिक वैसे के वैसे ही है । वैसे ही मर रहे है, जैसे इतिहास के पन्नों पे मरे थे । आज भी वैसे ही शोषण हो रहे है, जैसे प्रेमचंद साहित्य मे पढा था ।

जैसे कि हम मानते हैं कि ' साहित्य समाज का दर्पण हैं' सामज में घटनेवाली, घटनाओ को हमारे सामने लाता है तो, व्यंग्य साहित्य विसंगतियों को दर्शाता ही नही अपितु हमे जगाता है उस ओर सोचने पर अग्रसर करता है । शंकर पुणतांबेकर एक ऐसे व्यंग्यकार है जिन्हे कहिं भी विसम्मातियाँ दिखाई पडि की अपना कलम से आखरवार कर देते हैं । शंकर पुणतांबेक जी की " कटआउट " एक ऐसी व्यंग्य संग्रह है जिस में किसान और श्रमिकों पर होने वाले शोषण, आत्याचारों पर करारा व्यंग्य कसा है ।

भारत के ज्यादातर छोटे किसान कर्ज लेकर खेती करते हैं । कर्ज वापस करने के लिए यह जरुरी है कि फसल अच्छि हो । ज्यादतर किसान खेती के लिए वर्षा पर निर्भर रहते हैं । अगर मान्सून ठीक न हो तो वह उस कर्ज के खातिर किसान रोज किस्तो वालों मौत मरता हैं । ' पगडंडी ' इसी ओर संकेत करता है, पगडंडी श्रमिक किसानों का प्रतिक है तो, सडक पुंजीपतियों का प्रतिक हैं । पगडंडी पे बुध्द, राम जैसे

महान व्यक्तियो के पैर लगे हुए है जो समानता, स्वतंत्रता और भ्रातृत्वभाव का स्वरूप है। आज के हमारे नेता पगडंडी पर चलने से डरते है क्युं कि कहिं उनमे राम या बुध्द न जागे । वे तो पुंजिपतियों के आराधक है । " पगडंडी वह मार–रेखा है जो श्रमिक रोती है । यह वह कर्ज़–रेखा है जो किसान बोती है ।"

" कटआउट " के ' कौआ और कंकड ' मे लेखक पुणतांबेकर जी ने देश के विकास के लिए सांसद मे नेताओं द्वारा अनुष्ठान मे लाये जाने वाले योजनाओं पर व्यंग्य किया है । प्यासा कौआ पानी ढूडते हुए एक झोपडी के पास जाता है । पानी पिने के लिए जब वह मटके में झाँकता है तो, मटका खाली पाता है , तो कौआ कहता है " आपने योजना तो भेज दी, लेकिन वह खाली मटके–जैसी हैं –खाली मटके जैसी मधुर बजती है बस, देती–वेती कुछ नही । हाँ, ताल ज़रूर देती है सरकार के नाच पर ।" आज की योजनाओं का यही हाल है , श्रमिक–किसानों के उध्दार के लिए सरकारें करोडों की नये नये योजनाएँ लाती है । उनका खुब प्रचार किया जाता है । दूरदर्शन पर विज्ञापनों का सिल सिला लगातार चालू रहता है । जब वे योजनाएँ गरीब,किसान मजदूर दलित के हतों आते आते उस खाली मटके की तरह हो जाती है जो सिर्फ ताल देती हो।

श्रमिकों की शोचनीय स्थिति की ओर सन्केत करती ' पादचारी ' व्यंग्य रचना । इसमे एक छोटा बच्चा अपने पिता के साथ जा रहा होता है । उस अभोद बालक कौतूहल पुर्ण सवाल पूछता जाता है उसके जवाब मे श्रमिकों की दर्द सुनाई पडती जाती है । सडक, महल, वाहन बनानेवले मजदूर को पुछता है की इस के बदले मे तुम्हे क्या मीला तो वह मजदूर केहता है, " रोटी क एक टूकड और निष्ठाभाव चरित्र । " मजदूर पुंजिपतियों के लिए हर वह साधन बनाकर देता है। पर वह उन सखमय साधनों का उपयोग नही कर सकता । वह वाहन जरूर बनाता है पर उसमें सफर कर नही सकता, महल बनाता हूँ परंतू उसमे रह नही सकता । जो भी वह करता है वह निष्ठा से करता है । अपने पेट के खातीर करता है ।

' कटआउट " मे नेताओं के प्रति मजदूरों के आक्रोश भव को दर्शाया है चुनावि समय मे नेताका कटआउट अपने सर पर ढो लेता है जैसे पुरे देश का भार उठा लिया हो । आज की इस किसान की स्थिति शोचनिय है। 'कटाआउट' व्यंग्य इन्ही विषयों की ओर संकेत करती हैं । भ्रष्टव्यवस्था को पुर्ण विराम देके किसानों की स्थिति सुधरे सही सम्मन, स्थान, उनके पसिने को सही मुल्या मिले यही आशा और विचार इस व्यंग्य संग्रह में लेखक ने दर्शाया हैं ।

प्रमोद शिंगे
हिन्दी अध्यापक

# यास्कस्य कैमर्थिकी निरुक्तप्रवृत्तिः

शास्त्रे प्रयोजनमनुद्दिश्य न मन्दोऽपि प्रवर्तते इत्येको न्यायः वर्तते। तथैवात्र सर्वस्यैव हि शास्त्रस्य कर्मणो वापि कस्यचित्। यावत्प्रयोजनं नोक्तं तावत्तत् केन गृह्यते ॥ इति।

अर्थात् यस्मिन् शास्त्रे न प्रयोजनमुच्यते तच्छास्त्रं न केनापि प्रयोज्यमिति गृह्यते। अतः यत्र कुत्रापि शास्त्रस्य प्रयोजनं वक्तव्यमेव। नात्र निरुक्ते साङ्ख्यकर्तेव सृष्टिविषयकनिर्णयायैव स्वार्थो परार्थो वेति वादः नोच्यते। न वा अन्धपङ्गुरिव परार्थ एव सिद्धान्त इति।

अथापि भगवान् पतञ्जलिराह नेह कश्चित् परोऽनुगृहीतव्य इति प्रवर्तते। सर्व इमे स्वभूत्यर्थं प्रवर्तन्ते। ये तावत् एते गुरुशुश्रूषवो नाम तेऽपि स्वभूत्यर्थं प्रवर्तन्ते। यथा - पारलौकिकञ्च नो भविष्यति इह नः प्रीतो गुरुरध्यापयिष्यतीति: तथा य एते दासाः कर्मकरा नाम एतेऽपि स्वभूत्यर्थं प्रवर्तन्ते भृतं चैलञ्च लप्स्यामहे परिभाषकञ्च (दण्डादिकाः) न नो भविष्यतीति। तथा य एते शिल्पिनो नाम एते च स्वभूत्यर्थं प्रवर्तन्ते। वेतनञ्च लप्स्यामहे मित्राणि च नो भविष्यन्तीति. इति (पा० यो० ३,२.२)

एवमेव -

निमित्तेभ्यः प्रवर्तन्ते सर्व एव स्वभूतये।
अभिप्रायानुरोधोऽपि स्वार्थस्यैव प्रसिद्धये ॥ इति।

अस्य उपर्युक्तप्रश्नस्य अयमेव निष्कर्षः। यथा ऋक्तन्त्र व्याकरणस्य ऋग्वेद एव विषयः। तथैवास्यापि कश्चिद्वेदनिर्दिष्टविषयो वा पाणिनीयव्याकरणमिव वेदगतानां लौकिकानाञ्च सर्वसाधुशब्दानामविशेषेण प्रवृत्तम् वा इति। अत्र प्रश्नस्योत्तरमुच्यते।

नेदं शास्त्रं सामतन्त्रादिवदेकविषयकं किन्तु सर्ववेदोक्तानां निगमानामत्र दर्शनात्। न चेद पाणिनिव्याकरणमिव लोकवेदयोरुभयोरविशेषेण शासनम् किन्त्विह केवललौकिकानां केवलब्राह्मणगतानाञ्च शब्दानां निर्वचनानामनालोचनात्। तत इदं शास्त्रं उपर्युक्तयोरपिद्वयोः किन्तुसर्ववेदमन्त्रव्याख्यानगमनैव्याख्यः। अतः यास्कः तृतीयश्रेणीकः। मन्त्रेष्वर्थप्रत्ययो तस्य निरुक्ते (२.५.२) स्वयमेवाह अथपीदमन्तरेण मन्त्रेष्वर्थप्रत्ययो न विद्यतेऽर्थमप्रतीयतो नात्यन्तं स्वरसंस्कारोद्देशः तदिदं विद्यास्थानं व्याकरणस्य कार्त्स्न्यं स्वार्थसाधकञ्च इति।

विशेषसमालोचनयापरञ्च लक्ष्यते - यथा ब्राह्मणग्रन्थ मन्त्राणामर्थावगमनाय बोधनाय वा प्रवृत्ता: तथैवेदं निरुक्तमपि प्रवृत्तमिति स्पष्टं ज्ञायते। प्रथम तावत (निरुक्तात्पूर्वं) केवलब्राह्मणग्र निर्वचनानि समाम्नातानि। तेषाञ्च निर्वचनादिकम् अनुब्राह्मणेषु तत तत: निदानसूत्रादिषु ग्रन्थेषु सरलरूपेण निरूपितम्। तत एव यास्केनेदं निरुक्तमिति ग्रन्थरूपेणाबद्धमिति वैदिकसाहित्यकाल - निर्णयकमतानुसारेण सुस्पष्टम् -।

अस्य ग्रन्थस्य विशेषाध्ययनेन ज्ञायते यन्नेदं शास्त्रं ब्राह्मणग्रन्थीयानां पदानां व्याख्यबोधनाय प्रवृत्तम्। परन्तु ब्राह्मणग्रन्थेषु निर्वचनाय यदर्था प्रक्रिया दृश्यते तामेवार्थप्रक्रियामनुसृत्य वेदोक्तमन्त्रस्थशब्दानां व्याख्यान प्रकाराख्याने यास्कस्य प्रवृत्तिरिति स्पष्टम्। अत एव यास्क: तस्य ग्रन्थोपक्रमे "छान्दोम्य: समाहृत्य" इत्युक्तवान् (अत्र छन्दस्त्वमिति मन्त्राणामेव बोधक: शब्द:) उक्तस्यावृत्तिरेवापि "प्रयोजनमनुद्दिश्य न मन्दोऽपि प्रवर्तते" इति सार्थकं वाक्यम्।


अधीता: ग्रन्था:

१. पातञ्जलयोगदर्शनम् . डा. नारायणमिश्र वाराणसी. १९७२।
२. यास्कमुनिप्रणीतम् निरुक्तम् श्रीकृष्णदास मुम्बई. १९८२।
३. वैदिकसाहित्येतिहास . चौखम्बा सुरभारती प्रकाशन. २०००।
४. वररुचिनिरुक्तसमुच्चय:. डा युधिष्ठिर: अजमेर २०२।



डा. रङ्गस्वामि राम्.
सहायक प्राध्यापक अपि च
विभागाध्यक्ष:, संस्कृतविभाग:

# मानसोल्लासः

संस्कृतभाषायां विपुलं साहित्यं रचितं प्राचीनैः पण्डितैरनेकेषु शास्त्रेषु। केचन प्रज्ञया विश्वस्य प्रकटीकरणसम्बद्धानि दर्शनानि प्रणिन्युः। अन्ये प्रतिभया काव्यानि निबबन्धुः। अपरे लौकिकप्रयोजनपरान् ग्रन्थान् रचयामासुः। एवं गम्भीरं च विशालं च वाङ्मयं समुद्रोपममुपलभ्यते देववाण्याम्। सकलान् इमान् विषयान् एकत्र समावेशयितुं केचन्महान् भावा विश्वकोशसदृशीः कृतिरपि रचयमासुरिति विशेषः। तादृशीषु कृतिषुरपिलभते प्रथमगणनां "मानसोल्लासः"।

अस्य बृहद्ग्रन्थस्य रचयिता सोमेश्वराख्यो भूपतिः। स शशास कर्णाटवसुन्दराम्। तस्य पिता चालुक्यवंशप्रदीपो विक्रमादित्य अस्य प्रतापं प्रभावं प्रकर्षं च बिल्हणकविः विक्रमाङ्कदेवचरितम् इति प्रतिते महाकाव्ये वर्णयामास। विक्रमादित्यस्य शासनकालः क्रिस्तशकानुसारेण १०७६ तः ११२७ तमवर्षपर्यन्त इति इतिहासकारा वदन्ति। अस्य राजधानी कल्याणनगरी तदा ख्याततमासीत्।

"नासीदस्ति भविष्यति क्षितितले कल्याण तुल्यं पुरम्"

इति सा वर्णिता। विक्रमादित्यस्य सुतः सोमेश्वरः मानसोल्लासस्य कर्ता। अस्य ग्रन्थस्यापरं नामदेयम् अभिलाषितार्थ-चिन्तामणिरिति। पुष्पिकासु नामद्वयमपि उपलभ्यते यथा-

" इति श्रीमहाराजाधिराजसत्याश्रयकुलतिलक चालुक्याभरण श्रीमद्भूलोकमल्ल श्री सोमेश्वर देवविरचिते मानसोल्लासेऽभिलषितार्थचिन्तामणौ राज्यप्राप्तेर्हेतूपायकथनेन प्रथमं प्रकरणम्। इति।

ग्रन्थान्ते केचित्सन्ति श्लोका ये तत्पठनफलं वदन्ति। यथा:

इदं शृणोति यः शास्त्रं तस्य धर्मे मतिर्भवेत्।
कौशलं चार्थशास्त्रेषु राजनीतिरभीप्सिता॥
सेवायां दक्षता चैव साहित्ये नैपुणी तथा।
तर्केषु पाटवं सम्यक्छन्दोऽलङ्कारवेदिता॥
वैदग्ध्यं शास्त्रविद्यायां गजाश्वारोहणज्ञाता।
विज्ञानं मल्लविद्यायां युद्धज्ञानं तथैव च॥
सङ्गीतविद्याकौशल्यं जायते नात्र संशयः।
कामधेनुरिदं शास्त्रं मानसोल्लाससंज्ञितम्॥
नास्त्यनेन समं शास्त्रं सर्ववस्तुप्रकाशने।
ब्राह्मणो लभते ज्ञानं क्षत्रियो राज्यमाप्नुयात्॥
वैश्यो विभवमत्यर्थं शूद्रो वृत्तिं तथा सुखम्। इति।

अस्मिन् ग्रन्थे पञ्च प्रकरणानि भवन्ति। प्रतिप्रकरणं विंशतिरध्यायाः। प्रत्यध्यायम् भिन्नो विषयः प्रतिपाद्यते। एवं विषयशतमत्र सविस्तारं निरूपितमिति ज्ञेयम्।

असत्यवर्जनम् , परद्रोहवर्जनम् , अगम्यवर्जनम् , अभक्ष्यवर्जनम् , असूयवर्जनम् , पतितसङ्गवर्जनम् , क्रोधवर्जनम् , आलस्यतिवर्जनम् , दानम् , प्रियवचनम् , इष्टापूर्तम् , अशेषदेवताभक्तिः , गोविप्रतर्पणम् , पितृतर्पणम् , अतिथिपूजनम् , गुरुशुश्रूषा , तपः तीर्थस्नानम् , वैद्यः शरणागतरक्षणम् , स्वामी , अमात्यः राष्ट्रम् , कोशः , दुर्गः , बलम् , सुहृत् , प्रभुशक्तिः , उत्साहशक्तिः , सन्धिः , विग्रहः , यात्रा , आसनम् , आश्रयः , द्वैधीभावः , साम , भेदः , दानम् , दण्डः , गृहभोगः , स्नानम् , पादुका , ताम्बूलम् , विलेपनम् , वस्त्रम् , माल्यम् , भूषणम् , आसनम् , चामरम् , आस्थानम् , पुत्रः , अन्नम् , पानीयम् , पादाभ्यङ्गम् , यानम् , छत्रम् , शय्या , धूपः , स्त्रीभोगः , शास्त्रविनोद , गजवाह्याली , तुरगवाह्याली , अङ्कः , मल्लः , कुक्कुटः , लावकः , मेषः महिषाः पारावत , सारमेयः , श्येनः , मत्स्यः , मृगया ( रातेषां विनोदः ) गीतविनोदः , नृत्यविनोदः , कथाविनोदः , चमत्कारविनोदः , भूधरक्रीडा , वनक्रीडा , आन्दोलनक्रीडा , मत्स्यक्रीडा , सेचनक्रीडा , जलक्रीडा , शाद्वलक्रीडा , वालुकक्रीडा , ज्योत्स्नक्रीडा , मदिरपानक्रीडा , प्रहेलिकाक्रीडा , चतुरङ्गक्रीडा , पाशकक्रीडा , वराटिकक्रीडा , फणिदाक्रीडा , पञ्चिकाक्रीडा , तिमिरक्रीडा , वीरक्रीडा , प्रेमक्रीडा सुरतक्रीडा , इति शतं विषयाः ग्रन्थेऽस्मिन् दृश्यते ।

ग्रन्थादौ सोमेश्वरो गणेश्वरं सरस्वतीं, महेश्वरं कृष्णं ब्राह्मणं शक्रं सूर्यं मन्मथञ्च नमस्कृत्य प्रतिपादनम् आरभते ।

चालुक्य वंशतिलक: श्री सोमेश्वर भूपति: ।
कुरुते मानसोल्लासं शास्त्रं विश्वोपकारकम् ॥
शिक्षक: सर्ववस्तूनां जगदाचार्यपुस्तक: ।
अभ्यस्योऽयं प्रयत्नेन सोमभूपेन निर्मित: ॥ इति ।

अत्र केचनाध्याया अतीव ह्रस्वा: । आत्मस्तुतिवर्जनाध्याये एक एव श्लोक विद्यते । केचनाध्याया: सुदीर्घा: । गीतविनोदध्याये सप्तषष्ठ्यधिकपञ्चशतश्लोका: (५६७) सन्ति ।

राज सर्वेषु धर्मेषु सर्वासु देवतासु च समानां भावनां धारयेत् प्रजानां कस्मिंश्चित् समुदाये न कुर्यादिति ग्रन्थकर्तुर्दृढ: सिद्धान्त: । स वदति ?

अन्येषामपि देवानां निन्दां द्वेषञ्च वर्जयेत् ।
देवं देवकुलं दृष्ट्वा नमस्कुर्यान्न लङ्घयेत् ॥ इति ।

वैधके सङ्गते क्रीडायां विनोदे भोजने च विशिष्टान् विषयान् प्रतिपादयति सोमेश्वर: । तेषु शास्त्रेषु तस्य प्राविण्यमासीदिति भाति । कवितायां तस्य प्रावीण्यन्तु नि:सन्देहम् । तेन हि विक्रमाङ्काभ्युदयं स्वयं विरचितवान् ।

चतुर्थप्रकरणे षोडशाध्याये छन्दसां लक्षणानि निरूपितानि ग्रन्थकृता। तत्र दत्तानि बह्न्युदाहरणानि भावयामः। तेषां चारुतां परिचाययितुं द्वित्राण्यत्र दीयन्ते।

हेतवे सर्वसिद्धीनां कल्मषक्षयहेतवे।
भवब्धिसेतवे तस्मै नमस्ताक्ष्यैककेतवे॥

प्राणौ सन्ततमच्युतार्चनकृते पुष्पवाचायग्राहः।
श्रीमन्माधवपादपद्मयुगलध्यानविधानं दृशोः॥
कृष्णाराधनवासना च मनसि प्राद्भूतहर्षो द्रुमे।
भूयात् केशव केशवेति वचासि प्रौढः प्रलापो मम॥

वृन्दं वृन्दारकाणां स्वयमतिलमरं दुप्तदैत्येन्द्रहस्तात्।
पीयूषं येन जह्रे स्फुटकपटवधूवेषवैदग्ध्यभाजा॥
स श्रेयः प्राप्तिमूलं दुरिततृणवनप्लोषिसप्तार्चिरर्चि-
र्युष्मान् पुष्णातु लक्ष्मीपतिरखिलजगद्वन्दनीयो मुकुन्दः॥

सोमेश्वरः कर्णाटदेशं शशासेत्यवोचाम। अतस्तस्य कन्नडभाषायामपि पाण्डित्यमासीदित्यत्र नाश्चर्यम्। कन्नडपद्यान्यपि स उदाहरति। राजान एवं विद्वत्त्वञ्च कवित्वञ्च प्राप्तवन्त आसन्निति महतः प्रमोदस्य स्थानम्। मानसोल्लासस्याध्ययनेन नानाशास्त्रप्रावीण्यं लभते इति ग्रन्थकृदुक्तं सत्यमेव।

मानसोल्लासस्य काञ्चन लिपिकारो रामनामा यादवभूपति सन्तोषाय प्रतिलिपिं कृत्वा तत्कालं सूचयति । यथा -

स्वस्ति श्रीनृपशालिवाहनशके नेत्रङ्क·तिथ्युन्मिते
प्रान्त्ये मासि सिते त्रयोदशतिथौ पुष्ये शनेर्वासरे ।
श्रीमद्यादवराजभूपतिमुदे खेर्डान्वयोऽलीलिखद्
रामः सत्कृतिराजमानससमुल्लासाभिधं पुस्तकम् ॥

डा. रम्. रङ्गस्वामि.
सहायक प्राध्यापक च विभागाध्यक्षः
संस्कृत विभागः सह्याद्रि -








-ಪೂಜಾ ವಿ.ಕೆ.





"A negative mind will never give you a positive life."
-Budha.

Meghana. K.T.
II B.Sc 'D' Section



ಭಗತ್ ಸಿಂಗ್.....

Soumya. H





-ಸುಮ ಎಸ್.ಆರ್.
ತೃತೀಯ ಬಿ.ಎಸ್ಸಿ.

## پسندیدہ اشعار

عرشیہ تاج، بی۔ایس۔سی سال دوم

آئینہ کیوں نہ دوں کہ تماشا کہیں جسے
ایسا کہاں سے لاؤں کہ تجھ سا کہیں جسے
مرزا غالبؔ

آگاہ اپنی موت سے کوئی بشر نہیں
سامان سو برس کا ہے پل کی خبر نہیں
حیرتؔ الہ آبادی

ابھی نہ چھیڑ محبت کے گیت اے مطرب
ابھی حیات کا ماحول خوش گوار نہیں
ساحرؔ لدھیانوی

انداز اپنا دیکھتے ہیں آئنے میں وہ
اور یہ بھی دیکھتے ہیں کوئی دیکھتا نہ ہو
نظامؔ رامپوری

اپنے چہرے سے جو ظاہر ہے چھپائیں کیسے
تیری مرضی کے مطابق نظر آئیں کیسے
وسیمؔ بریلوی

بہت پہلے سے ان قدموں کی آہٹ جان لیتے ہیں
تجھے اے زندگی ہم دور سے پہچان لیتے ہیں
فراقؔ گورکھپوری

☆... دوران لیکچر اگر آپ کو کوئی بھی بات یا پوائنٹ سمجھ میں نہیں آرہا تو اس سے متعلق اپنے ٹیچر سے فوراً سوال کریں۔ اگر آپ پہلی قطار میں بیٹھیں ہیں اور ٹیچر کی نظروں میں بھی ہیں، تو آپ کے چہرے کے تاثرات کو دیکھ کر استاد کو اس بات کا فوراً ادراک ہو گا کہ ان کے لیکچر میں آپ کسی بات کو ٹھیک طرح سے سمجھ نہیں پا رہے ہیں۔ اگر کلاس کے دوران کسی وجہ سے سوال نہیں پوچھ پا رہے، تو آپ اس پوائنٹ کو نوٹ کر لیں اور کلاس ختم ہو جانے کے بعد اپنے ٹیچر سے سوال پوچھ کر اپنی الجھن کو ضرور رفع کریں۔ یہ ضروری ہے کہ دوران کلاس اپنی اسٹڈی میں مکمل توجہ رکھی جائے۔

☆... ایک اچھا طالب علم وہ ہوتا ہے جو نہ صرف اپنے تعلیمی ادارے میں بلکہ گھر پر بھی اپنی تعلیم کو پورا وقت دیتا ہے۔ اس مقصد کے لئے گھر کے کسی ایسے حصے کا انتخاب کیا جا سکتا ہے، جہاں شور شرابہ اور کسی قسم کی دخل اندازی نہ ہو۔ مختلف طالب علم پڑھائی کے دوران کسی دوسری سرگرمی میں بھی مصروف رہتے ہیں جو کہ غلط ہے گھر والوں کو بھی اس بات کا بہ خوبی احساس دلایا جائے کہ وہ دوران اسٹڈی آپ کو بالکل ڈسٹرب نہ کریں۔

☆... یہ ضروری ہے کہ اپنے تعلیمی ادارے میں صرف کورس یا نصاب کی کتابوں اور اساتذہ کے لیکچر پر ہی انحصار نہ کیا جائے بلکہ متعلقہ مضمون کی مناسبت سے انٹرنیٹ یا لائبریری میں موجود دوسری کتابوں سے ضرور استفادہ کیا جائے، اس سے آپ کی تعلیمی استعداد میں اضافہ ہوگا اور عام معلومات بھی بڑھیں گی۔

☆... کلاس میں ہونے والے ماہانہ یا پھر سالانہ امتحان سے پہلے اس کی تیاری کے لئے ایک ایک سوال نامہ آپ خود اپنے لئے تیار کریں اور بڑی ایمانداری سے امتحان دیں، کیوں کہ خود کو جانچنے کا یہ سب سے بہترین طریقہ ہے۔ اس عمل سے نہ صرف امتحان کی تیاری شاندار ہو گی بلکہ آپ کا اعتماد بھی بڑھے گا۔



Scanned with OKEN Scanner

**قابلیت:** اپنے نصاب کے علاوہ دیگر پروجیکٹس یا تعمیری سرگرمیوں میں دلچسپی اسے اچھا طالب علم ثابت کر سکتی ہے۔ ایک اچھا طالب علم بننے کے لئے مندرجہ ذیل باتوں پر عمل کرنا ازحد ضروری ہے۔

☆... ایک طالب علم کی پڑھائی پر بہت سارے اخراجات اٹھتے ہیں، اس لئے یہ ضروری ہے کہ ان پیسوں کو ضائع نہ کیا جائے اور اپنی پڑھائی میں دلچسپی پیدا کی جائے۔ دوران تعلیم ہر ممکن طور پر یہ کوشش کریں کہ آپ اپنی کلاس سے غیر حاضر نہ ہوں۔ روزانہ کلاس لینے والا طالب علم کبھی ٹیچر کے لیکچر کو مس (چھوڑنا) نہیں کرتا اور وہ اپنی کلاس میں اپنے اساتذہ کے ساتھ اپ ٹوڈیٹ رہتا ہے۔ صرف حاضری لگانے کے لئے روزانہ کلاس نہ لی جائے بلکہ اس کا مقصد تعلیم اور کچھ نہ کچھ سیکھنا ہونا چاہیے۔

☆... وہ طالب علم جن میں خود اعتمادی کی کمی ہوتی ہے اور وہ کسی سے بھی بات کرتے وقت گھبراتے ہیں یا اگر ٹیچر کلاس میں ان سے کوئی سوال پوچھ لے تو ان کے ہاتھ پاؤں کانپنے لگتے ہیں، ان سب کی بنیادی وجہ ان کا شرمیلا پن اور اعتماد کی کمی ہوتا ہے۔ ایسے طالب علموں کے لئے ضروری ہے کہ وہ کلاس میں سب سے پہلی قطار میں بیٹھیں ابتداء میں اپنے اس عمل میں دشواری کا سامنا کرنا پڑ سکتا ہے لیکن ایک ذرا سی کوشش سے وہ اپنی اس خامی پر قابو پا سکتے ہیں۔

☆... کلاس میں سب سے پہلی قطار میں بیٹھنے سے طالب علم کی مکمل توجہ صرف اس کی تعلیم پر ہوتی ہے۔ وہ ٹیچر کی نظروں کے سامنے رہتا ہے، وہ باآسانی سب سن سکتا ہے اور بورڈ پر لکھا جانے والا مواد آسانی سے دیکھ سکتا ہے۔ اپنے ٹیچر کے سامنے رہنے سے آپ کے اعتماد میں اضافہ ہوگا اور جب ٹیچر کو بھی اس بات کا اندازہ ہو گا کہ آپ کی ساری وجہ صرف اپنی اسٹڈی پر ہے تو پھر وہ آپ پر زیادی توجہ دینے لگے گا کیونکہ اپنی پڑھائی میں دلچسپی لینے والے طالب علم سے اساتذہ ضرور متاثر ہوتے ہیں۔



Scanned with OKEN Scanner

# اچھا طالب علم کیسے بنا جائے

ڈاکٹر سید ثناء اللہ
اسوسئیٹ پروفیسر، شعبۂ اردو
سہیادری سائنس کالج، شیموگہ

پرائمری سے اعلیٰ تعلیم تک کے تمام مراحل میں پڑھنے والے کی ساری توجہ اس بات پر ہوتی ہے کہ وہ ایک اچھا اور قابل طالب علم کیسے بن سکتا ہے؟

یہ بات وہ بچے یا نوجوان سوچتے ہیں جنہیں پڑھنے میں نہ صرف دلچسپی ہوتی ہے بلکہ وہ زندگی میں کچھ کر دکھانے یا بننے کی لگن سے مالا مال ہوتے ہیں۔ علم کی اہمیت اور افادیت سے کسی دور میں بھی انکار نہیں رہا، ایک باشعور اور ذہین طبقہ ہمیشہ اس امر کی حمایت کرے گا کہ تعلیم انسان کے لئے انتہائی ضروری ہے۔ وہ نوجوان یا بچے جو اپنی پڑھائی میں آگے بڑھنا چاہتے ہیں اور اپنی کلاس کا سب سے بہترین سٹوڈنٹ بننا چاہتے ہیں، ان کے لئے کچھ آزمودہ نسخے پیش کئے جا رہے ہیں، جن پر عمل کر کے ایک اچھا طالب علم ضرور بنا جا سکتا ہے۔

رویہ: ایک طالب علم اپنے رویے سے یہ بات بتاتا ہے کہ وہ کتنا اچھا طالب علم ہے، اس کی سب سے اہم خوبی یہ ہوتی ہے کہ وہ نہ صرف اپنے نصاب میں دلچسپی رکھتا ہے بلکہ وہ دوسرے موضوعات کی کتابیں بھی پڑھنا چاہتا ہے۔

تعلیمی دلچسپی: کسی بھی اچھے طالب علم کی یہ سب سے اہم خوبی ہوتی ہے کہ اس کے اندر پڑھائی میں دلچسپی کا معیار کس حد تک ہے۔ صحیح تلفظ کے ساتھ ریڈنگ، الفاظ کا ذخیرہ، لکھنے میں دلچسپی، کلاس میں مکمل اعتماد کے ساتھ گفتگو اور اپنی بات کو دوسرں تک پہچانے کا فن، یہ تمام وہ نسخے ہیں جن پر ایک اچھے طالب علم کو پورا اترنا چاہیئے۔



Scanned with OKEN Scanner




ಬೋಧಕ ಸಿಬ್ಬಂದಿ




ಬೋಧಕೇತರ ಸಿಬ್ಬಂದಿ

Scanned with OKEN Scanner

# SAHYADRI SCIENCE COLLEGE

(A Constituent Autonomous College of Kuvempu University)

## Core Values of Sahyadri Science College (Autonomous)

- Global Outlook – Regional Focus.
- Commitment to promote Creativity in Basic and Applied Sciences.
- Conservation of Bio –Diversity and Cultural Diversity.
- Humanism and Hostilic View.

## Vision

Sahyadri Science College (Anthonomus) Shall strive to become a center of excellence in teaching and promoting Research in basic and Applied sciences to provide high quality value – based under graduate and post graduate education to meet the regional and global challenges

## Mission

Sahyadri Science College (Autonomous) is committed to :

- Foster Creativity in Teaching, Learning and Research of basic and applied sciences to build a knowledge base and promote quality initiatives
- To make science Education attractive and accessible
- Develop scientific knowledge to meet the societal needs.



**Sahyadri Science College (Autonomous)**
Shivamogga-577 203, Karnataka
Phone : 08182-240435, Fax : 08182-240138
E-mail : sahyadriscience@gmail.com
website : www.sahyadriscienceccollege.org

Scanned with OKEN Scanner